ನಿಯಮ 159ರ ಮೇರೆಗೆ ಪ್ರಸ್ತಾವನೆ

ವಿಷಯ:- ತಮಿಳುನಾಡಿಗೆ 5 ಟಿ.ಎಂ.ಸಿ.ನೀರನ್ನು ಬಿಡಲು ಸರ್ಕಾರ ಕೈಗೊಂಡ ನಿರ್ಧಾರವನ್ನು ತಿರಸ್ಕರಿಸುವ ಬಗ್ಗೆ.

MR.SPEAKER:- Now, do we take up the motion? It is in relation to the admissibility of the motion. You can speak all things under the sun. There is no restriction on that. You can make use of that cover.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ:- ಮಾನ್ಯ ಅಧ್ಯಕ್ಷರೇ, It is pertaining to discussion.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರ):- ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ಮೊದಲಬಾರಿಗೆ ನಮ್ಮ ಪ್ರತಿಪಕ್ಷದ ಎಲ್ಲಾ ಮುಖಂಡರುಗಳು ಒಂದಾಗಿ, ತಾತ್ವಿಕವಾಗಿ ಅನೇಕ ಭಿನ್ನಾಭಿಪ್ರಾಯಗಳು ನಮ್ಮಲ್ಲಿ ಇದ್ದರೂ ಕೂಡ ರಾಜ್ಯದ ರೈತರಿಗೆ ವಿಶೇಷವಾಗಿ.

ಅಧ್ಯಕ್ಷರು:- ಇರಿಗೇಷನ್ ಮಿನಿಸ್ಟರ್ ಇಲ್ಲವೇ?

ಶ್ರೀ ಹೆಚ್.ಎನ್.ನಂಜೇಗೌಡ:- ಮುಖ್ಯಮಂತ್ರಿಗಳೂ ಇರಬೇಕು.

MR.SPEAKER:- The Chief Minister had sought my permission. ಪ್ರೋಗ್ರಾಂಗೆ ಹೋಗಿ ಬರುತ್ತೇನೆಂದರು. But Irriagtion Minister is more important. ತಾವು ಮಾತನಾಡುತ್ತಿರಿ. The deputy Chief Minister will make notes. I will ask the Irriagation Minister to be present here.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಹೇಳುತ್ತಿದ್ದೆ, ಪ್ರತಿಪಕ್ಷದ ನಾವೆಲ್ಲಾ ಒಂದಾಗಿ ರಾಜ್ಯದ ಹಿತದೃಷ್ಟಿಯಿಂದ ಇವತ್ತು ಕಾವೇರಿ ಜಲಾನಯನ ಪ್ರದೇಶದ ರೈತಸಮೂಹಕ್ಕೆ ದ್ರೋಹ ಮಾಡುವಂತಹ ಒಂದು ಕೆಲಸ ನಾಲ್ಕುಮುಕ್ಕಾಲು ಕೋಟಿ ಜನ ಪ್ರತಿನಿಧಿಸುವಂತಹ ಈ ಮನೆಯ ಕಾರ್ಯಕಲಾಪ ನಡೆಯುವ ಕಾಲದಲ್ಲಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕದ್ದುಮಚ್ಚಿ 5 ಟಿಎಂಸಿ. ನೀರನ್ನು ಕೆಆರ್ಎಸ್‌ನಿಂದ ಮತ್ತು ಕಪಿಲಾ ಜಲಾಶಯಗಳಿಂದ 8-7-95ರ ಬೆಳಗಿನ ಜಾವದಿಂದಲೇ ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ

(ಮಾನ್ಯ ಉಪಾಧ್ಯಕ್ಷರು ಶ್ರೀಚಂದ್ರಶೇಖರ ಮಾಮನಿರವರು ಪೀಠವನ್ನಲಂಕರಿಸದರು)

ನೀರು ಬಿಡುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ಅನಿವಾರ್ಯವಾಗಿ ನಿಯಮ 159ರ ಕೆಳಗೆ ಸಾರ್ವಜನಿಕ ಹಿತದೃಷ್ಟಿ ವಿಶಯ ಬಗ್ಗೆ ನಾನೂ, ಹಿರಿಯರಾದಂಥ ಮಲ್ಲಿಕಾರ್ಜುನಖರ್ಗೆ,

ಶ್ರೀ ಯು.ಆರ್.ಸಭಾಪತಿ, ವಾಟಾಳ್‌ನಾಗರಾಜ್‌ರವರು, ಕೆ.ಎಸ್.ಪುಟ್ಟಣ್ಣಯ್ಯನವರು, ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಶ್ರೀ ವೀರಪ್ಪಮೊಯ್ಲಿ ಶ್ರೀ ವೈ.ರಾಮಕೃಷ್ಣ, ಶ್ರೀ ಎಚ್.ಎಸ್.ನಂಜೇಗೌಡ, ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ಈಶ್ವರಪ್ಪ ಹಾಗೂ ಶ್ರೀಮತಿ ಪ್ರಮಿಳಾ ನೇಸರ್ಗಿಯವರು ಎಲ್ಲರ ಸಹಿ ಇರುವಂತಹ ಪ್ರಸ್ತಾವನ್ನು ನಾವು ತಂದಿದ್ದೇವೆ. ''ರಾಜ್ಯದಲ್ಲಿ ಎಂದಿನಂತೆ ಬರಬೇಕಾಗಿದ್ದ ಮುಂಗಾರು ಬಾರದಿರುವುದರಿಂದ ಕಾವೇರಿ ಜಲಾನಯನ ಪ್ರದೇಶದ ರೈತರು ಬಹಳ ತೊಂದರೆಗೊಳಗಾಗಿದ್ದು ಪರಿತಪಿಸುತ್ತಿದ್ದರೂ ತಮಿಳುನಾಡಿಗೆ 5 ಟಿಎಂಸಿ ನೀರನ್ನು ಬಿಡಲು ಸರ್ಕಾರ ತೆಗೆದುಕೊಂಡ ನಿರಂಕುಶ ನಿರ್ಧಾರವನ್ನು ಈ ಸದನವು ತಿರಸ್ಕರಿಸುತ್ತದೆ'' ಎಂಬ ಪ್ರಸ್ತಾವನೆಯನ್ನು ಒಂದು ರೀತಿ ಅಧ್ಯಕ್ಷರು ಒಪ್ಪಿಕೊಂಡೇ ಇಲ್ಲಿ ಇಟ್ಟಿದ್ದೇವೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಪ್ರತಿಪಕ್ಷದ ಮುಖಂಡರ ಪರವಾಗಿ ನಾನು ವಂದನೆಯನ್ನು ಸಲ್ಲಿಸುತ್ತಿದ್ದೇನೆ. ನನಗೆ ಜ್ಞಾಪಕ ಇರುವ ಪ್ರಕಾರ ಕಳೆದ ಹತ್ತಾರು ವರ್ಷದಿಂದ ಈಚೆಗೆ ಈರೀತಿ ಪ್ರಸ್ತಾವನೆ ಇಡುವಂಥ ಒಂದು ಸಂದರ್ಭ ನಮಗೆ ಒದಗಿ ಬಂದಿರಲಿಲ್ಲ. ನಾವು ವಿನಂತಿ ಮಾಡಿದೆವು, ನಮ್ಮ ಜಲಾಶಯಗಳಲ್ಲಿ ನೀರಿಲ್ಲ ಕ್ಯಾಚ್ಮೆಂಟ್ ಏರಿಯಾದಲ್ಲಿ ಮಳೆಯಿಲ್ಲ ಈಗಿರುವ ನೀರನ್ನು ಬಿಡಲು ಏನು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಏಕಪಕ್ಷೀಯವಾಗಿ, ಇದನ್ನು ನಿಲ್ಲಿಸಿ, ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಿ, ಮಾತುಕತೆ ಮೂಲಕ ನಿಮಗೆ ಯಾವ ವಿಶೇಷ ಸಂದರ್ಭ ಒದಗಿಬಂದಿತು ಈ 5 ಟಿಎಂಸಿ ನೀರು ಬಿಡುವುದನ್ನು ನಮಗೆ ಮನವರಿಕೆ ಮಾಡಿ, ಸಧ್ಯಕ್ಕೆ ಈ ನೀರು ಬಿಡುವುದನ್ನು ನಿಲ್ಲಿಸಬೇಕೆಂಬ ಒತ್ತಾಯವನ್ನು ಸದನದಲ್ಲಿ ಒಂದು ದಿವಸ ಪೂರ್ಣ ಪ್ರಶ್ನೋತ್ತರವನ್ನೂ ಬದಿಗೊತ್ತಿ ಧರಣ ಕೂತು ಸಮಬಲ ಹೋರಾಟ ಮಾಡುವಂಥ ಪರಿಸ್ಥಿತಿ ನಮಗೆ ಒದಗಿ ಬಂದಿತು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇರುವಂತಹ ಪರಿಸ್ಥಿತಿ, ನಿಮಗೆ ಅಜೀರ್ಣವಾಗುವಷ್ಟು ಬಹುಮತವನ್ನು ನಾಡಿನ ಜನ ಏನೂ ನಿಮಗೆ ಕೊಟ್ಟಿಲ್ಲ. ನಾಲ್ಕು ಜನ ನಿಮ್ಮ ಕಡೆ ಜಾಸ್ತಿ ಇರಬಹುದು, ಇಷ್ಟು ದೊಡ್ಡ ನಾಡಿನ ಜನರ ಪ್ರತಿನಿಧಿಗಳಾಗಿ, ಈ ವಿಷಯವನ್ನು ಪ್ರಸ್ತಾಪಿಸಿದಾಗ ಆಡಳಿತ ಪಕ್ಷದ ನಿಮ್ಮ ಸದಸ್ಯರಿಗೂ ಸಹ ಈವತ್ತು ಬರಗಾಲದ ಛಾಯೆ ರಾಜ್ಯದಲ್ಲಿ ಮೂಡಿರುವ ಕಾಲದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಬೀಳದಿರುವ ಕಾಲದಲ್ಲಿ ಈ ತೀರ್ಮಾನ ಸಾಧುವಲ್ಲವೆಂದು ಅವರಿಗೆ ಅನ್ನಿಸಿದಾಗ ಯಾವುದೋ ಒಂದು ಒತ್ತಡಕ್ಕೆ ಮುಲಾಜಿಗೆ ಮಣಿದು ರಾಜ್ಯದ ಜನರ ಹಿತ ಕಡೆಗಣಿಸುವಂತಹ ಒಂದು ಪ್ರಯತ್ನ ಚುನಾಯಿತ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಒಂದು ರೀತಿ ಸರ್ವಾಧಿಕಾರಿಯಂತೆ ಇಲ್ಲಿ ಆಡಳಿತ ನಡೆಸಬಹುದೆಂಬ ಭ್ರಮೆಯಲ್ಲಿ ತಾವು ಇವತ್ತು ಮುಂದೆಹೋಗುವ ಪ್ರಯತ್ನ ಮಾಡಿದ್ದೀರಿ. ಅಧ್ಯಕ್ಷರೇ, ಇವತ್ತು ನನಗೆ ಮಾತನಾಡಲು ಸಮಾಧಾನವಿಲ್ಲ. ರಾಜ್ಯದ ಮುಖ್ಯಮಂತ್ರಿಗಳು ನಿನ್ನೆ ಮಾತನಾಡುವ ಕಾಲದಲ್ಲಿ ಪ್ರತಿಪಕ್ಷದವರಿಗೆ ಧರಣಿ ಸತ್ಯಾಗ್ರಹ ಮಾಡುವಂತಹ ಚಟ ಇದೆ ಎಂದು ಕಾಣುತ್ತದೆ ಜನರ ಹಿತಕ್ಕಿಂತ ಬದಲಾಗಿ ಎಂಬ ಮಾತೂ ಸಹ ಹೇಳುವ ಪ್ರಯತ್ನ ಮಾಡಿದರು. ಅಧ್ಯಕ್ಷರೇ, ನೀರಾವರಿ ಸಚಿವ ನಾಗೇಗೌಡರು ಹಿರಿಯರಿದ್ದಾರೆ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ: ಸಪೋಸ್ ನಿನ್ನೆ

ನಾವು ಪ್ರಶ್ನೋತ್ತರವನ್ನು ರದ್ದುಪಡಿಸಲು ಆಗ್ರಹಮಾಡಿ ಧರಣಿ ಕುಳಿತು ನಮ್ಮ ಜಲಾಶಯದಲ್ಲಿ ನೀರಿಲ್ಲದ ಕಾಲದಲ್ಲಿ ತಮಿಳಿನಾಡಿಗೆ 5ಟಿಎಂಸಿ ನೀರು ಬಿಡುವ ಏಕಪಕ್ಷೀಯ ನಿರ್ಧಾರ ತೆಗೆದುಕೊಂಡಿರುವುದರ ಬಗ್ಗೆ ಪ್ರತಿಭಟಿಸದೇ ಇದ್ದರೆ ದೇಶದ ಜನರಿಗೆ ಏನು ಭಾವನೆ ಬರುತ್ತಿತ್ತು? ಇವತ್ತು ತಮಿಳುನಾಡು ಬೆದರಿಸಿ ಸುಪ್ರೀಂಕೋರ್ಟ್ ಮುಂದೆ ನಾವು ಹೋಗುತ್ತೇವೆಂದು ಹೇಳುತ್ತಿದ್ದ ಹಾಗೇನೆ 5ಟಿಎಂಸಿ ನೀರು ಬಿಡುತ್ತೀರಿ, ನಾಳೆ ಅವರೇನು 15 ಟಿಎಂಸಿ ನೀರು ಬಿಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ, ನಾಗೇಗೌಡರು ನೀರಾವರಿ ಸಚಿವರಾಗಿ ಅವರ ಹೇಳಿಕೆ ಬಗ್ಗೆ ಅತ್ಯಂತ ದುಃಖದಿಂದ ಆ ವಿಷಯಕ್ಕೆ ಬರುತ್ತೇನೆ, ಅವರು ಹೇಳಿಕೆ ಒಂದು ಪರಿಣಾಮ ತಮಿಳುನಾಡು ಸುಪ್ರೀಂಕೋರ್ಟಿನಲ್ಲಿ ನಮ್ಮ ವಿಧಾನಸಭೆ ಪರಿಷತ್ತುಗಳಲ್ಲಿ ಅದನ್ನು ಬಿಡದೆ ನಮ್ಮನ್ನು ಆಟವಾಡಿಸುತ್ತಿದ್ದಾರೆ ಎಂಬುದಕ್ಕೆ ಅನುಕೂಲ ಆಗುವ ರೀತಿಯಲ್ಲಿ ಮೊದಲ ಬಾರಿಗೆ ಈ ನಾಡಿನ ರೈತರ ಹಿತವನ್ನು ಕಡೆಗಣಿಸಿ ಯಾವುದೋ ಮುಲಾಜಿಗೆ ಸಿಕ್ಕಿಕೊಂಡು ನೀರಾವರಿ ಸಚಿವರು ಇಲ್ಲಿ ಅಲ್ಲಿ ಏನು ಹೇಳಿಕೆ ಕೊಟ್ಟಿದ್ದಾರೆ ಇದನ್ನು ನಾಡಿನ ಜನ ಒಪ್ಪಬೇಕೇನು? ನಿನ್ನೆ ಧರಣಿ ಮಾಡದೇ ಇದ್ದರೆ ನಾಡಿನ ರೈತರಿಗೆ ಕಾವೇರಿ ಜಲಾಯನದ ಪ್ರತಿನಿಧಿಗಷ್ಟೇ ಅಲ್ಲ ಅವರಿಗೇನು ಉತ್ತರ ನೀವು ಕೊಡುತ್ತೀರಿ? ಬಹುಶಃ ನಿನ್ನೆ ನಾವೇನು ನಿಲುವು ತೆಗೆದುಕೊಂಡೆವು ಆ ಸಂದರ್ಭದಲ್ಲಿ ಮಾತುಕತೆಗೆ ಮುಂದಾಗೋಣ, ಪ್ರತಿಪಕ್ಷದವರ ಅಪೇಕ್ಷೆಯನ್ನು ತಡೆಹಿಡಿಯೋಣ ನಂತರ ಕಾರ್ಯಪ್ರವೃತ್ತರಾಗೋಣ ಎಂದು ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಹೇಳಬೇಕಾಗಿತ್ತು. ನಿಮ್ಮ ಸಭೆಯಲ್ಲಿ ಏನು ತೀರ್ಮಾನ ತೆಗೆದುಕೊಂಡಿರಿ? ಪ್ರಧಾನಿಯವರ ಒತ್ತಡಕ್ಕೆ ಮಣಿದು ಏನು ಆದೇಶ ಬಂದಿದೆ. ರಾಷ್ಟ್ರೀಯ ರಂಗದ ಸರ್ಕಾರ ನೀವು ನಡೆಸುತ್ತಿದ್ದೀರಿ. ತಮಿಳುನಾಡಿನ ಆಶೀರ್ವಾದ ಇಲ್ಲದಿದ್ದರೆ ನಿಮಗೆ ಆಗುವುದಿಲ್ಲವೆಂಬ ಭಯದಿಂದ. ತಮಿಳನಾಡಿಗೆ 5 ಟಿಎಂಸಿ ನೀರು ಬಿಟ್ಟಿದ್ದೀರಿ. ಇದೊಂದು ಅಕ್ಷಮ್ಯ ಅಪರಾಧ. ಇದು ಈ ನಾಡಿನ ಜನರಿಗೆ ಮಾಡುತ್ತಿರುವ ದ್ರೋಹ. ಅನಿವಾರ್ಯವಾಗಿ ನಿಯಮ 159ರ ಮೇಲೆ ಇದನ್ನು ಖಂಡನೆ ಮಾಡಿ ನಿರ್ಣಯ ಇಡುವಂತಹ ವಿಶೇಷ ಸಂದರ್ಭ ನಮಗೆ ಬಂದಿದೆ. 8ನೇ ತಾರೀಖು ಪ್ರತಿಪಕ್ಷದ ನಾಯಕರ ಸಭೆಯನ್ನು ತಾವು ಕರೆದಿರಿ. ಅಲ್ಲಿ ಏನು ಹೇಳಿದಿರಿ ನಮ್ಮ ಜಲಾಶಯದಲ್ಲಿ ನೀರಿಲ್ಲ ಯಾವ ಕಾರಣಕ್ಕೂ ತಮಿಳುನಾಡಿನ ಒತ್ತಾಯಕ್ಕೆ ಮಣಿಯುವುದಿಲ್ಲ. ಜಲಾಶಯದಲ್ಲಿ ನೀರಿಲ್ಲ ಎಂದು ಈ ರಾಜ್ಯದ ಮುಖ್ಯಮಂತ್ರಿಗಳು ಟಿ.ವಿ. ಸಂದರ್ಶನದಲ್ಲಿ ಇಡೀ ದೇಶದ ಜನರಿಗೆ ಹೇಳಿದರು. 4 ಗಂಟೆಗೆ ಎಲ್ಲಿಂದ ನೀರು ಬಂತು ಜಲಾಶಯಕ್ಕೆ? 4 ಗಂಟೆಗೆ ಹೇಗೆ ತೀರ್ಮಾನ ತೆಗೆದುಕೊಂಡಿರಿ ಏಕಪಕ್ಷಿಯವಾಗಿ? ಬೆಳಗ್ಗೆ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ 4 ಗಂಟೆಗೆ ತೀರ್ಮಾನ ತೆಗೆದುಕೊಂಡು ಬೆಳಗಿನ ಜಾವ ನೀರು ಬಿಡಲು ಪ್ರಾರಂಭವಾಗುತ್ತದೆ. ಯಾರನ್ನು ತೃಪ್ತಿಪಡಿಸುವುದಕ್ಕಾಗಿ? ಇವತ್ತು ಈ ಇಲಾಖೆಯಲ್ಲಿ ಹೆಚ್ಚು ಪರಿಣತಿ ಪಡೆದಿರುವ ನಂಜೇಗೌಡರು ಹಾಗೂ ಖರ್ಗೆಯವರು ಮಾತನಾಡುವವರಿದ್ದಾರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ನೀವು ಹೇಳಬಹುದು, ಮೊನ್ನೆ ಲೋಕಸಭಾ ಚುನಾವಣೆಯಲ್ಲಿ 16 ಸೀಟು ನಾವು ಗೆದ್ದಿದ್ದೇವೆ.

ಜನ ನಮಗೆ ಶೀರ್ವಾದಿಸಿದ್ದಾರೆ, ನಾವೇನು ಮಾಡಿದರೂ ಜನರ ಬೆಂಬಲ ಸಿಗುತ್ತದೆಂಬ ಭ್ರಮೆಯಲ್ಲಿ ಈ ತೀರ್ಮಾನ ತೆಗೆದುಕೊಂಡಿರಿ. ಒಂದು ಮಾತು ಹೇಳಲು ನಾನು ಇಚ್ಛಿಪಡುತ್ತೇನೆ : ಈ ರಾಜ್ಯದ ಮುಖ್ಯಮಂತ್ರಿಗಳಿಗೆ, ನಿಮ್ಮಲ್ಲೇನೋ ಒಂದು ದೊಡ್ಡ ನಂಬಿಕೆ. ಕಳೆದ ನಾಲ್ಕು ತಿಂಗಳಲ್ಲಿ ನಾಡಿನ ಜನರಿಗೆ ಅನೇಕ ಅನ್ಯಾಯಗಳಾಯಿತು. ಸರ್ಕಾರ ಬದುಕಿದ್ದೂ ಸತ್ತಂಥ ಒಂದು ವಾತಾವರಣ ಬಂದಿತ್ತು. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದ್ದವು. ಅವುಗಳ ಬಗ್ಗೆಲ್ಲಾ ನಾವು ಇಲ್ಲಿ ಚರ್ಚೆ ಮಾಡಬೇಕಾಗಿತ್ತು. ಈ ಸದನದ ಕಾರ್ಯಕಲಾಪ ಪ್ರಾರಂಭವಾಗುವುದು ಗೊತ್ತಿದ್ದರೂ ಸಹ ಇಲ್ಲಿ ಚರ್ಚಿಸದೆ 43 ಪರ್ಸೆಂಟ್ ವಿದ್ಯುತ್‌ದರ ಏರಿಸುವ ಮೂಲಕ ಧರಣಿ ಸತ್ಯಾಗ್ರಹಗಳಿಂದ ಕಾರ್ಯಕಲಾಪ ನಡೆಯದಂತೆ ಉಸಿರುಗಟ್ಟುವಂತಹ ಪರಿಸ್ಥಿತಿಗೆ ತಂದವರು ಯಾರು? ಈ ಕಾರ್ಯಕಲಾಪ ನಡೆಯುವ ಕಾಲದಲ್ಲಿ ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ರಾತ್ರೋರಾತ್ರಿ 5 ಟಿಎಂಸಿ ನೀರನ್ನು ಮೆಟ್ಟೂರು ಜಲಾಶಯಕ್ಕೆ ಬಿಟ್ಟು ಈ ಮನೆಯಲ್ಲಿ ಧರಣಿ ಮಾಡುವಂತಹ ಪರಿಸ್ಥಿತಿ ತಂದವರು ಯಾರು?

1.10 ಪಿಎಂ

ನಿಮ್ಮ ಉದ್ದೇಶ ನಿಮ್ಮ ಅಪೇಕ್ಷೆ ಏನು ಇತ್ತು ಎಂದರೆ ನಾವೆಲ್ಲಾ ಒಂದಾಗಿದ್ದೇವೆ ಧರಣಿ ಸತ್ಯಾಗ್ರಹ ಮುಂದುವರಿಯುತ್ತದೆ ಇಲ್ಲಿ ಬಜೆಟ್ಟ ಚರ್ಚೆಯಾಗಿರಲಿಲ್ಲ ಗಿಲೆಟಿನ್ ಹಾಕಿ ಪಾಸ್ ಮಾಡಿಕೊಂಡು 6 ತಿಂಗಳಾದ ಮೇಲೆ ಬರೋಣ ಎಂಬ ಭ್ರಮೆಯಲ್ಲಿ ನೀವು ಇದ್ದಿರಿ. ಅದಕ್ಕಾಗಿ ಪ್ರತಿ ಪಕ್ಷದ ಹಿರಿಯರು ಎಲ್ಲಾ ಇಲ್ಲಿ ಕುಳಿತುಕೊಂಡು ಇದಕ್ಕೆ ಪರಿಹಾರವೇನು ಸರ್ಕಾರ ಮುಂದೆ ಬರುತ್ತಿಲ್ಲ ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಬೇಕಾಗಿದೆ ಅದಕ್ಕಾಗಿ ಈ ಒಂದು ನಿಯಮಾವಳಿಯನ್ನು ಉಪಯೋಗ ಮಾಡಿಕೊಂಡು ಇವತ್ತು ಚರ್ಚೆ ಮಾಡುವಂತಹ ಸಂದರ್ಭ ಬಂದಿದೆ. ನಮ್ಮ ಸ್ನೇಹಿತರು ನೊಂದು ದೂರದಿಂದ ಒಂದು ಮಾತನ್ನು ಏಕೆ ನಮ್ಮ ಪ್ರಧಾನಿಯವರನ್ನು ಮಧ್ಯದಲ್ಲಿ ತರುತ್ತೀರೆನ್ನುವ ಅರ್ಥದಲ್ಲಿ ಅವರು ಹೇಳಿರಬಹುದು. ಇವತ್ತಲ್ಲ ನಾಳೆ ಸತ್ಯ ಸಂಗತಿ ಹೊರಗಡೆ ಬರುತ್ತದೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ 8ನೇ ತಾರೀಖು ನಮ್ಮ ಕಾರ್ಯಕಲಾಪದ ಸಭೆ ಮುಗಿದ ನಂತರ ಪ್ರತಿಪಕ್ಷದ ನಾಯಕರ ಸಭೆಯಾದ ಮೇಲೆ ಕೇಂದ್ರದ ಒಬ್ಬ ಸಚಿವರ ಪ್ರಭಾವ ಈ ರಾಜ್ಯದಿಂದಲೇ ಆಯ್ಕೆಯಾಗಿ ಮಂತ್ರಿಗಳಾಗಿರುವವರ ಪ್ರಭಾವ ಹೆಸರು ಹೇಳುವುದಕ್ಕೆ ಭಯ ಮಾನ್ಯ ಬೊಮ್ಮಾಯಿಯವರು ಮಧ್ಯ ಪ್ರವೇಶ ಮಾಡಿದರು. ದೇಶದ ರಾಜಕೀಯ ಪರಿಸ್ಥಿತಿಯನ್ನು ಮುಖ್ಯ-ಮಂತ್ರಿಯವರಿಗೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಿದರು. ನಮಗೆ ಬಂದಿರುವ ಸುದ್ದಿ ಪ್ರಕಾರ ಪ್ರಧಾನಿಯವರು ನೀರಾವರಿ ಸಚಿವರನ್ನು ನೇರವಾಗಿ ಸಂಪರ್ಕ ಮಾಡಿದರು ಎಂದು ಇದೆ. ಅದು ಅಸತ್ಯವಾದರೆ ಸುಳ್ಳಾದರೆ ತುಂಬ ಸಂತೋಷಪಡುವವನು ನಾನು. ಆದರೆ ಮಾನ್ಯ ನಾಗೇಗೌಡರು ಮಂಡ್ಯ ಜಿಲ್ಲೆಯನ್ನು ಪ್ರತಿನಿಧಿಸುವ ರೈತನ ಮಗನಾದ ಇವರು ಹಿಂದೆ ಏನು ಹೇಳಿದರು

ಎಂಬುದನ್ನು ನೆನಪು ಮಾಡಿಕೊಳ್ಳಬೇಕು. ಮಾನ್ಯ ದೇವೇಗೌಡರು ಇಲ್ಲಿ ಮುಖ್ಯ ಮಂತ್ರಿಯಾಗಿದ್ದಾಗ ಮಾನ್ಯ ಪ್ರಧಾನಿಯವರ ಮಧ್ಯ ಪ್ರವೇಶದಮೇಲೆ, ಸುಪ್ರೀಂ ಕೋರ್ಟಿನ ಆದೇಶದ ಮೇಲೆ ಎಕ್ಸ್‌ಪರ್ಟ್ಸ್ ಇಲ್ಲಿಗೆ ಬಂದು 5-6 ಟಿಎಂಸಿ ನೀರು ಬಿಡಬೇಕೆಂದು ಹೇಳಿದಾಗ ಇದೇ ಮಾನ್ಯ ನಾಗೇಗೌಡರು ರಾಜೀನಾಮೆ ಕೊಡುವವರೆಗೂ ಅಲ್ಲಿ ಕುಳಿತವರು ಹೋದರು. ಒಂದು ಹನಿ ನೀರು ಬಿಡುವುದಕ್ಕಾಗುವುದಿಲ್ಲವೆಂದು ಪ್ರತಿಭಟನೆ ಮಾಡಿದರು ಇಲ್ಲಿ ದಾಖಲೆಗಳು ಇವೆ. ಈಗ್ಯಾಕೆ ಈ ವ್ಯಾಮೋಹ. ನಿಮಗೆ ನಿಮ್ಮ ಕುರ್ಚಿಯ ಆಸೆ ಡೆಲ್ಲಿಯವರಿಗೆ ಅವರ ಕುರ್ಚಿಯ ಆಸೆ ಇಲ್ಲಿನ ಮುಖ್ಯ ಮಂತ್ರಿಗಳಿಗೆ ಅವರ ಕುರ್ಚಿ ಉಳಿಸಿಕೊಳ್ಳುವ ಆಸೆ ಪ್ರತಿ ಪಕ್ಷದವರು ನಿಮಗೆ ಬೆಂಬಲಿಗರಾಗಿ ರಾಜ್ಯದ ಜನರು ಅವರ ಹಿತವನ್ನು ಕಡೆಗಣಿಸುವುದಕ್ಕೆ ನಮ್ಮನ್ನು ಇಲ್ಲಿ ಕೂರಿಸಿದ್ದಾರೋ? ಅನಿವಾರ್ಯವಾಗಿ ಪ್ರತಿ ಪಕ್ಷದಲ್ಲಿದ್ದುಕೊಂಡು ನಮ್ಮ ಕರ್ತವ್ಯವನ್ನು ಯಾವುದೇ ಮುಲಾಜಿಲ್ಲದೆ ನಿರ್ವಹಿಸುತ್ತಿದ್ದೇವೆ. ನಾನು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಒಂದು ಕ್ಷಣ ತಡಮಾಡದೆ ನಮ್ಮ ಜಲಾಶಯದಲ್ಲಿ ನೀರು ಇಲ್ಲದೆ ಇರುವಂತಹ ಸಂದರ್ಭದಲ್ಲಿ ಈ ನೀರನ್ನು ಬಿಡುವುದನ್ನು ತಡೆಹಿಡಿಯಬೇಕು ಕೇಂದ್ರಕ್ಕೆ ಬಹಳ ಸ್ಪಷ್ಟವಾಗಿ ನಮ್ಮ ಜಲಾಶಯಗಳಲ್ಲಿ ನೀರಿಲ್ಲವೆಂದು ತಿಳಿಸುವಂತಹ ಕೆಲಸ ಮಾಡಿ. ನಮ್ಮ ಜಲಾಶಯಗಳ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆ ಇಲ್ಲ ನಮ್ಮ ಜಲಾಶಯಕ್ಕೆ ಬರುತ್ತಿರುವ ನೀರಿನ ಪ್ರಮಾಣ ಅತ್ಯಂತ ಕಡಿಮೆ ಇದೆ ಈ ಕಾರಣಗಳಿಂದಾಗಿ ನಾವು ನೀರು ನಿಲ್ಲಿಸಿದ್ದೇವೆಂದು ತಮಿಳುನಾಡಿಗೆ ಹೇಳುವಂತಹ ಒಂದು ಧೈರ್ಯವನ್ನು ಈ ಸರ್ಕಾರ ಮಾಡಬೇಕಾಗಿದೆ. ಪ್ರಧಾನಿಯವರಿಗೆ ಇವತ್ತು ಒಕ್ಕೊರಲಿನ ನಿರ್ಣಯ ಮಾಡಬೇಕಾಗಿದೆ. ಅಂತರರಾಜ್ಯ ಜಲ ಹಂಚಿಕೆ ಮಾರ್ಗಸೂಚಿ ಕೂಡಲೇ ರಚನೆ ಮಾಡಬೇಕೆ ಇದಕ್ಕೆ ಕೇಂದ್ರ ಸರಕಾರ ಮುಂದೆ ಬರಬೇಕು. ಅಲ್ಲಿಯವರೆಗೆ ಕಾವೇರಿ ನ್ಯಾಯ ಮಂಡಲಿಗೆ ಇನ್ನೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವಂತಹ ಸಾಹಸ ಮಾಡಬಾರದು. ಈ ಒತ್ತಾಯ ಮಾಡಬೇಕಾಗುತ್ತದೆ. ಯಾವ ರೀತಿ ಕಾವೇರಿ ಟ್ರಿಬ್ಯೂನಲ್ ಮುಂಚೆ ಸಹ ಕನ್ನಡ ನಾಡಿನ ಜನ ಯಾವ ರೀತಿ ನಡೆದುಕೊಂಡು ಬಂದಿದ್ದಾರೆಂಬದನ್ನು ವಿಚಾರ ಮಾಡಿ. ನಮಗೆ ನೀರಿಲ್ಲದಂತಹ ಕಾಲದಲ್ಲೂ ಪಕ್ಕದ ತಮಿಳುನಾಡಿಗೆ ನೀರು ಕೊಡುವ ಸಂದರ್ಭ ಬಂದಾಗ ಹಿಂದೆ ಮುಂದೆ ನೋಡದೆ ಬಿಟ್ಟುಕೊಂಡು ಬಂದಿದ್ದೇವೆ. ಆಗ ಯಾವುದೇ ಟ್ರಿಬ್ಯೊನಲ್ ಇರಲಿಲ್ಲ ಯಾವುದೇ ಸುಪ್ರೀಂ ಕೋರ್ಟ್‌ನ ಆದೇಶ ನಮಗೆ ಇರಲಿಲ್ಲ. ಸೌಹಾರ್ದಯುತವಾದ ಈ ಸಂಬಂಧವನ್ನು ಪಕ್ಕದ ತಮಿಳುನಾಡಿನ ಜೊತೆಗೆ ಆಂಧ್ರದ ಜೊತೆಗೆ ಇಟ್ಟುಕೊಂಡು ಬಂದಿರಲಿಲ್ಲವೇನು? ನಮ್ಮ ಸ್ವಚ್ಛ ನಿಲುವ ಇದೆ. ಅಂದು ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಮಾನ್ಯ ವಿ.ಪಿ.ಸಿಂಗ್ ಅವರು ಪ್ರಧಾನಿಯಾಗಿದ್ದಾಗ ನಿಮ್ಮ ತಪ್ಪಿನಿಂದ ಸುಪ್ರೀಂ ಕೋರ್ಟ್‌ರ ಅನಿವಾರ್ಯವಾಗಿ ಟ್ರಿಬ್ಯೂನಲ್ ಅನ್ನು ರಚನೆ ಮಾಡುವಂತಹ ಅಕ್ಷಮ್ಯ ಅಪರಾಧ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೋ ಅದಕ್ಕೆ ಪರಿಹಾರ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವಂತಹ ಮತ್ತೆ ಆದ ತಪ್ಪನ್ನು ತಿದ್ದುಕೊಳ್ಳುವುದಕ್ಕೆ ಒಂದು ಸುವರ್ಣಾವಕಾಶ ನಿಮಗೆ ಸಿಕ್ಕಿದೆ. ಮಾನ್ಯ ದೇವೇಗೌಡರು

ಹಾಲಿ ನಮ್ಮ ಪ್ರಧಾನಿಯವರು ಏನು ಹೇಳಿದರು ಎಂಬ ಬಗ್ಗೆ ಒಂದು ಮಾತನ್ನು ಹೇಳಲು ಇಚ್ಛೆಪಡುತ್ತೇನೆ. ಅದು ರೆಕಾರ್ಡಿನಲ್ಲಿ ಇರಲಿ. ಕಾವೇರಿ ಟ್ರಿಬ್ಯುನಲ್ ಅಧ್ಯಕ್ಷರು ಇವತ್ತು ರಾಜೀನಾಮೆ ಕೊಟ್ಟಿದ್ದರೆ ಅದಕ್ಕೆ ಕಾರಣ ನಿರ್ಭೀತಿಯಿಂದ ನೇರವಾಗಿ ದೇವೇಗೌಡರು ಲೋಕಸಭಾ ಸದಸ್ಯರಾಗಿದ್ದಂತಹ ಕಾಲದಲ್ಲಿ ಯಾವ ರೀತಿ ತಮಿಳುನಾಡಿನ ಜೊತೆಗೆ ಉಡುಗೊರೆ ಆತಿಥ್ಯ ಸ್ವೀಕಾರ ಮಾಡಿ ಜನರಿಗೆ ಅನ್ಯಾಯ ಮಾಡುವುದೆನ್ನುವುದನ್ನು ಬಹಿರಂಗಗೊಳಿಸಿದರೋ ಅದರ ಪರಿಣಾಮ ಈ ದೇಶದ ಪ್ರಧಾನಿಯಾಗಿದ್ದಾಗ ನಾನು ಅಧ್ಯಕ್ಷನಾಗಿ ಮುಂದುವರಿಯುವುದು ಸರಿಯಲ್ಲವೆಂದು ಅವರು ರಾಜೀನಾಮೆ ಕೊಟ್ಟು ಹೋಗಿದ್ದಾರೆಂದು ನಾನಾದರೂ ಭಾವಿಸಿದ್ದೇನೆ. ಒಳ್ಳೆಯದಾಯಿತು. ಬಹಳ ಒಳ್ಳೆಯ ಶುಭ ಸಂದರ್ಭ ಇದು. ಹಾಲಿ ಪ್ರಧಾನಿಯವರು ಲೋಕಸಭಾ ಸದಸ್ಯರಾಗಿದ್ದಾಗ ಮಾನ್ಯ ಬಂಗಾರಪ್ಪನವರಿಗೆ ಪತ್ರ ಬರೆದರು. ದಿನಾಂಕ 28-12-95 ರಂದು ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಎರಡು ಪ್ಯಾರಾವನ್ನು ಓದುತ್ತೇನೆ. ಸೆಪ್ಟೆಂಬರ್-5 ಮಾನ್ಯ ಬಂಗಾರಪ್ಪನವರಿಗೆ ದೇವೇಗೌಡರ ಪತ್ರ ಹೆಡ್‌ಲೈನ್ಸ್ ''ಕುರ್ಚಿ ಮೋಹ ತ್ಯಜಿಸಿ ಕಾವೇರಿ ನ್ಯಾಯ ಮಂಡಲಿ ಬಹಿಷ್ಕರಿಸಿ.'' ಮುಖ್ಯ ಮಂತ್ರಿ ಬಂಗಾರಪ್ಪನವರಿಗೆ ತಮ್ಮ ಅಧಿಕಾರಕ್ಕಿಂತ ರಾಜ್ಯದ ರೈತರ ಹಿತ ಮುಖ್ಯವಾಗಿದ್ದರೆ ಈಗಲಾದರೂ ಕಾವೇರಿ ನ್ಯಾಯ ಮಂಡಲಿ ಬಗ್ಗೆ ರಾಜ್ಯ ಸರಕಾರಕ್ಕೆ ವಿಶ್ವಾಸವಿಲ್ಲವೆಂದು ಸ್ಪಷ್ಟಪಡಿಸಬೇಕು ಎಂದು ಲೋಕಸಭಾ ಸದಸ್ಯರಾದ ಹೆಚ್.ಡಿ.ದೇವೇಗೌಡರು ಒತ್ತಾಯಪಡಿಸಿದ್ದಾರೆ. ತಮಿಳುನಾಡು ಸರಕಾರ ನೀಡಿದ ಉಡುಗೊರೆಗಳು ಹಾಗೂ ಆತಿಥ್ಯವನ್ನು ಸ್ವೀಕರಿಸುವ ಮೂಲಕ ನ್ಯಾಯಾಂಗದ ಮೌಲ್ಯವನ್ನು ಗಾಳಿಗೆ ತೂರಿರುವ ನ್ಯಾಯ ಮಂಡಲಿ ಈಗಿನ ಅಧ್ಯಕ್ಷರು ಮತ್ತು ಸದಸ್ಯರಿಂದ ರಾಜ್ಯಕ್ಕೆ ನ್ಯಾಯ ಸಿಗುವುದಿಲ್ಲವೆಂದು ಅವರು ಮುಖ್ಯ ಮಂತ್ರಿಗಳಿಗೆ ಶುಕ್ರವಾರ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ. ನಾನು ಇದನ್ನು ಒಪ್ಪುತ್ತೇನೆ. ಅವತ್ತು ಲೋಕಸಭಾ ಸದಸ್ಯರಾಗಿ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿ ಈ ದೇಶದ ಪ್ರಧಾನಿಯಾಗಿ ಏನು ಹೇಳಿದರು ಅವತ್ತು ಅದನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಅವತ್ತು ನ್ಯಾಯ ಮಂಡಲಿಯವರು ಸರಿಯಾಗಿ ವರ್ತಿಸಲಿಲ್ಲ ಏಕ ಪಕ್ಷೀಯವಾಗಿ ವರ್ತಿಸಿದರು ಎಂದು ನಾವು ನೇರವಾಗಿ ಆರೋಪ ಮಾಡಿದ್ದೇವೆ. ಇವತ್ತು ಕೇಂದ್ರ ಸರಕಾರಕ್ಕೆ ಒಂದು ಸುವರ್ಣಾವಕಾಶ. ಎಲ್ಲಾ ಬೇರೆ ಬೇರೆ ವಿರೋಧ ಪಕ್ಷದಲ್ಲಿದ್ದಂತಹವರು ಒಂದಾಗಿ ಕೇಂದ್ರದಲ್ಲಿ ಸರಕಾರ ನಡೆಸುವ ಒಂದು ಅವಕಾಶ ಸಿಕ್ಕಿದೆ. ಕೇರಳ ಸರಕಾರದ ಎಂ.ಪಿ.ಗಳ ಬೆಂಬಲದಿಂದ ಒಂದಾಗಿ ಇವತ್ತು ಸರಕಾರ ಇದೆ. ಈ ಸಮಯದಲ್ಲಿ ವಾಸ್ತವಿಕ ಸ್ಥಿತಿಯನ್ನು ಅರ್ಥ ಮಾಡಿಕೊಂಡು ರಾಷ್ಟ್ರೀಯ ಜಲ ನೀತಿ ನಿರೂಪಣೆಯನ್ನು ಹಾಗೂ ಮಾರ್ಗ ಸೂಚಿಯನ್ನು ಜಾರಿಗೆ ತಂದು ಅದರ ಆಧಾರದ ಮೇಲೆ ಈ ನದಿ ನೀರನ್ನು ಯಾವ ರೀತಿ ಹಂಚಬೇಕೆಂಬ ತೀರ್ಮಾನ ಮಾಡುವಂತಹ ಸುವರ್ಣಾವಕಾಶ ಈ ರಾಜ್ಯ ಮಾಜಿ ಮುಖ್ಯ ಮಂತ್ರಿ ಹಾಲಿ ಪ್ರಧಾನಿಯವರಿಗೆ ಸಿಕ್ಕಿದೆ. ಕರ್ನಾಟಕ ರಾಜ್ಯದ ಸಮಸ್ಯೆಗಳು ಅವರಿಗೆ ಗೊತ್ತಿದೆ. ಸ್ಪಷ್ಟವಾಗಿ ಅವರ ಅಭಿಪ್ರಾಯಗಳನ್ನು ಹೇಳಿದ್ದಾರೆ. ಈಗ ಮಾನ್ಯ ನಾಗೇಗೌಡರು ನೀರಾವರಿ ಸಚಿವರಾಗಿದ್ದಾರೆ. ಅವರು ಯಾವ ಮುಲಾಜಿಗೂ ನೀವು ಒಳಗಾಗುವುದಿಲ್ಲವೆಂದು

ಅಂದುಕೊಂಡಿದ್ದೆ. ನೀವು ಹೇಳಬಹುದಾಗಿತ್ತಲ್ಲಾ. ಪಕ್ಕದ ರಾಜ್ಯಗಳಿಗೆ ನೀರನ್ನು ಬಿಡಬೇಡಿ ಎಂದು ಹೇಳುವುದಿಲ್ಲ. ಅಗತ್ಯ ಬಂದಾಗ ಬಿಟ್ಟಿದ್ದೇವೆ ಮುಂದೆ ಕೂಡ ಬಿಡಬೇಕಾಗುತ್ತದೆ. ಆದರೆ ಇವತ್ತು ನೀವು ಪ್ರಧಾನಿಯವರ ಜೊತೆ ಮಾತನಾಡಿ ಆಂಧ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಮಾತುಕತೆ ಮೂಲಕ ಇದನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳೋಣ, ಸಾಕು ಹತ್ತಾರು ವರ್ಷ ಕಚ್ಚಾಡಿದ್ದು, ಸುಪ್ರೀಂಕೋರ್ಟಿಗೆ ಹೋಗಬೇಕಾದ ಅಗತ್ಯ ಇಲ್ಲ ಬನ್ನಿ ನಮ್ಮ ಜಲಶಯಗಳನ್ನು ನೋಡಿ. ನಿಮ್ಮ ಅಗತ್ಯ ಏನು ನಮ್ಮ ಅಗತ್ಯವೇನು ಬನ್ನಿ ಮಾತುಕತೆ ಮೂಲಕ ಅಕ್ರಾಸ್ ದಿ ಟೇಬಲ್ ಮಾಡೋಣ ಸಮಸ್ಯೆ ಬಗೆಹರಿಸೋಣವೆಂದು ಹೇಳಬಹುದಿತ್ತು. ಅವರು ಸುಪ್ರೀಂಕೋರ್ಟಿಗೆ ಹೋದ ಮೇಲೆ ವಾಪಸ್ ಬಂದು ಮಾತುಕತೆ ಮೂಲಕ ಬಗೆಹರಿಸಕೊಳ್ಳೋಣ ಅಂದಿದ್ದರೆ ನಮ್ಮಲ್ಲಿ ನೀರು ಇಲ್ಲದಿದ್ದರೂ ನಿವು 5 ಟಿಎಂಸಿ ನೀರು ಬಿಟ್ಟಿದ್ದರೂ ವಿರೋಧ ಮಾಡುತ್ತಿರಲಿಲ್ಲ. ಜನರನ್ನು ಕ್ಷಮಾಪಣೆ ಕೇಳುತ್ತಿದ್ದೆವು. ಹಿಂದೆ ಸುಪ್ರೀಂಕೋರ್ಟಿನ ಆದೇಶದ ಮೇಲೆ ಮಾನ್ಯ ಪ್ರಧಾನಿಯವರು ಮಧ್ಯ ಪ್ರವೇಶ ಮಾಡಿ ತಜ್ಞರುವರದಿ ಕೊಟ್ಟಾಗ ಮನಸ್ಸಿಲದ ಮನಸ್ಸಿನಲ್ಲಿ ನಮ್ಮ ಜಲಾಶಯದಲ್ಲಿ ನೀರಿಲ್ಲದೇ ಇದ್ದ ಕಾಲದಲ್ಲಿ ನೀರು ಕೊಡಲಿಲ್ಲವೇನು? ಆಗಲೂ ಜನರನ್ನು ಕ್ಷಮಾಪಣೆ ಕೇಳಿದೆವು. ಈಗಲೂ ನಾವು ಒಪ್ಪುತ್ತಿದ್ದೆವು. ಇವತ್ತು ಕದ್ದು ಮುಚ್ಚಿ 5 ಟಿಎಂಸಿ ನೀರನ್ನು ಬಿಡುವುದಕ್ಕೆ ಪ್ರಾರಂಭ ಮಾಡಿದಿರಿ ಸುಪ್ರೀಂ ಕೋರ್ಟಿಗೆ ಅವರು ಹೋಗಿದ್ದಾರೆ. ಅಲ್ಲೂ ಸಹ ಅವರು ಕೇಳಿರುವ 15 ಟಿಎಂಸಿಯಲ್ಲಿ ಇನ್ನು 10 ಟಿಎಂಸಿ ನೀರು ಬಿಡಿ ಎಂದು ಆದೇಶ ಕೊಟ್ಟರೆ ನಿಮ್ಮದೇ ಹೇಳಿಕೆ ಪ್ರಕಾರ ತಾವೇನು ಮಾಡುತ್ತೀರಾ ಎಂದು ಕೇಳುತ್ತೇನೆ. ಈ ಸದನದ - ಒಂದು ತೀರ್ಮಾನಕ್ಕೆ ಪ್ರತಿಪಕ್ಷಗಳು ಕುಳಿತು ಒಟ್ಟಾಗಿ ತೆಗೆದುಕೊಂಡ ತೀರ್ಮಾನಕ್ಕೆ ಏನೂ ಮನ್ನಣೆ ಇಲ್ಲವೇನು? ಆ ರೀತಿ ನಿಮ್ಮ ಸರ್ಕಾರ ನಡೆದುಕೊಳ್ಳುತ್ತೀರಾ? ಈ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಶ್ರೀಮಾನ್ ಜೆ.ಎಚ್.ಪಟೇಲರು ಹೇಳುತ್ತಾರೆ; ಕಾವೇರಿ ಟ್ರಿಬ್ಯುನಲ್‌ನ್ನು ನಾವು ಬಹಿಷ್ಕಾರ ಹಾಕುವ ಪ್ರಶ್ನೆ ಇಲ್ಲ. ಹೋಗಬೇಕಾಗುತ್ತದೆ. ಅದೇ ರೀತಿ ಟ್ರಿಬ್ಯೂನಲ್ ಇಂಟೀರಿಂ ಆರ್ಡರ್ ಆದೇಶದ ಬಗ್ಗೆ ತಾವು ಒಂದು 20 ದಿವಸದ ಮುಂಚೆ ಹೋಗಿದ್ದೀರಿ. ಯಾವ ಟ್ರಿಬ್ಯೂನಲ್ ಮುಂದೆ ನಮ್ಮ ಮಾಜೀ ಮುಖ್ಯಮಂತ್ರಿ ಹಾಲಿ ಪ್ರಧಾನಿಯುವರು ಎಲ್ಲರ ಪರವಾಗಿ ಒಂದೇ ರೀತಿಯಲ್ಲಿ ನ್ಯಾಯಬದ್ಧವಾಗಿ ಪಕ್ಷಾತೀತವಾಗಿ ನಡೆದುಕೊಳ್ಳುತ್ತಿಲ್ಲ ಯಾವುದೋ ರಾಜ್ಯದ ಪರವಾಗಿದ್ದಾರೆಂದು ಆದ ಮೇಲೆ ಅದೇ ಟ್ರಿಬ್ಯನಲ್ ಮುಂದೆ ಇವರು ರಿಲೀಫ್ ಕೇಳುವ ಅಗತ್ಯತೆ ಏನು ಇತ್ತು? ಆ ಟ್ರಿಬ್ಯುನಲ್‌ಗೆ ಮತ್ತೆ ಮಾನ್ಯತೆ ಕೊಡುವಂತಹ ಅಗತ್ಯತೆ ಏನಿತ್ತು? ಸರ್ವಾನುಮತದ ನಿರ್ಣಯ ಏನಾಗಿತ್ತು? ಸರ್ವಪಕ್ಷಗಳ ಸಭೆಯ ಸರ್ವಾನುಮತದ ನಿರ್ಣಯಗಳು 3.1.96 : ಮಾನ್ಯ ನಂಜೇಗೌಡರೂ ಇದ್ದರು, ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಅವತ್ತಿನಿಂದ ಇವತ್ತಿನವರೆಗೆ ಟ್ರಿಬ್ಯುನಲ್ ಮುಂದೆ ಯಾವುದೇ ಕಾರಣಕ್ಕೂ ಹೋಗಬಾರದು ಎಂದು ಪ್ರತಿಪಾದನೆ ಮಾಡಿಕೊಂಡು ಬಂದರು. ಅದೇ ನಿಲುವನ್ನು ನಾವು ಪ್ರತಿಪಕ್ಷದಲ್ಲಿದ್ದವರು ತೆಗೆದುಕೊಂಡೆವು. ಅವತ್ತಿನ ವಿಷಮ ಪರಿಸ್ಥಿತಿಯಿಂದ

ಹೊರ ಬರಬೇಕು. ಸುಪ್ರೀಂ ಕೋರ್ಟನ್ನು ಒಂದು ಕಡೆ ಮೈಮೇಲೆ ಹಾಕಿಕೊಂಡಿದ್ದೇವೆ. ಅವರ ಆದೇಶ ಪಾಲನೆ ಮಾಡಲಿಲ್ಲ. ಪ್ರಧಾನಿಯವರ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಲಿಲ್ಲ ಎಂದರೆ ಇವರ ಉದ್ಧಟತನ ಎಷ್ಟು ಇರಬಹುದು ಎಂದು ಹೇಳಿ ನಮ್ಮದೇ ಆದ ತಪ್ಪಿನಿಂದ ದೇಶಾದ್ಯಂತ ನಮ್ಮ ಬಗ್ಗೆ ಏನು ಅಪಪ್ರಚಾರ ನಡೆದಿದೆ? ಜಲಾನಯನ ಪ್ರದೇಶದಲ್ಲಿ ನೀರು ಇದ್ದರೂ ಬಿಡುತ್ತಿಲ್ಲ ಎನ್ನುವ ಭಾವನೆ ಏನು ಮೂಡಿದೆ. ಅದನ್ನು ತಪ್ಪಿಸಬೇಕು ಎಂದು ಹೇಳಿ ಮನಸ್ಸಿಲ್ಲದ ಮನಸ್ಸಿನಿಂದ ನಾವೆಲ್ಲಾ ಸೇರಿದಂತಹ ಒಂದು ನಿರ್ಣಯಕ್ಕೆ ಒಪ್ಪಿಕೊಳ್ಳಲಿಲ್ಲವೇನು? ನಿರ್ಣಯ ಮಾಡಲಿಲ್ಲವೇನು? ಏನು ನಿರ್ಣಯ ಮಾಡಿದೆವು? ''ಸರ್ವೋಚ್ಚ ನ್ಯಾಯಾಲಯವು ಪ್ರಧಾನ ಮಂತ್ರಿಯವರಿಗೆ ಮಾಡಿದ ವಿನಂತಿ ಮೇರೆಗೆ ಮತ್ತು ಪ್ರಧಾನ ಮಂತ್ರಿಯವರು ನೀಡಿದ ನಿರ್ದೇಶನಕ್ಕೆ ಗೌರವ ಕೊಟ್ಟು ಅಂತರಾಜ್ಯಗಳ ಸೌಹಾರ್ದತೆಯ ದೃಷ್ಟಿಯಿಂದ ಆರು ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಲು ಈ ಸಭೆ ನಿರ್ಧರಿಸಿದೆ.'' ಇದು ಒಂದನೆಯ ನಿರ್ಣಯ''ಪ್ರಧಾನ ಮಂತ್ರಿಯವರು ರಾಷ್ಟ್ರೀಯ ಜಲ ನೀತಿಯ ಮಾರ್ಗಸೂಚಿ ಪ್ರಕಟಿಸುದಕ್ಕಾಗಿ ಫೆಬ್ರವರಿ ಮೊದಲ ವಾರದಲ್ಲಿ ಸಭೆ ಕರೆಯುವುದಾಗಿ ದಿನಾಂಕ 1.1.96ರ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿರುವುದರಿಂದ ರಾಷ್ಟ್ರೀಯ ಜಲ ನೀತಿಗೆ ಮಾರ್ಗ ಸೂಚಿ ಪ್ರಕಟಿಸುವವರೆಗೆ ಕರ್ನಾಟಕವು ಕಾವೇರಿ ನ್ಯಾಯಾಧೀಕರಣ ಮುಂದೆ ಭಾಗವಹಿಸಬಾರದಾಗಿ ತೀರ್ಮಾನಿಸಿದೆ.'' ನಾಗೇಗೌಡರು ಸಹಿ ಮಾಡಿದ್ದಾರೆ ಈ ನಿರ್ಣಯಕ್ಕೆ. ಮೂರನೆಯದು ''ಕಾವೇರಿ ಜಲಾನಯನ ಪ್ರದೇಶದ ರೈತರಿಗೆ ನಿಯಮಾವಳಿಗನುಸಾರವಾಗಿ ಜೂನ್ ತಿಂಗಳವರೆಗೆ ನೀರು ಕೊಡುತ್ತಿದ್ದ ರೀತಿಯಲ್ಲಿಯೇ ನೀರು ಒದಗಿಸಲು ಸರ್ಕಾರ ಬದ್ಧವಾಗಿರಬೇಕೆಂದು ಈ ಸಭೆ ತೀರ್ಮಾನಿಸಿದೆ.'' ರಾಜ್ಯದಲ್ಲಿ ಅದರಲ್ಲೂ ಕಾವೇರಿ ಜಲಾನಯದ ರೈತರ ಹಿತದೃಷ್ಟಿಯಿಂದ ತೆಗೆದುಕೊಂಡ ತೀರ್ಮಾನದ ಹಿನ್ನೆಲೆಯಲ್ಲಿ ರಾಜ್ಯದ ಜನಸ್ತೋಮ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಬೇಕೆಂದು ಈ ಮೂಲಕ ಸರ್ವಪಕ್ಷಗಳ ಸಭೆ ವಿನಂತಿಸುತ್ತದೆ.'' ಎಲ್ಲಾ ಪ್ರಮುಖರೂ ಇದ್ದರು. ಆಡಳಿತ ಪಕ್ಷದವರು, ಈ ಕಡೆಯವರೂ ಇದ್ದರು. ಇವತ್ತು ನೀರಾವರಿ ಸಚಿವರಾದಂತಹ ನಾಗೇಗೌಡರೂ ಇದ್ದರು, ಆದರೆ ಇವತ್ತು ಈ ಒಂದು ನಿರ್ಣಯಕ್ಕೆ ವಿರುದ್ಧವಾಗಿ ತಾವು ನಡೆದುಕೊಂಡಿರಿ, ಟ್ರಿಬ್ಯುನಲ್ ಮುಂದೆ ಹೋದಿರಿ. ಸ್ವಾಮಿ, ಇವತ್ತು ತಾವು ಎಲ್ಲ ಪತ್ರಿಕೆಗಳನ್ನು ನೋಡಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಾರ್ಯಾಂಗ, ಶಾಸಕಾಂಗ ಯಾವ ಪರಿಸ್ಥಿತಿಗೆ ಹೋಗುತ್ತಿದ್ದೇವೆ. ಈ ಪತ್ರಿಕೋದ್ಯಮದಿಂದ ಸ್ವಲ್ಪ ಈ ರಾಜ್ಯ, ಈ ದೇಶ ಉಳಿದಿದೆಯೇನೋ ಎನ್ನಿಸುತ್ತದೆ. ಅದೂ ಇಲ್ಲ ಎಂದಿದ್ದರೆ ಬಹುಶಃ ಒಂದು ರೀತಿಯ ತೊಗಲಕ್ ದರ್ಬಾರ್ ನಡೆದು ಹೋಗುತ್ತಿತ್ತೇನೋ ಈ ರಾಜ್ಯದಲ್ಲಿ ಈ ದೇಶದಲ್ಲಿ. ಸ್ವಾಮಿ ಎಲ್ಲಾ ಪತ್ರಿಕೆಯ ಮುಖಪುಟದಲ್ಲಿದೆ. ಇವತ್ತು ಕೃಷ್ಣರಾಜಸಾಗರದಲ್ಲಿ ಮಂಗಳವಾರ ಸಂಜೆ ಕೃಷ್ಣರಾಜಸಾಗರದಲ್ಲಿ ನೀರಿಲ್ಲದ ಭಾಗದ ಒಂದು ನೋಟ'' ಸ್ವಾಮಿ ನಾನೂ ಮಂಡ್ಯ ಜಿಲ್ಲೆಯವನು. ಕೆ.ಆರ್.ಸಾಗರದಿಂದ ಎಂಟು ಕಿಲೋ ಮೀಟರ್ ನಡೆದುಕೊಂಡು ಚಿಕ್ಕವನಾಗಿದ್ದಾಗ ಓಡಾಡುತ್ತಿದ್ದೆ. ಒಂದು ಹನಿ ನೀರೂ ಇಲ್ಲ. ಆ

ಪಕ್ಕದಲ್ಲಿ ತೂಬಿನಲ್ಲಿ ಒಂದಷ್ಟು ನೀರು ಇದೆ. ಆ ನೀರನ್ನು ಅಲ್ಲಿಂದಲೂ ಸಹ ಎತ್ತಲು ಕಷ್ಟ. ಕೃಷ್ಣರಾಜ ಸಾಗರ ಜಲಾಶಯದಿಂದ ತಮಿಳುನಾಡಿಗೆ ಮಂಗಳವಾರದಿಂದ ನೀರು ಬಿಡುತ್ತಿರುವ ದೃಶ್ಯ, ಜಲಾಶಯದ ನೀರಿನ ಮಟ್ಟ ಕಡಿಮೆ ಇದ್ದರೂ, ತಮಿಳುನಾಡಿಗೆ ಹರಿಯುತ್ತಿರುವ ನೀರು'' ಅಂದರೆ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನೀರು ಬಿಡುತ್ತಿದ್ದೀರಲ್ಲಾ, ನಾಳೆ ಮಳೆ ನಿಂತು ಹೋದರೆ ಮಾನ್ಯ ನಾಗೇಗೌಡರು ತಮಿಳುನಾಡಿನವರು ಹತ್ತಿರ ಮಾತನಾಡಿ ಮತ್ತೆ ಲಿಫ್ಟ್ ಇರಿಗೇಷನ್ ಮಾಡಿ ಐದು ಟಿಎಂಸಿ ನೀರು ವಾಪಸ ತರುತ್ತೀರೇನು? ಈಸ್ ಇಟ್ ಪಾಸಿಬಲ್? ನಿನ್ನೆ ನಾನು ಹೇಳಿದೆ. ''ಮನೆಗೆ ಮಾರಿ ಪರರಿಗೆ ಉಪಕಾರಿ'' ನಮ್ಮ ಕುರ್ಚಿ ಮುಖ್ಯ. ಪ್ರಧಾನಿಯವರ ಆಶೀರ್ವಾದ ಮುಖ್ಯ. ಅವರಿಗೆ ಯಾವುದೇ ಕಾರಣಕ್ಕೆ ನೋವು ಆಗಬಾರದು, ಆ ರೀತಿ ಈ ರಾಜ್ಯ ಸರ್ಕಾರ ನಡೆದುಕೊಳ್ಳಬೇಕು ಜನಹಿತ ದೃಷ್ಟಿಯಿಂದಲ್ಲ. ಈ ರೀತಿಯ ನಿಮ್ಮ ವರ್ತನೆಯ ಪರಿಣಾಮ ಈ ರಾಜ್ಯದ ಜನ ಹಿತವನ್ನು ಬಲಿ ಕೊಡುವಂತಹ ಒಂದು ಅಕ್ಷಮ್ಯ ಅಪರಾಧ ಇವತ್ತು ಈ ಸರ್ಕಾರ ಮಾಡುತ್ತದೆ. ಇಂತಹ ಒಂದು ಸಂದರ್ಭದಲ್ಲಿ ನಾಗೇಗೌಡರು ಇಲ್ಲ, ಬರುತ್ತಾರೆ, ಹೊರಗಡೆ ಹೋಗಿರಬಹುದು. ಬಹುಶಃ ನೀರಾವರಿಯ ಸಚಿವರು ಯಾರೂ ಸಹ ಈ ರೀತಿ ಇದುವರೆಗೆ ನಡೆದುಕೊಂಡಿರಲಿಲ್ಲ. ಸ್ವಾಮಿ, ಮುಂದೆ ಹೋಗುವುದಕ್ಕೆ ಮುಂದೆ ನಿಮ್ಮ ಇಲಾಖೆಯವರೇ ಕೊಟ್ಟಂತಹ ವಿಚಾರ ಹೇಳುತ್ತೇನೆ ನಿನ್ನೆ ನಾನು ಹೇಳಿದ್ದೆ. ಪತ್ರಿಕೆಯ ಮೂಲಕ ನೀವು ಯಾವ ರೀತಿ ಅನ್ಯಾಯ ಮಾಡುತ್ತೀರಿ ಎನ್ನುವುದು ಈ ರಾಜ್ಯದ ಜನರಿಗೆ ಗೊತ್ತಾಗಬೇಕು ಎನ್ನುವದಕ್ಕೋಸ್ಕರ ಹೇಳುತ್ತಿದ್ದೇನೆ. ರೈತರ ಹಿತದೃಷ್ಟಿಯಿಂದ ನಾನು ನೀವೇ ಕೊಟ್ಟಿರುವಂತಹ ದಿನಾಂಕ 1.7.96ಕ್ಕೆ ಅಂತ್ಯವಾದಂತಹ ವಾರದ ಮಳೆಯ ವಿವರ ಅವರು ಕೊಡುವಂತಹ ಕಾಲದಲ್ಲಿ ರಾಜ್ಯದ ರೈತನ ಸ್ಥಿತಿ ಏನು ಇದೆ? ಯಾವ್ಯಾವ ತಾಲ್ಲೂಕಿನಲ್ಲಿ ಏನೇನು ಮಳೆ ಪರಿಸ್ಥಿತಿ ಇದೆ ಎಂದು ಹೇಳುತ್ತಾರೆ. ರಾಜ್ಯದ 175 ತಾಲ್ಲೂಕುಗಳ ಪೈಕಿ 155 ತಾಲ್ಲೂಕುಗಳಲ್ಲಿ ವರದಿಗಳು ಬಂದಿದ್ದು ಈ ಪೈಕಿ 27 ತಾಲ್ಲೂಕುಗಳಲ್ಲಿ ಅತ್ಯಲ್ಪ ಮಳೆ ಆಗಿದೆ, 127 ತಾಲ್ಲೂಕುಗಳಲ್ಲಿ ಮಳೆಯೇ ಆಗಿರುವುದಿಲ್ಲ. ಕೇವಲ ಎರಡು ತಾಲ್ಲೂಕುಗಳಲ್ಲಿ ಮಾತ್ರ ನಮ್ಮ ಕ್ಯಾಚ್‌ಮೆಂಟ್ ಏರಿಯಾ ಮೈಸೂರು-ಕೊಡಗು : ಮೈಸೂರು ವಿಭಾಗದಲ್ಲಿ ಒಂದು ತಾಲ್ಲೂಕಿನಲ್ಲಿ ಮಾಮೂಲು ಮತ್ತು 13 ತಾಲ್ಲೂಕುಗಳಲ್ಲಿ ಅತ್ಯಲ್ಪ ಮಳೆ ಆಗಿದ್ದರೆ 22 ತಾಲ್ಲೂಕುಗಳಲ್ಲಿ ಮಳೆಯೇ ಆಗಿರುವುದಿಲ್ಲ. ಕಳೆದ ಸಾಲಿನ ಇದೇ ಅವಧಿಯಲ್ಲಿ ಹದಿನಾಲ್ಕು ತಾಲ್ಲೂಕುಗಳಲ್ಲಿ ಅಧಿಕ ಮತು ಹದಿನೆಂಟು ತಾಲ್ಲೂಕುಗಳಲ್ಲಿ ಮಾಮೂಲು ಮಳೆ ಆಗಿತ್ತು. ಅಂದರೆ ಕೊಡಗಿನಲ್ಲಿ ಆಗಲೀ ಮೈಸೂರು ಜಿಲ್ಲೆಯ ಯಾವುದೇ ಭಾಗದಲ್ಲಿ ಆಗಲೀ, ಕ್ಯಾಚ್‌ಮೆಂಟ್ ಏರಿಯಾದಲ್ಲಿ ಆಗಲೀ ಮಳೆ ಇಲ್ಲ ಎನ್ನುವಂತಹದ್ದು ನಿಮಗೆ ಸ್ಪಷ್ಟವಾಗಿ ಗೊತ್ತಿದ್ದರೂ ಸಹ ಈ ರೀತಿ ಸನ್ಮಾನ್ಯ ನಾಗೇಗೌಡರು ನೀರಾವರಿ ಸಚಿವರಾಗಿ ಈ ಮನೆಯಲ್ಲಿ ಮತ್ತು ಅಲ್ಲಿ ಈ ರೀತಿಯ ಹೇಳಿಕೆಯನ್ನು ಏತಕ್ಕೆ ಕೊಡುತ್ತಿದ್ದಾರೆ ಎನ್ನುವಂತಹದ್ದು ನಮಗೆ ಅರ್ಥ ಆಗದೇ ಇರುವಂಥ ಸಂಗತಿ. ಅದಕ್ಕಾಗಿ ನಾನು ಇವತ್ತು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ದಯಮಾಡಿ ಯಾರಾದರೂ ಸಚಿವರು,

ಅಧಿಕಾರಿಗಳು ಈ ಭಾಗದ ಪ್ರತಿನಿಧಿಗಳೆಲ್ಲಾ ಎರಡು ಕಡೆ ಕೃಷ್ಣರಾಜಸಾಗರ, ಕಬಿನಿಗೆ ಹೋಗಿ ಬರೋಣ. ಹಾರಂಗಿ ಹೇಮಾವತಿ ಬೇಡ, ಇವೆರಡೂ ಹತ್ತಿರ ಇದೆ ಹೋಗಿ ಬರೋಣ. ಹೋಗಿ ಬಂದಾಗ ನೀವು ಏನು ಎಲ್ಲಾ ಜಲಾಶಯಗಳಲ್ಲಿ 30 ಟಿಎಂಸಿ ನೀರು ಇದೆ ಎಂದು ಹೇಳಿದ್ದೀರಿ. ಇದೇ 30 ಟಿಎಂಸಿ ನೀರು, ಇಲ್ಲ ಎಂದು ನಾನು ಹೇಳುತ್ತಿಲ್ಲ. ನಮಗೆಷ್ಟು ಬೇಕು? ತೂಬು ಕೆಳಗಡೆ ಇರುವ ನೀರನ್ನು ಬಿಡಲು ನಿಮಗೆ ಸಾಧ್ಯವಿದೆಯೇ? 30 ಟಿಎಂಸಿ ನೀರಿನಲ್ಲಿ ಸುಮಾರು 6 ಟಿಎಂಸಿ ನೀರು ತೂಬಿನ ಕೆಳ ಭಾಗದಲ್ಲಿ ಬರುತ್ತದೆ. ಅದು ಲಿಫ್ಟ್ ಇರಿಗೇಷನ್ ಮಾಡಬೇಕು, ಕೊಡಬೇಕಾದರೆ. ಆ ನೀರನ್ನು ಯಾರಿಗೂ ಕೊಡುವುದಕ್ಕೆ ಬರುವುದಿಲ್ಲ. ಎಷ್ಟು ಅವೈಲಬಲ್ ಇದೆ ಇವತ್ತಿನವರೆಗೆ, ಎಷ್ಟು ನಮ್ಮ ರಾಜ್ಯಕ್ಕೆ ಅಗತ್ಯ ಇದೆ? ಎಷ್ಟನ್ನು ನಾವು ಹೊರಗಡೆ ಬಿಡಬಹುದು ಎನ್ನುವಂತಹದು ಸತ್ಯ ಸಂಗತಿ ಮನವರಿಕೆ ಆದಾಗ ಎಷ್ಟರ ಮಟ್ಟಿಗ್ಗೆ ನೀರಾವರಿ ಸಚಿವರು ಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ ಎನ್ನುವಂತಹದು ಅರ್ಥ ಆಗುತ್ತದೆ. ಅವರು ಹೇಳಿದ್ದಾರೆ, ನಮ್ಮ ಭಾಗದಲ್ಲಿ ಸಾಕಷ್ಟು ನೀರು ಇದೆ ಎಂದು. ಉಭಯ ಸದನಗಳಲ್ಲಿ ಅವರು ಹೇಳಿದ್ದಾರೆ. ದೂರದರ್ಶನದಲ್ಲಿ ಹೇಳಿದ್ದೀರಿ ಬಹುಶಃ ರಾಜ್ಯದ ಇತಿಹಾಸದಲ್ಲಿ ಯಾವುದೇ ನೀರಾವರಿ ಸಚಿವರು ಬಹಳಷ್ಟು ನೀರು ನಮ್ಮ ಜಲಾಶಯದಲ್ಲಿದೆ ಎಂದು ಹೇಳುವಂತಹ ಅಕ್ಷಮ್ಯ ಅಪರಾಧ ಹೇಳಿಕೆಯನ್ನು ಕೊಡುವಂತಹದನ್ನು ಇದುವರೆಗೆ ಯಾರೂ ಮಾಡಿರಲಿಲ್ಲ. ನೀರು ಇಲ್ಲದೇ ಇದ್ದರೂ ನೀರು ಇದೆ ಎಂದು ಹೇಳಿದ್ದೀರಿ, ಬಹುಶಃ ನೀರು ಇದ್ದರೂ ಇಲ್ಲ ಎಂದು ಹೇಳಬೇಕಾಗಿತ್ತು. ಆದರೆ ನೀವು ಮಾಡಿರುವಂತಹದು ಅಂದರೆ ನೀರಾವರಿ ಸಚಿವರಾಗಿ ಒಂದು ಸತ್ಯಕ್ಕೆ ದೂರವಾದಂತಹ ಸಂಗತಿಯನ್ನು ತಾವು ಹೇಳಿದ್ದೀರಿ. ಬಹುಶಃ ಅನಿವಾರ್ಯವಾಗಿ ನೀರಾವರಿ ಸಚಿವರು ನಮ್ಮ ಸ್ನೇಹಿತರು ಆಗಿದ್ದರೂ ಸಹ ರಾಜ್ಯದ ಜನರ ಹಿತದೃಷ್ಟಿಯಿಂದ ಖಂಡನಾ ನಿರ್ಣಯವನ್ನು ನಿಮ್ಮ ವಿರುದ್ಧ ಮಾಡಬೇಕು, ಮಂಡಿಸಬೇಕು ಎಂದು ಯೋಚನೆ ಮಾಡುತ್ತಿದ್ದೇನೆ. ಅದರ ಜೊತೆಗೆ ಒಂದು ಪ್ರಿವಿಲೇಜ್ ಮೋಷನ್ ಸಹ ಅನಿವಾರ್ಯ ಆಗಬಹುದು. ನಿಮ್ಮ ಹೇಳಿಕೆ ಸ್ವಾಮಿ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. 7.7.96ರವರೆಗೆ ಎಷ್ಟು ನೀರು ಇತ್ತು? ಎಷ್ಟು ನೀರು ನಮಗೆ ಬೇಕು? ಅಗತ್ಯ ಏನಿತ್ತು ಆ ತಿಂಗಳಲ್ಲಿ ಹೇಳುತ್ತೀರಾ? ನಿಮ್ಮ ಸರ್ಕಾರವೇ ಅಧಿಕೃತವಾಗಿ ಕೊಟ್ಟಿರುವಂತಹ ವರದಿ ಪ್ರಕಾರ ಮಾನ್ಯ ಉಪಾಧ್ಯಕ್ಷರೆ, ನಿಮಗೆ ಕಳುಹಿಸಿಕೊಡುತ್ತೇನೆ. ಸ್ಟೋರೇಜ್ ಆ್ಯಸ್ ಆನ್ 7.7.96 ಮಿನಿಮಮ್ ಡ್ರಾಸ್ ಲೆವೆಲ್‌ರೆಗೆ ಅಂದರೆ ಎಬೋವ್ ಎಂಡಿಡಿಎಲ್ ಕೆಆರ್‌ಸಾಗರ - 8.616 ಟಿಎಂಸಿ. ವಾಟರ್ ಕಬಿನಿಯಲ್ಲಿ 4.800, ಹಾರಂಗಿ 3.223, ಹೇಮಾವತಿ 6.479, ಟೋಟಲ್ ಸ್ಟೋರೇಜ್ ಆ್ಯಸ್ ಆನ್ 7.7.96 23.218 ಟಿಎಂಸಿ ವಾಟರ್ ನಿಮ್ಮ ಅಂಕಿ ಅಂಶದ ಪ್ರಕಾರ ನಮಗೆ ಜುಲೈವರೆಗೆ ಎಷ್ಟು ನೀರು ಬೇಕು? ಜುಲೈನಲ್ಲಿ ಕೆ.ಆರ್.ಸಾಗರದಲ್ಲಿ ನಮಗೆ 7.725 ಟಿಎಂಸಿ ಬೇಕು, ಕಬಿನಿಯಲ್ಲಿ 7.296 ಟಿಎಂಸಿ ಬೇಕು, ಹಾರಂಗಿಯಲ್ಲಿ 1.927 ಟಿಎಂಸಿ ಬೇಕು, ಹೇಮಾವತಿಗೆ 7.40 ಟಿಎಂಸಿ ಬೇಕು. ಅಂದರೆ ಅಬೋವ್ ಎಂಡಿಡಿಎಲ್ ಲೆವೆಲ್‌ನಲ್ಲಿ 23.216 ಟಿಎಂಸಿ ನೀರು ಇದ್ದರೆ ನಮಗೆ ಜುಲೈವರೆಗೆ

ಬೇಕಾಗಿರತಕ್ಕಂಥದ ನೀರು 24.348 ಸಿಲ್‌ಲೆವೆಲ್ ಅಂದರ ತೂಬಿನ ಕೆಳಗಡೆ ಇರುವಂತಹದ್ದು ಸುಮಾರು 7.430 ಟಿಎಂಸಿ ನೀರು ನಮ್ಮಲ್ಲಿದೆ. ಅದೆನ್ನೆಲ್ಲಾ ಸೇರಿಸಿ ಈ ದೇಶದ ಜನರಿಗೆ ಸುಪ್ರೀಂ ಕೋರ್ಟಿಗೆ ತಮಿಳುನಾಡಿಗೆ ಅನುಕೂಲ ಆಗಲಿ ಎಂದು ನಮ್ಮ ಜಲಾಶಯದಲ್ಲಿ 30.648 ಟಿಎಂಸಿ ವಾಟರ್ ಇದೆ. ಆದರೆ ವಾಸ್ತವಿಕವಾಗಿ ಇಷ್ಟು ನೀರು ನಮ್ಮಲ್ಲಿ ಇದ್ದರೂ ಸಹ ಜಲಾಶಯದಲ್ಲಿ ನಿಮಗೆ ಹೊರಗೆ ಬಿಡಲು ಆಗುವಂತಹದು ಕೇವಲ 23.218 ಟಿಎಂಸಿ ನೀರು. ನಮಗೆ ಜುಲೈನಲ್ಲಿ ಬೇಕಾಗಿರುವಂತಹದು 24.348 ಟಿಎಂಸಿ. ಅಂದರೆ ನಮಗೇನೆ 1.130 ಟಿಎಂಸಿ ಬೇಕು.

ಶ್ರೀ ಕೆ.ಎನ್.ನಾಗೇಗೌಡ:- ನಿಮಗೆ ಅನುಕೂಲ ಆಗಲಿ ಎಂದು ಹೇಳುತ್ತೇನೆ. ನೀವು ಹೇಳುವುದು ಕರೆಕ್ಟಾಗಿದೆ. ನಿಮ್ಮ ರೆಕಾರ್ಡ್ಸ್ ಫಿಗರ್ಸ್ ತಪ್ಪೇನೂ ಇಲ್ಲ. ಈ ಫಿಗರ್ಸನ್ನು ನಾವು ಮೇಂಟೇನ್ ಮಾಡದೇ ಹೋದರೂ ಸೆಂಟ್ರಲ್ ವಾಟರ್ ಕಮೀಷನ್ ಅವರು ಮೇಂಟೇನ್ ಮಾಡುತ್ತಿದ್ದಾರೆ. ನಾವು ಇನ್‌ಫಾರಂ ಮಾಡುತ್ತಿದ್ದೇವೆ. ಅದರಿಂದ ಈಗ ಡಾ.ಅಲಘ ಕಮಿಟಿ ರಿಪೋರ್ಟ್ ಆದ ಮೇಲೆ ನಂತರ ರಘುರಾಮ್ ಬಂದು ರಿಪೋರ್ಟ್ ಮಾಡಿ ಆದ ಮೇಲೆ ಯಾವ ರೀತಿ ಗೇಜ್ ತೆಗೆದುಕೊಳ್ಳಬೇಕು ಎಂದು ಡಿಸ್ಪ್ಯೂಟ್ ಬಂದ ಮೇಲೆ ಪ್ರತಿಯೊಂದನ್ನು ಸಿಡಬ್ಲ್ಯುಸಿಯವರು ಮಾನಿಟರಿಂಗ್ ಮಾಡುತ್ತಿದ್ದಾರೆ. ನಾವೂ ಸಹ ಅವರಿಗೆ ಇನ್‌ಫರ್ಮೇಷನ್ ಕಳುಹಿಸುತ್ತಿದ್ದೇವೆ. ತಾವೇನು ಹೇಳಿದ್ದೀರಿ ಟೋಟಲ್ ರಿಕ್ವೈರ್‌ಮೆಂಟ್ ಫಾರ್ ಜುಲೈ 1996 24.348 ಇದು ಕರೆಕ್ಟ್ ಆಗಿದೆ. Storage as on 7-7-96 above MDDL 23.318 that is correct? Above mean of MDDL and SIL 30.648, above SIL level 36.508. That is also correct ಇವೆಲ್ಲಾ ಬಂದ ನಂತರ Above MDDL plus above SIL ಲೆವೆಲ್ ಎರಡನ್ನೂ ಅಂದರೆ 23 ಪ್ಲಸ್ 36 ಅನ್ನು ಕೂಡಿಕೊಂಡು ಆವರೇಜ್ ಬೈಟು ಎಂದು ಮಾಡಿ 30.64 ಎಂದು ಹೇಳಿರುವ ವರದಿ ಆಧರಿಸಿಯೇ ನಾವು ಕ್ಯಾಲುಕಲೇಟ್ ಮಾಡಿಕೊಂಡಿರುವುದು. ಏಕೆಂದರೆ ಕೃಷ್ಣರಾಜಸಾಗರ ಜಲಾಶಯದಲ್ಲಿ ಸಿಲ್ ಕೆಳಗಡೆಯಿಂದಲೂ ನಮ್ಮ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಬಿಡುತ್ತೇವೆ. ಆದುದರಿಂದ, ಸರಾಸರಿ 30.684 ಎಂದು ಲೆಕ್ಕಾಚಾರ ಮಾಡಿ ಕೊಟ್ಟಿದ್ದೇವೆ. ನಮಗೆ ಬೇಕಾಗಿರುವುದು 24.348 ಇದು 30 ಇದ್ದರೂ ಸಹ ಉಳಿದಿರುವ ನೀರನ್ನು ಕುಡಿಯುವ ನೀರೆಗೆಂದು ಲೆಕ್ಕಾಚಾರ ಹಾಕಿದ್ದು ಇವರ ಮಾಹಿತಿಯನ್ನು ತಮ್ಮಿಂದ ಮುಚ್ಚುವುದಕ್ಕಾಗುವುದಿಲ್ಲ. ಏಕೆಂದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ಅವರು ಸಲ್ಲಿಸಿರುವ ಅರ್ಜಿಯಲ್ಲಿ ನಮ್ಮ ಜಲಾಶಯದ ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ 47.695 ಟಿ.ಎಂ.ಸಿ.ಯಷ್ಟಿದೆಯೆಂದು ಹೇಳಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ನಮ್ಮ ರಾಜ್ಯದ ಎಲ್ಲಾ ಅಣೆಕಟ್ಟುಗಳಲ್ಲಿ ಪ್ರತಿಯೊಂದು ಅಣೆಕಟ್ಟಿನ ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ ಎಷ್ಟಿದೆ ಮತ್ತು live storage ಎಷ್ಟಿದೆ ಎಂಬ ಮಾಹಿತಿಯನ್ನು ಕೊಡಬೇಕು.

ಶ್ರೀ ಕೆ.ಎನ್.ನಾಗೇಗೌಡ:- ಆ ಕುರಿತ ಮಾಹಿತಿಯನ್ನು ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ:- ಅದಕ್ಕಿಂತ ಮುಖ್ಯವಾಗಿ ತಮಿಳುನಾಡಿನಲ್ಲಿರುವ ಮೆಟ್ಟೂರು, ಭವಾನಿ ಮತ್ತು ಅಮರಾವತಿ ಜಲಾಶಯಗಳಲ್ಲಿ ಪ್ರತಿಯೊಂದರಲ್ಲೂ ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ ಎಷ್ಟಿದೆ ಎಂಬ ಮಾಹಿತಿಯನ್ನು ಮೊದಲು ತಿಳಿದುಕೊಳ್ಳಬೇಕು. ಅಲ್ಲಿ ಗ್ರಾಸ್ ಸ್ಟೋರೇಜ್ ಎಷ್ಟು ಇದೆ? ಅದನ್ನು ನೋಡದೆ ನಾವು ವ್ಯವಹರಿಸುವುದಕ್ಕಾಗುವುದಿಲ್ಲ. ಆ ರಾಜ್ಯದ ಪರಿಸ್ಥಿತಿ ಏನಿದೆಯೆಂದು ತಿಳಿದುಕೊಳ್ಳಬೇಕಲ್ಲಾ, ನಮ್ಮದು ಮುಖ್ಯವಲ್ಲ. ಅವರ ರಾಜ್ಯದ ಜಲಾಶಯಗಳಲ್ಲಿ ನೀರಿನ ಒಟ್ಟು ಸಂಗ್ರಹಣಾ ಸಾಮರ್ಥ್ಯ ಎಷ್ಟಿದೆ ಎಂಬುದು ನಮಗೆ ಮುಖ್ಯ.

ಶ್ರೀ ಕೆ.ಎನ್.ನಾಗೇಗೌಡ:- ನಾನು ವಿರೋಧ ಪಕ್ಷದ ನಾಯಕರುಗಳಲ್ಲಿ ಹೇಳುವುದೇನೆಂದರೆ, ನಮ್ಮ ರಾಜ್ಯದ ರೈತರು ಆತಂಕ ಪಟ್ಟುಕೊಂಡು ನಮಗೇನೋ ಬಹಳ ಅನ್ಯಾಯ ಮಾಡಿದ್ದೀರೆನ್ನುವ ಭಾವನೆ ಅವರಲ್ಲಿ ಬರುವುದು ಬೇಡ. 6.7 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸುಮಾರು 22 ರಿಂದ 24 ಟಿ.ಎಂ.ಸಿಯಷ್ಟು ನೀರು ಬೇಕಾಗುತ್ತದೆ, ಇದರ ಸರಾಸರಿ ಲೆಕ್ಕಾಚಾರ ಹಾಕುವುದಾದರೆ 30 ಟಿ.ಎಂ.ಸಿ.ಯಷ್ಟಾಗುತ್ತದೆ. ನೀರಾವರಿ, ಕುಡಿಯುವ ನೀರು ಮತ್ತು ವಿದ್ಯುತ್ ಕೇಂದ್ರ, ಈ ಮೂರಕ್ಕೂ ಸೇರಿಸಿಕೊಂಡರೂ ಮತ್ತು ಇನ್‌ಫ್ಲೋ ಲೆಕ್ಕ ಹಾಕದೇ ಕರ್ನಾಟಕ ರಾಜ್ಯಕ್ಕೆ ಜುಲೈ 30ನೇ ತಾರೀಖಿನ ತನಕ ಯಾವುದೇ ತೊಂದರೆಯಿಲ್ಲ, ನಮ್ಮ ರಾಜ್ಯದ ಜಲಾಶಯಗಳಲ್ಲಿ ನೀರು ಎಕ್ಸೆಸ್ ಇದೆಯೆಂದು ಹೇಳಲಿಲ್ಲ. ನಮ್ಮ ರಾಜ್ಯದ ಅಚ್ಚುಕಟ್ಟು ಪ್ರದೇಶಗಳಿಗೆ ನೀರುಣಿಸಲು ಜುಲೈ 30ನೇ ತಾರೀಖಿನವರೆವಿಗೂ ಯಾವುದೇ ತೊಂದರೆಯಿಲ್ಲವೆಂದು ನಾನು ಇಲ್ಲಿ ಹೇಳಲೂಬಹುದು. ಆ ಕುರಿತ ಮಾಹಿತಿಯನ್ನು ತಮಿಳುನಾಡಿನವರೂ ನಿರ್ವಹಣೆ ಮಾಡಿಕೊಂಡಿರುತ್ತಾರೆ, ಕೇಂದ್ರೀಯ ಜಲ ಆಯೋಗದವರೂ ನಿರ್ವಹಣೆ ಮಾಡಿಕೊಂಡಿರುತ್ತಾರೆ. ಇದನ್ನು ನಾನು ಇಲ್ಲಿ ಹೇಳದೇ ಹೋದರೆ ಅವರು ಅನಗತ್ಯವಾಗಿ ಸಂಶಯಪಡುವುದು ಬೇಡವೆಂದು ಅದನ್ನು ನಾನು ಕ್ಲಿಯರ್ ಮಾಡಿದ್ದೇನಷ್ಟೇ.

ಶ್ರೀ ಹೆಚ್.ಎನ್.ನಂಜೇಗೌಡ:- ನಿಮ್ಮ ಸರ್ಕಾರಕ್ಕೆ ಅವರ ರಾಜ್ಯದ ಜಲಾಶಗಳ ನೀರಿನ ಸಾಮರ್ಥ್ಯದ ಮಾಹಿತಿ ಗೊತ್ತಾಗಿದೆಯೇ?

ಶ್ರೀ ಸಿದ್ಧರಾಮಯ್ಯ:- ಆ ಬಗೆಗಿನ ಮಾಹಿತಿ ತರಿಸಿಕೊಳ್ಳಬೇಕು.

ಶ್ರೀ ಹೆಚ್.ಎನ್.ನಂಜೇಗೌಡ:- ಆ ಕುರಿತು ಮಾಹಿತಿ ತರಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಮಾಹಿತಿ ತರಸಿಕೊಳ್ಳದೇ ನೀವು ನೀರನ್ನು ಹೇಗೆ ಬಿಟ್ಟಿರಿ? Suppose in case they are having excess water, then what they require? Where is the question of releasing water? Should we not know what is what?

ಶ್ರೀ ಎಂ.ವೀರಪ್ಪ ಮೊಯಿಲಿ:- ಕನಿಷ್ಠ ಪಕ್ಷ ಆ ಕುರಿತ ಅಷ್ಟು ಮಾಹಿತಿಯನ್ನೂ ಕೂಡ ಸದನಕ್ಕೆ ಒದಗಿಸದಿದ್ದರೆ.....

SRI K.N.NAGE GOWDA:- I will give the information. I am getting the information. ತಾವು ಸ್ವಲ್ಪ ಹೊತ್ತು ಕುಳಿತಕೊಂಡರೆ ಇನ್ನು ಹತ್ತು ನಿಮಿಷಗಳಲ್ಲಿ ಆ ಕುರಿತ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನನಗಂತೂ ವಿಚಾರ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ರಾಜ್ಯದಲ್ಲಿರುವ ಜಲಾಶಯಗಳ ಅಂಕಿ-ಅಂಶ ಕೊಡುತ್ತಾರೆ ಮತ್ತು ಜಲಾಶಯಗಳಲ್ಲಿ ನೀರು ಬಹಳ ಬರುತ್ತದಾದ್ದರಿಂದ ಬಿಡುತ್ತೇವೆಂದು ಹೇಳುತ್ತಾರೆ. ಪಕ್ಕದ ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹಣೆ ಎಷ್ಟಿದೆಯೆಂಬುದರ ಬಗ್ಗೆ ಹೇಳಬೇಕು. ಆ ಒಂದು ಮಾಹಿತಿಯಾದರೂ ತಮ್ಮ ಬಳಿ ಇರಬೇಕಲ್ಲ!

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಅದೇ ಅಂಶಕ್ಕೆ ಬರುತ್ತಿದ್ದೆ. ನನಗಂತೂ ನಿಮ್ಮ ಬಗ್ಗೆ ಅನುಮಾನವಾಗಿದೆ. ನಾನು ವಾಟಾಳ್ ನಾಗರಾಜ್‌ರವರ ಪಕ್ಕದಲ್ಲಿ ಕುಳಿತಿದ್ದಾಗ ಹೇಳುತ್ತಿದ್ದರು. ನೀವು ವಿಧಾನ ಪರಿಷತ್ತಿನಲ್ಲಿ ಮಾತನಾಡುವಾಗ ಆ ಧಾಟಿ ನೋಡಿದಾಗ ನನಗೆ ಒಂದೊಂದು ಸಲ ಭಯವಾಗುತ್ತದೆ. ಏಕೆಂದರೆ, ನಾಗೇಗೌಡರು ಏನೋ ಮರೆತುಬಿಟ್ಟು, ಕೇಂದ್ರದಲ್ಲಿ ನಮ್ಮದೇ ಆದ ಸರ್ಕಾರವಿರುವುದರಿಂದ ತಾವು ತಮಿಳುನಾಡಿನ ನೀರಾವರಿ ಸಚಿವರೆಂದುಕೊಂಡಿದ್ದೀರೋ ಅಥವಾ ಕರ್ನಾಟಕ ನೀರಾವರಿ ಸಚಿವರೆಂದುಕೊಂಡಿದ್ದೀರೋ?

ಶ್ರೀ ಕೆ.ಎನ್.ನಾಗೇಗೌಡ:- ತಾವು ಒಂದು ಭಾವನೆಯಿಟ್ಟುಕೊಳ್ಳಬೇಕು. ಏನೆಂದರೆ, ನಿಮಗೆ ಈ ರಾಜ್ಯದ ಬಗ್ಗೆ ಎಷ್ಟು ಕಳಕಳಿಯಿದೆಯೋ, ಅದಕ್ಕಿಂತ ಜಾಸ್ತಿಯಾಗಿ ರಾಜ್ಯದ ಬಗ್ಗೆ ಹಾಗೂ ಮಂಡ್ಯ ಜಿಲ್ಲೆ ಬಗ್ಗೆ ಇದೆ. ನಿಮಿಗಿಂತಲೂ ಜಾಸ್ತಿ ಕಳಿಕಳಿ ಇಲ್ಲದಿರಬಹುದು. ಆದರೆ, ಮಂಡ್ಯ ಜಿಲ್ಲೆಯ ರೈತರನ್ನು ಹಾಗೂ ಕಾವೇರಿ ಜಲಾನಯನ ಪ್ರದೇಶದಲ್ಲಿರುವ ರೈತರನ್ನು ರಕ್ಷಿಸದೇ ಹೋದರೆ ನಾವು ನಿಜವಾಗಿಯೂ ರೈತರ ಮಕ್ಕಳೆನಿಸುವುದಿಲ್ಲ ಎನ್ನುವ ಭಾವನೆ ನನಗಂತೂ ಇದೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ವಿರೋಧ ಪಕ್ಷದ ನಾಯಕರಿಗೆ, ಈ ಸದನಕ್ಕೆ ಇಂತಹ ವಿಚಾರಗಳನ್ನು ಹೇಳುವ ಕಾಲದಲ್ಲಿ, ಕೇಂದ್ರೀಯ ಜಲ ಆಯೋಗದಲ್ಲಿರತಕ್ಕ ಕಾಲದಲ್ಲಿ ಮತ್ತು ತಮಿಳುನಾಡಿನಲ್ಲಿಯೂ ಕೇಳಿರುವ ಕಾಲದಲ್ಲಿ ರಾಜ್ಯದ ರೈತರಿಗೆ ಸುಳ್ಳು ಮಾಹಿತಿ ಕೊಡುವ ಅಥವಾ ಈ ಸದನಕ್ಕೆ ರಾಂಗ್ ಸಿಗ್ನಲ್ ಕೊಡುವುದು ಬೇಡವೆಂದು ನಿಮ್ಮ ಬಳಿಯಿರುವ ಫ್ಯಾಕ್ಟ್ಸ್ ಏನಿದೆ, ಅದೇ ನನ್ನ ಬಳಿಯೂ ಇದೆ. ಅದರ ಬಗ್ಗೆ ನಾನು ಹೇಳುವುದಕ್ಕಿಂತ ಮುಂಚೆ ನೀವು ಹೇಳುತ್ತಿದ್ದೀರಿ. This is not a secret document. ನಾನು ಆ ಕುರಿತು ಹೇಳಲಿಲ್ಲವೆಂದರೂ ಆ ಕುರಿತ ಮಾಹಿತಿ ನಿಮ್ಮ ಬಳಿ ಆಗಲೇ ಇದ್ದು, ನಿನ್ನೆ ನಾನು ಮಾತನಾಡುವ ಮೊದಲೇ ಈ ಅಂಕಿ-ಅಂಶಗಳ ಬಗ್ಗೆ ನೀವು

ಹೇಳಿದಿರಿ. ಅಷ್ಟರಲ್ಲಿ ಅಧ್ಯಕ್ಷರು ಸಹ ಮಧ್ಯೆ ಪ್ರವೇಶಿಸಿ ಆ ಕುರಿತು ವಿವರವಾದ ಚರ್ಚೆಗೆ ಬಂದಾಗ ತೆಗೆದುಕೊಳ್ಳಿ ಎಂದರು. ಅದರ ಬಗೆಗಿನ ಮಾಹಿತಿಯನ್ನೇ ನಿಮ್ಮ ಬಳಿ ಮುಚ್ಚಬಾರದು, ಚರ್ಚೆ ಮಾಡುವುದಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮ್ಮ ಬಗ್ಗೆ ಇಷ್ಟೊಂದು ಅಭಿಮಾನವಿದ್ದು, ನಾನು ಸನ್ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಭಾಷೆಯಲ್ಲಿಯೇ ಹೇಳುವುದಾದರೆ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ.....

ಶ್ರೀ ವಾಟಾಳ್ ನಾಗರಾಜ್:- ನನ್ನದು ಯಾವ ಭಾಷೆ? ಈಗ ಚರ್ಚೆ ಬಹಳ ಗಂಭೀರವಾಗಿ ನಡೆಯುತ್ತಿರುವಾಗ ವಿರೋಧ ಪಕ್ಷದ ನಾಯಕರು ಮಧ್ಯೆ ವಾಟಾಳ್ ನಾಗರಾಜ್‌ರವರ ಭಾಷೆ ಎಂದರು. ವಾಟಾಳ್ ನಾಗರಾಜ್‌ರವರ ಭಾಷೆ ಯಾವುದು? ನನ್ನದು ಯಾವ ಭಾಷೆ?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಅಪ್ಪಟ ಕನ್ನಡ ಭಾಷೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಚ್ಚ ಕನ್ನಡ ಕಸ್ತೂರಿ ಭಾಷೆಯೇ. ನಿಮ್ಮ ಬಗ್ಗೆ ಗೌರವವಿದೆ. ನೀವು ನಮ್ಮ ರಾಜ್ಯದ ಹಿತವನ್ನು ಕಡೆಗಣಿಸುವುದಿಲ್ಲವೆಂದಿದ್ದೀರಿ. ಆ ಒಂದು ಭಾಷೆಯಲ್ಲಿಯೇ ನಾಗೇಗೌಡರ ಬಗ್ಗೆ ಹೇಳುವುದಾದರೆ ಈಗ ಅದು ಇಲ್ಲವೆಂದು ಅವರ ಬಗ್ಗೆ ನಾವು-ನೀವೂ ಹೇಳುವಂಥ ಒಂದು ದುಸ್ಥಿತಿಗೆ ಅವರು ತಂದು ಹಾಕಿಕೊಂಡರಲ್ಲಾ ಎನ್ನುವ ಒಂದು ದುಃಖ. ನಾನು ಆದೇ ಅಂಶಕ್ಕೆ ಬರುತ್ತೇನೆ. ಅದೇ ಸಮಯಕ್ಕೆ ಸನ್ಮಾನ್ಯ ನಾಗೇಗೌಡರು ಜ್ಞಾಪಿಸಿದರು. Is it not your duty? ಪಕ್ಕದ ರಾಜ್ಯದವರು ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ನಮಗೆ 15 ಟಿ.ಎಂ.ಸಿಯಷ್ಟು ನೀರು ಬೇಕೆಂದು ಕೇಳುವಂಥ ಕಾಲದಲ್ಲಿ, ಈ ರಾಜ್ಯದ ಜನತೆಯ ಮೂಲಕ, ಈ ದೇಶಕ್ಕೆ ಒಂದು ಸಂದೇಶ, ಸತ್ಯ ಸಂಗತಿಯನ್ನು ತಿಳಿಸದೆ ಮತ್ತು ತಮಿಳುನಾಡಿನ ಜಲಾಶಯಗಳಲ್ಲಿ ಇಂತಿಷ್ಟು ನೀರು ಇರುವುದರಿಂದ ಅವರ ಬೆಳೆಗಳಿಗೆ ಯಾವುದೇ ರೀತಿ ಹಾನಿಯಾಗುವುದಿಲ್ಲವೆಂದು ತಿಳಿಸದೆ ದೇಶದ ಜನರಲ್ಲಿ ಗೊಂದಲವನ್ನುಂಟು ಮಾಡಿ ನಮ್ಮನ್ನು ಅಪರಾಧಿ ಸ್ಥಾನದಲ್ಲಿಡುವಂಥ ಒಂದು ಷಡ್ಯಂತ್ರವನ್ನು ಪಕ್ಕದ ರಾಜ್ಯದಲ್ಲಿ ಜಯಲಲಿತಾರವರು ಮುಖ್ಯಮಂತ್ರಿಯಾಗಿದ್ದಾಗ ಏನು ರೂಪಿಸಿದರೋ ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದೀರೆಂದು ಹೇಳಬೇಕಾಗಿತ್ತು, ಅಂಕಿ-ಅಂಶವನ್ನು ಪ್ರಕಟಿಸಬೇಕಾಗಿತ್ತು. ಅದಕ್ಕೋಸ್ಕರವೇ ನಾನು ಅವರು ಆ ರಾಜ್ಯದ ಸಚಿವರೋ, ಅಥವಾ ಈ ರಾಜ್ಯದ ಸಚಿವರೋ ಎಂದು ಜನರು ಅನುಮಾನ ಪಡುತ್ತಾರೆಂದು ಹೇಳಿದೆ. ಇದರಲ್ಲಿ ಒಂದು ರಾಜ್ಯ ಸರ್ಕಾರದ ಜವಾಬ್ದಾರಿ ಇದೆ. ನಮ್ಮ ರಾಜ್ಯದಲ್ಲಿರುವ ಜಲಾಶಯಗಳಲ್ಲಿ ನೀರಿನ ಮಟ್ಟ ಎಷ್ಟಿದೆ ಎನ್ನುವ ಸಂದರ್ಭದಲ್ಲಿ ಪಕ್ಕದ ತಮಿಳುನಾಡಿನಲ್ಲಿ ಕೊಯ್ಲು ಕಾರ್ಯ ಮಾಡುತ್ತಿರುವಂಥ ಕಾಲದಲ್ಲಿ ಅಲ್ಲಿನ ಜಲಾಶಯಗಳಲ್ಲಿ ನೀರಿನ ಮಟ್ಟ ಎಷ್ಟಿದೆಯೆಂದು ನೀವು ಹೇಳಲಿಲ್ಲ, ಆ ಕುರಿತ

ಮಾಹಿತಿಯನ್ನು ಬಹಿರಂಗಪಡಿಸಲಿಲ್ಲವೆಂದರೆ ಇಲ್ಲಿ ಏನೋ ಗುಟ್ಟು ಇದೆ, ಯಾವುದೋ ಕಾಣದ ಒಂದು ಕೈವಾಡವಿದೆ. ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ಇವೊತ್ತು ಈ ರಾಜ್ಯದ ರೈತರ ಹಿತವನ್ನು ಬಲಿಗೊಡುತ್ತಿದ್ದೀರೆನ್ನುವ ಭಾವನೆ ಈ ಸದನದಲ್ಲಿರುವಂಥ ಆಕಡೆ ಮತ್ತು ಈಕಡೆಯಲ್ಲಿರುವ ಬಹುತೇಕ ಸದಸ್ಯರುಗಳಿಗೆ ಬರುತ್ತಿದೆ. ಅದು ಆಗಬಾರದು. ನಾನು ನಿಮಗೆ ಕಿವಿಮಾತು ಹೇಳುವುದೇನೆಂದರೆ, ದೆಹಲಿ ನಮಗೆ ಖಾಯಂ ಅಲ್ಲ, ನಮ್ಮ ನಾಡೇ ನಮ್ಮ ಕಾರ್ಯಕ್ಷೇತ್ರ, ಕನ್ನಡಿಗರಾದ ನಮಗೆ ಮೊದಲು ಕನ್ನಡ ನಾಡು. ತಳಹದಿ ಗಟ್ಟಿಯಾಗಿರಬೇಕಲ್ಲವೇ? ನಿಮ್ಮ ಬಗ್ಗೆ ಇಷ್ಟೊಂದು ವಿಶ್ವಾಸವಿಟ್ಟು ಈ ರಾಜ್ಯದ ರೈತ ಸಮೂಹದ ಹಿತವನ್ನು ಕಾಪಾಡುತ್ತೀರೆಂದು ನಿಮಗೆ ನೀರಾವರಿ ಇಲಾಖೆ ಖಾತೆಯನ್ನು ವಹಿಸಿಕೊಟ್ಟರೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ರಾತ್ರೋರಾತ್ರಿ ಐದು ಟಿ.ಎಂ.ಸಿ.ಯಷ್ಟು ನೀರು ಬಿಡುವುದಕ್ಕೆ ಆದೇಶ ಕೊಡುತ್ತೀರಿ. ಮತ್ತು ನೀವೇ ಒಪ್ಪಿಕೊಂಡಿರಿ, ನಾನು ಹೇಳಿದಂಥ ಅಂಕಿ-ಅಂಶವನ್ನು ನೀವು ಡಿಸ್‌ಪ್ಯೂಟ್ ಮಾಡಲಿಲ್ಲ. ಅದರ ಜೊತೆಗೆ ಇವೊತ್ತು ಸ್ಪಷ್ಟವಾಗಿ ಹೇಳಬೇಕಾಗಿದೆ. ನಿಮ್ಮ ಸರ್ಕಾರ ಕೊಟ್ಟಿರುವ ಅಂಕಿ-ಅಂಶದಲ್ಲಿ ಏನೂ ವ್ಯತ್ಯಾಸವಿಲ್ಲ. ವಾಸ್ತವಿಕವಾಗಿ ಜಲಾಶಯದಲ್ಲಿರುವುದು 23.218 ಟಿ.ಎಂ.ಸಿಯಷ್ಟು ನೀರು ನಮಗೆ ಜುಲೈ ತಿಂಗಳ ಅಂತ್ಯದವರೆಗೆ ಬೇಕಾಗಿರುವುದು 24.34 ಟಿ.ಎಂ.ಸಿ.ಯಷ್ಟು ನೀರು. ಅಂದರೆ, ನಮಗೆ ಇಂದಿನ ಕೊರತೆ 1.130 ಟಿ.ಎಂ.ಸಿ ಇದು ಅಲ್ಲವೆಂದಾದರೆ ತೂಬಿನ ಕೆಳಗಡೆಯಿಂದ ನೀರನ್ನು ಏಕೆ ತೆಗೆದುಕೊಳ್ಳುತ್ತಿದ್ದೀರಿ? ಇದು ನನಗರ್ಥವಾಗುತ್ತಿಲ್ಲ. ಸಿಲ್ ಲೆವೆಲ್ ಅಂದರೆ ಅದನ್ಯಾಕೆ ಸರಾಸರಿ ಮಾಡುತ್ತೀರಿ? ಇದು ಯಾರ ಕಣ್ಣಿಗೆ ಮಣ್ಣೆರಚ್ಚುವಂಥ ಕೆಲಸ? ಅಧಿಕಾರಿಗಳು ಕೊಟ್ಟಂಥ ಮಾಹಿತಿಯಲ್ಲಿನ ತಪ್ಪನ್ನು ಸಾಬೀತುಪಡಿಸಿಕೊಳ್ಳುವುದಕ್ಕೆ ಬದಲಾಗಿ ಈ ನಿಮಿಷದಲ್ಲಿ ತಾವು ಆದೇಶ ಕೊಡಿ, ಏನೆಂದರೆ, ಈ ಸದನದ ಒಟ್ಟಾರೆ ಅಭಿಪ್ರಾಯ ಹೀಗಿದೆ. ನಮ್ಮ ರಾಜ್ಯದ ಜಲಾಶಯಗಳಲ್ಲಿ ನೀರಿಲ್ಲವೆಂದು ಹೇಳಿ. ನಿನ್ನೆ ರಾತ್ರಿ ಮಳೆ ಸುರಿಯುತ್ತಿತ್ತೇ? ತಾವು ಹೋಗಿ ನೋಡಿಕೊಂಡು ಬಂದಿದ್ರಾ? ಬೇಕಾದರೆ, ನಿಮ್ಮ ಸರ್ಕಾರದ ಪ್ರತಿನಿಧಿಗಳು, ಫೋಟೋಗ್ರಾಫರ್ ಹಾಗೂ ವಿಡಿಯೋ ಕ್ಯಾಮೆರಾಮೆನ್ ಜೊತೆ ನಾವೆಲ್ಲರೂ ಕಾವೇರಿ ಜಲಾನಯನ ಪ್ರದೇಶಗಳಿಗೆ ಭೇಟಿ ಕೊಟ್ಟು ಬರೋಣ. ಇವೊತ್ತಿಗೂ ಕೂಡ ಮೈಸೂರಿನ ಕೆ.ಆರ್.ಎಸ್‌ನಲ್ಲಿ ನೀರಿಲ್ಲದ ಕಾರಣ ಕುಡಿಯುವ ನೀರಿನ ಅಭಾವವಿದೆ ಅಲ್ಲದೆ, ಮಂಡ್ಯ ಜಿಲ್ಲೆಗೂ ಕುಡಿಯುವ ನೀರನ್ನು ಒದಗಿಸುವುದಕ್ಕಾಗುತ್ತಿಲ್ಲ. ಎಲ್ಲಾ ಕಡೆ ಬರದ ಛಾಯೆ ಇದೆ. ಇಂತಹ ಸಂದರ್ಭದಲ್ಲಿ ಅಣೆಕಟ್ಟಿನ ಕೊನೆಯ ಒಂದೆರಡು ತೂಬುಗಳಿಂದ ನೀರು ಬಿಡಲಾಗುತ್ತಿದೆಯೆಂದು ಪತ್ರಿಕೆಗಳಲ್ಲಿ ವರದಿ ಬರುತ್ತದೆ ಎನ್ನುವುದಾದರೆ ನಾನು ಸನ್ಮಾನ್ಯ ನೀರಾವರಿ ಸಚಿವರಿಗೆ ಹೇಳುತ್ತಿದ್ದೇನೆ. ನಾವೆಲ್ಲರೂ ಭಗವಂತನಲ್ಲಿ ಮಳೆಯಾಗಲೆಂದು ಪ್ರಾರ್ಥಿಸೋಣ. ಒಂದು ವೇಳೆ ನಾಳೆ ಮಳೆ ಬರದೇ ಜಲಾಶಯಗಳಲ್ಲಿ ನೀರಿಲ್ಲವೆಂದರೆ ನಮ್ಮ ರಾಜ್ಯದ ಜನರ ಗತಿ ಏನು? ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೇಳೋಣ. ಜೆ.ಹೆಚ್.ಪಟೇಲರಿಗೆ ಇವೊತ್ತು ನಾನು ಹೇಳುವುದಾದರೆ, ಕೆಲವು ಸೂಕ್ಷ್ಮವಾದ ವಿಷಯಗಳಿರುವುದರಿಂದ ಇದರ ಬಗ್ಗೆ ಒಳಗಡೆ ಮಾತನಾಡೋಣವೆಂದರು. ಏನು

ಅಂತಹ ಸೂಕ್ಷ್ಮವಾದ ವಿಚಾರ? ನೀವೇ ಹೇಳುತ್ತಿದ್ದೀರಿ. ನಮ್ಮ ರಾಜ್ಯದ ಜಲಾಶಯಗಳ ನೀರಿನ ಮಟ್ಟ ಜಗತ್ತಿಗೆ ಗೊತ್ತಿದೆ, ಕೇಂದ್ರ ಸರ್ಕಾರಕ್ಕೂ ಗೊತ್ತಿರುವುದರಿಂದ ಇದನ್ನು ಮುಚ್ಚಿಡುವ ಪ್ರಶ್ನೆಯೇ ಬರುವುದಿಲ್ಲ. ಹಾಗೆಯೇ ತಮಿಳುನಾಡಿನಲ್ಲಿರುವ ಜಲಾಶಯಗಳಲ್ಲಿ ಎಷ್ಟು ನೀರಿದೆಯೆಂಬುದು ಜಗತ್ತಿಗೇ ಗೊತ್ತಿದೆಯೆಂದು. ಪ್ರಸಕ್ತ ತಿಂಗಳಿಗೆ ಅವರಿಗೆ ಎಷ್ಟು ಪ್ರಮಾಣದ ನೀರಿನ ಅಗತ್ಯವಿದೆ? ಮತ್ತು ನಮಗೆ ಎಷ್ಟು ಪ್ರಮಾಣದಲ್ಲಿ ನೀರಿನ ಅಗತ್ಯವಿದೆಯೆಂದು ತಿಳಿದುಕೊಳ್ಳಬೇಕು. ರಾಜ್ಯದಲ್ಲಿ ಬರಗಾಲವಿದ್ದು, ಮಳೆ ಬೀಳದಿರುವುದರಿಂದ ರೈತರಿಗೆ ನೀರುಕೊಡುವುದಕ್ಕಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಬಿಟ್ಟಿದ್ದು ಸರಿಯಲ್ಲವೆಂದು ಒಂದು ವಾದವನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಮಂಡಿಸುವುದಕ್ಕೆ ಒಳ್ಳೆಯ ಅವಕಾಶವನ್ನು ಕಳೆದುಕೊಳ್ಳುತ್ತಿದ್ದೀರಿ.

1.40 ಪಿ.ಎಂ.

ನನ್ನ ಹತ್ತಿರ ಅಂಕಿಅಂಶವಿದೆ. ನಮ್ಮ ಹತ್ತಿರ ಸಾಕಷ್ಟು ನೀರಿದೆಯೆಂದು ಈ ಪರಿಸ್ಥಿತಿಯನ್ನು ತಂದರೆ ಪರಿಣಾಮವೇನಾಗುತ್ತದೆ? ತಾವು ಬಿಟ್ಟ 5 ಟಿ.ಎಂ.ಸಿ. ನೀರಿಗೆ ತಮಿಳುನಾಡಿನ ಮುಖ್ಯ ಮಂತ್ರಿಯವರು ಸ್ವಾಗತ ಮಾಡಿದರು, ಅದರಿಂದ ಅವರಿಗೆ ತೃಪ್ತಿಯಾಗಲಿಲ್ಲ, ದೂರದರ್ಶನದ ವಾರ್ತೆಯಲ್ಲಿ ಉಳಿದ ಹತ್ತು ಟಿ.ಎಂ.ಸಿ ನೀರನ್ನು ಬಿಡುವಂತೆ ಸುಪ್ರೀಂಕೋರ್ಟ್‌ನಲ್ಲಿ ಒತ್ತಾಯ ಮಾಡುತ್ತೇನೆಂದು ಹೇಳಿದರು. ಅದನ್ನು ಬಿಡಬೇಕೆಂದು ಒತ್ತಾಯ ಮಾಡಿದರು. ನೀವು 5 ಟಿ.ಎಂ.ಸಿ ನೀರನ್ನು ಬಿಟ್ಟು ಅವರು ಸುಪ್ರೀಮ್‌ಕೋರ್ಟ್‌ಗೆ ಹೋಗುವುದನ್ನು ತಡೆಯುವಲ್ಲಿಯೂ ಯಶಸ್ವಿಯಾಗಲಿಲ್ಲ. ಸುಪ್ರೀಂಕೋರ್ಟ್ ಮುಂದೆ ಕೈಕಟ್ಟಿ ಮತ್ತೆ ನೀರನ್ನು ಬಿಡಲು ಅವರು ಆದೇಶ ಕೊಡಲು ಪರೋಕ್ಷವಾಗಿ ಈ ರಾಜ್ಯದ ನೀರಾವರಿ ಸಚಿವರು ತಮಿಳುನಾಡು ಮುಖ್ಯಮಂತ್ರಿಯವರಿಗೆ ಸಹಾಯ ಮಾಡತಕ್ಕ ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಆದ್ದರಿಂದ ಅವರ ವಿರುದ್ಧ ಖಂಡನಾ ನಿರ್ಣಯವನ್ನು ಮಂಡನೆ ಮಾಡತಕ್ಕದ್ದು ಅನಿವಾರ್ಯವಾಗಿದೆ. ಮೈಸೂರು, ಮಂಡ್ಯ, ತುಮಕೂರು ಜಿಲ್ಲೆಯ ನನ್ನ ಶಾಸಕ ಸ್ನೇಹಿತರು ಇಲ್ಲಿದ್ದಾರೆ. ನಮ್ಮ ಮಾಲೀಕರು ಅವರುಗಳು ತಾನೇ. ನಮ್ಮ ಜೊತೆ ಅಲ್ಲಿನ ಪರಿಸ್ಥಿತಿಯನ್ನು ನೋಡಲು ಬರುತ್ತೀರಾ? ತಾವು ಒಬ್ಬರೇಹೋಗಬೇಡಿ, ಜನರು ಸುಮ್ಮನೆ ಬಿಡುವುದಿಲ್ಲ, ಮಂಡ್ಯದ ಜನರನ್ನು ಸಮಾಧಾನ ಮಾಡಲು ತಾವೇನಾದರೂ ಹುಮ್ಮಸ್ಸಿನಿಂದ ಹೋಗುವುದಿದ್ದರೆ ಒಬ್ಬರೆ ಹೋಗಬೇಡಿ. ಮಾನ್ಯ ದೇವೇಗೌಡರು ಹೋದ ವರ್ಷ ನೀರನ್ನು ಬಿಟ್ಟಾಗ ಅಲ್ಲಿನ ಜನರನ್ನು ಸಮಾಧಾನ ಮಾಡಲು ಹೋದಾಗ ಅರ್ಥವಿತ್ತು, ಆದರೆ ಈಗ ತಾವು ಅಲ್ಲಿಗೆ ಹೋದರೆ ಗತಿಯೇನು? ನಾವು ಮತ್ತು ವಾಟಾಳ್‌ನಾಗರಾಜ್‌ರವರು ತಾವು ಸಭೆಯಲ್ಲಿ ಇಲ್ಲದಿದ್ದಾಗ ಅವರು ಎಲ್ಲಿ ಹೋದರೋ ಎಂದು ಮಾತನಾಡಿಕೊಳ್ಳುತ್ತಿದ್ದೆವು. ಏನೋ ಅನಿವಾರ್ಯ ನಾನು ಈ ಇಲಾಖೆಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದೇನೆ, ನಾನು ಈ ಇಲಾಖೆಯನ್ನು ಒಪ್ಪಿಕೊಳ್ಳಬಾರದಿತ್ತು ಎಂದು ಹೇಳಿ. ಇದೇ ಸದನದಲ್ಲಿ ಯಾವ ಒತ್ತಾಯಕ್ಕೆ ಮಣಿದು ನೀರನ್ನು

ಬಿಡಬೇಕಾಯಿತು ಎನತಕ್ಕ ಸತ್ಯಸಂಗತಿಯನ್ನು ತಾವು ಅಲ್ಲೇ ಕುಳಿತುಕೊಂಡು ಹೇಳತಕ್ಕಂಥ ಕಾಲ ಎಷ್ಟು ದಿವಸವಿದೆ ಎಂಬ ಬಗ್ಗೆ ಲೆಕ್ಕ ಮಾಡಬೇಕಾಗಿದೆ. ಆದ್ದರಿಂದ ನಾನು ಹೇಳಿದ್ದುದು, ಎ.ಬಿ.ಸಿ.ಡಿ ಎನ್ನತಕ್ಕ ಗ್ರೂಪ್ ಇದೆ, ಯಾರನ್ನೋ ತೃಪ್ತಿ ಪಡಿಸಲು ಏನೇನೋ ಮಾಡಿಕೊಂಡು ರಾಜ್ಯದ ಜನರ ಮೇಲೆ ಕಲ್ಲು ಹಾಕತಕ್ಕ ಕೆಲಸವನ್ನು ಮಾಡಬೇಡಿ. ಇವತ್ತು ಒಳ್ಳೆಯ ಅವಕಾಶ ನಿಮ್ಮ ಸರ್ಕಾರಕ್ಕೆ ಸಿಕ್ಕಿದೆ. ಈಗಲಾದರೂ ಪ್ರಧಾನಿಯವರ ಮತ್ತು ಕೇಂದ್ರ ಸರ್ಕಾರದ ಸಚಿವರ ಮನವೊಲಿಸಿ ಯಾವುದೇ ಕಾರಣಕ್ಕೂ ರಾಷ್ಟ್ರೀಯ ಜಲನೀತಿ ಮಾರ್ಗಸೂಚಿ ಬರುವವರೆಗೆ ಮತ್ತೆ ಟ್ರಿಬ್ಯೂನಲ್‌ಗೆ ಅಧ್ಯಕ್ಷರನ್ನು ನೇಮಕ ಮಾಡತಕ್ಕ ಪ್ರಯತ್ನ ಮಾಡದಂತೆ ನೋಡಿಕೊಳ್ಳತಕ್ಕ ದೊಡ್ಡ ಜವಾಬ್ದಾರಿ ನಿಮ್ಮ ಕೈಯಲ್ಲಿದೆ. ಸುಪ್ರೀಂ ಕೋರ್ಟ್‌ಗೂ ಹೋಗಿ, ಆದರೆ ರಾಷ್ಟ್ರೀಯ ಜಲ ನೀತಿ ಮಾರ್ಗ ಸೂಚಿ ಬರುವವರೆಗೆ ಮತ್ತೆ ಟ್ರಿಬ್ಯೂನಲ್‌ಗೆ ಅಧ್ಯಕ್ಷರನ್ನು ಕೇಂದ್ರಸರ್ಕಾರವಾಗಲಿ, ಸುಪ್ರೀಂ ಕೋರ್ಟ್ ಆಗಲಿ ನೇಮಕ ಮಾಡದಂತೆ ನೋಡಿಕೊಳ್ಳತಕ್ಕ ಜವಾಬ್ದಾರಿ ನಿಮ್ಮದಾಗಿದೆ. ದೈವಿಕವಾಗಿ ನಿಮಗೆ ಇವತ್ತು ಅನುಕೂಲವಾಗಿದೆ. ಒಂದು ಸಲ ಟ್ರಿಬ್ಯೂನಲ್‌ನ ಅಧ್ಯಕ್ಷರು ರಾಜೀನಾಮೆ ಕೊಟ್ಟರೆ ಅದರ ಸದಸ್ಯತ್ವ ಸೀಜ್ ಆಗುತ್ತದೆ. ತಮಿಳುನಾಡಿನ ಮುಖ್ಯಮಂತ್ರಿಯವರು ಹೊಸದಾಗಿ ಟ್ರಿಬ್ಯೂನಲ್‌ಗೆ ಹಿಂದಿನ ಅಧ್ಯಕ್ಷರನ್ನೇ ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತಿರುವುದನ್ನು ತಾವು ಮರೆಯಬೇಡಿ. ಆ ಅಧ್ಯಕ್ಷರೇ ಬೇಕು ಎಂಬುದಕ್ಕೆ ಕಾರಣವನ್ನು ನಾನು ಹೇಳಲು ಬಯಸುವುದಿಲ್ಲ. ನಮ್ಮ ಮತ್ತು ನಿಮ್ಮ ಜವಾಬ್ದಾರಿ ಯಾವುದೇ ಕಾರಣಕ್ಕೆ ಟ್ರಿಬ್ಯೂನಲ್ ಮತ್ತೆ ರಚನೆಯಾಗದಂತೆ ನೋಡಿಕೊಳ್ಳುವುದಾಗಿದೆ. ರಾಷ್ಟ್ರೀಯ ಜಲನೀತಿಯ ಮಾರ್ಗ ಸೂಚಿಗಳು ಬರುವವರೆಗೆ ಅದು ಆಗಬಾರದು. ಇದರ ಬಗ್ಗೆ ಮಾನ್ಯ ನಂಜೇಗೌಡರು ಅವರದ್ದೇ ಆದ ಅಂಕಿಅಂಶಗಳೊಂದಿಗೆ ವಾದ ಮಾಡಿದ್ದಾರೆ, ಹೇಳಿದ್ದಾರೆ, ಇನ್ನೂ ಅನೇಕ ಹಿರಿಯ ಸದಸ್ಯರುಗಳು ಮಾತನಾಡುವವರಿದ್ದಾರೆ. ಆದ್ದರಿಂದ ಇಂದು ಟ್ರಿಬ್ಯೂನಲ್ ಆಗಲಿ ಸುಪ್ರೀಂ ಕೋರ್ಟ್ ಆಗಲಿ, ಇತರೆ ಯಾವುದೇ ಕೋರ್ಟ್ ಆಗಲಿ ರಾಷ್ಟ್ರೀಯ ಜಲನೀತಿಯ ಮಾರ್ಗಸೂಚಿಯನ್ನು ರಚನೆ ಮಾಡದಯೇ ನದಿ ನೀರನ್ನು ಹಂಚಲು ಆಗದೇ ಇರತಕ್ಕ ಪರಿಸ್ಥಿತಿಯಲ್ಲಿ ಮಾತುಕತೆಯ ಮೂಲಕ ನೀರನ್ನು ಹಂಚಿಕೊಳ್ಳತಕ್ಕ ಕೆಲಸವನ್ನು ಸಧ್ಯಕ್ಕೆ ಮಾಡೋಣ. ಹಿಂದೆ ಟ್ರಿಬ್ಯೂನಲ್ ನೇಮಕವಾಗುವುದಕ್ಕೂ ಮೊದಲು ನಾವು ಮಾತುಕತೆಯ ಮೂಲಕವೇ ನೀರನ್ನು ಹಂಚಿಕೊಳ್ಳುತ್ತಿದ್ದೆವು. ಆ ಪದ್ಧತಿಯನ್ನು ಈಗಲೂ ಮುಂದುವರೆಸೋಣ. ಆ ದಿಕ್ಕಿನಲ್ಲಿ ಸರ್ಕಾರ ಹೆಜ್ಜೆ ಇಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಪ್ರತಿ ಬಾರಿ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ಏಕೆ ನೀರನ್ನು ಬಿಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಾಗೇಗೌಡರು ನೀರಾವರಿ ಸಚಿವರಾದ ಮೇಲೂ ಈ ಜಲಾಶಯದ ಬಲದಂಡೆ ಕಾಲುವೆ ದುರಸ್ತಿ ಮಾಡುವ ಕಡೆಯಲ್ಲಿ ಆ ಭಾಗದ ಜನರಿಗೆ ನೀರನ್ನು ಕೊಡುವ ಬಗ್ಗೆ ಪ್ರಯತ್ನವಾಗಲಿಲ್ಲ. ನಮ್ಮ ರೈತ ಸಂಘದ ಮುಖಂಡರು ಹೇಳಿದಂತೆ ಪ್ರತಿ ಸಂದರ್ಭದಲ್ಲಿ ನೀರುಬಿಡತಕ್ಕ ಸ್ಟೋರೇಜ್ ಪಾಯಿಂಟ್ ಆಗಿ, ನೀರುಗಂಟಿ ಕೆಲಸವಾಗಿ ಸರ್ಕಾರ ಕೆಲಸ ಮಾಡುತ್ತಿದೆ. ಈಗಾಗಲೇ

ಜೂನ್ 1996ರಲ್ಲಿ 5.6 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೀರಿ. ಜುಲೈನಲ್ಲಿ ಮೂರನೇ ತಾರೀಖಿನವರೆಗೆ 0.387 ಟಿ.ಎಂ.ಸಿ. ನೀರನ್ನು ಬಿಡಲಾಗಿದೆ. ಈಗ ಯಾವ ರೀತಿ ಇನ್‌ಫ್ಲೋವನ್ನು ನೋಡಿಕೊಂಡು ನೀರನ್ನು ಬಿಡುತ್ತಿದ್ದೀರಿ ಅದೇ ನೀರಿನ ಒಳಹರಿವನ್ನು ನೋಡಿಕೊಂಡು ನೀರನ್ನು ಬಿಡಬಹುದಾಗಿತ್ತು. ಹಿಂದೆ 6 ಟಿ.ಎಂ.ಸಿ. ನೀರನ್ನು ಬಿಡುತ್ತೇವೆಂದು ಅವತ್ತಿನ ಪ್ರಧಾನಿಯವರನ್ನು ತೃಪ್ತಿಪಡಿಸುವುದಕ್ಕೋಸ್ಕರ ಈ ರಾಜ್ಯದ ಜನರ ಹಿತವನ್ನು ಬಲಿಕೊಟ್ಟು 11 ಟಿ.ಎಂ.ಸಿ. ನೀರನ್ನು ಬಿಟ್ಟರಿ. ಅದೇ ರೀತಿ, ಲೆಕ್ಕದಲ್ಲಿ ಈಗ 5 ಟಿ.ಎಂ.ಸಿ. ನೀರನ್ನು ಬಿಟ್ಟಿದ್ದೇವೆಂದು ತಾವು ಹೇಳಿದರೂ ಒಂದು ಅಂದಾಜಿನ ಪ್ರಕಾರ ಕನಿಷ್ಠ 10 ಟಿ.ಎಂ.ಸಿ. ನೀರನ್ನಾದರೂ ಬಿಡುತ್ತೀರಿ. ಆ ರೀತಿ ದೆಹಲಿಯಲ್ಲಿ ಮಾತುಕತೆ ನಡೆದಿದೆ. ಲೋಕಸಭೆಯ ಕಾರ್ಯಕಲಾಪ ಪ್ರಾರಂಭವಾಗುತ್ತಿದೆ, ನಿಮ್ಮ ವಕ್ರದೃಷ್ಟಿ ನಮ್ಮ ಮೇಲೆ ಬಿದ್ದರೆ ನಾವು ಭಸ್ಮವಾಗುತ್ತೇವೆ. ಆದ್ದರಿಂದ ನಾವು ನೀವು ಅಣ್ಣತಮ್ಮಂದಿರಂತೆ, 5 ಟಿ.ಎಂ.ಸಿ. ಲೆಕ್ಕಕ್ಕೆ ತೆಗೆದುಕೋ, 10 ಟಿ.ಎಂ.ಸಿ. ಬಿಡು. ಈ ರೀತಿ ರಾಜ್ಯದ ಹಿತವನ್ನು ಬಲಿಕೊಡತಕ್ಕ ಸಂದರ್ಭ ರಾಜ್ಯದಲ್ಲಿದೆ ಎನ್ನತಕ್ಕ ಅನುಮಾನ ಎಲ್ಲರಲ್ಲೂ ಕಾಡುತ್ತಿದೆ. ಈ ದೇಶದ ಪ್ರಧಾನಿಯವರು ಒಂದು ರೀತಿಯಾದ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಒಂದು ಕಡೆ ಆಂಧ್ರದವರ ಮತ್ತೊಂದು ಕಡೆ ತಮಿಳುನಾಡಿನವರ ಕಾಟ. ಏಕೆಂದರೆ ಅವರು ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ. ಕರ್ನಾಟಕ ಪ್ರಧಾನಮಂತ್ರಿಗಳ ರಾಜ್ಯ, ಇಲ್ಲಿನ ಜನರು ಶಾಂತಿಪ್ರಿಯರು, ಆದ್ದರಿಂದ ಪ್ರಧಾನಿಯವರು ನಾಗೇಗೌಡರ ಜೊತೆ ಮಾತನಾಡಿ 5 ಟಿ.ಎಂ.ಸಿ ನೀರನ್ನು ಬಿಡಿಸಿಬಿಟ್ಟರು. ಮುಂದೆ ಏನು ಅನಾಹುತವಾಗುತ್ತದೆ? ನಮ್ಮವರೇ ಪ್ರಧಾನಮಂತ್ರಿಯವರಾಗಿದ್ದಾರೆ, ನಮ್ಮ ನೀರಾವರಿ ಯೋಜನೆಗಳಿಗೆ ಅಕ್ಕಪಕ್ಕದ ರಾಜ್ಯಗಳಿಂದ ಕಂಟಕವಾಗದಂತೆ ನೋಡಿಕೊಳ್ಳುತ್ತಾರೆಂದು ನಾವು ಅಂದುಕೊಂಡಿದ್ದೇವೆ. ಆದರೆ ಅವರು ಇಕ್ಕಟ್ಟಿಗೆ ಸಿಕ್ಕಿಕೊಂಡು ಮುಂದೇ ಬರತಕ್ಕ ದಿವಸಗಳಲ್ಲಿ ನಮ್ಮ ರಾಜ್ಯದ ಹಿತವನ್ನು ಬಲಿ ಕೊಟ್ಟಾರು. ಅಂದು ಪ್ರಧಾನಮಂತ್ರಿಗಳಾಗಿದ್ದ ನರಸಿಂಹರಾಯರು ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರ ಬೆಂಬಲಬೇಕಾಗಿದ್ದರಿಂದ ನಮ್ಮ ರಾಜ್ಯವನ್ನು ಕಡೆಗಣಿಸಿ ನೀರನ್ನು ಬಿಡಿಸಿದರು, ಅನ್ಯಾಯ ಮಾಡಿದರು, ಇಂದು ತಮಿಳುನಾಡಿನ ಮುಖ್ಯಮಂತ್ರಿಯವರ ಬೆಂಬಲ ಬೇಕು ಎನ್ನತಕ್ಕ ಉದ್ದೇಶದಿಂದ ಈ ರಾಜ್ಯದ ಹಿತವನ್ನು ಬಲಿ ಕೊಡತಕ್ಕ ಅಕ್ಷಮ್ಯ ಅಪರಾಧವನ್ನು ಅವರು ಮಾಡಲು ತಾವು ಸಹಕಾರ ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಪ್ರಧಾನಿಯವರ ಮನವೊಲಿಸಿ ಈ ರಾಜ್ಯದ ಜನರು ತಮ್ಮನ್ನು ಕ್ಷಮಿಸುವುದಿಲ್ಲವೆಂದು ಹೇಳಿ ಇನ್ನು ಮುಂದಾದರೂ ನೀರು ಬಿಡುವುದನ್ನು ತಡೆಯಬೇಕೆಂದು ಒತ್ತಾಯ ಮಾಡುತ್ತೇನೆ. ಕಾವೇರಿ ಟ್ರಿಬ್ಯೂನಲ್ ಏನು ಕಾವೇರಿ ಜಲಾನಯನ ಪ್ರದೇಶದ ಬಗ್ಗೆ ಹಂತ ಹಂತವಾಗಿ 205 ಟಿ.ಎಂ.ಸಿ ಪ್ರತಿ ತಿಂಗಳು ನೀಡಬೇಕೆಂದು ಅದೆ ಮಧ್ಯಂತರ ಆದೇಶವನ್ನು ಕೊಟ್ಟಿದ್ದಾರೆ ಇವತ್ತಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲವೆಂಬುದು ನಮಗೆ ಮನವರಿಕೆಯಾಗಿದೆ. ಕಾವೇರಿ ಅಚ್ಚುಕಟ್ಟಿನ ನಿರ್ಮಾಣದ ಹಂತದಲ್ಲಿರುವ ಎಲ್ಲಾ ಯೋಜನೆಗಳನ್ನು ಮುಗಿಸಿದ್ದರೆ ಇನ್ನೂ ಸುಮಾರು 27.85ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸಲು ಸಾಧ್ಯವಾಗುತ್ತಿತ್ತು. ಇದರ ಬಗ್ಗೆ

ನಾವು ಕಳೆದ ಎಳೆಂಟು ವರ್ಷದಿಂದ ಒತ್ತಾಯ ಮಾಡಿಕೊಂಡು ಬಂದಿದ್ದೇವೆ. ವರುಣಾ ಕಾಲುವೆ, ಏತನೀರಾವರಿ ಯೋಜನೆಗಳ ಕಡೆಗೆ ಸರ್ಕಾರ ಗಮನ ಕೊಡದೆ ಕೇವಲ ಕುರ್ಚಿಯನ್ನು ಉಳಿಸಿಕೊಳ್ಳಲು ರಾಜ್ಯದ ಹಿತವನ್ನು ಬಲಿಕೊಡತಕ್ಕ ಕೆಲಸವನ್ನು ಮಾಡುತ್ತಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಕೇವಲ ಶೇಕಡಾ 42.6ರಷ್ಟು ಪ್ರದೇಶ ಮಾತ್ರ ನೀರಾವರಿಗೆ ಒಳಪಡಿಸಲು ಸಾಧ್ಯವಾಗಿದೆ. ಇವರ ಬಗ್ಗೆ ವಿಶೇಷವಾದ ಗಮನಕೊಡಬೇಕು. ನಮ್ಮ ಜಲಾನಯನ ಪ್ರದೇಶದಲ್ಲಿ ನೀರಿಲ್ಲದಿರುವಂಥ ಕಾಲದಲ್ಲಿ ಯಾವ ಸರ್ಕಾರ ಏಕಪಕ್ಷೀಯವಾಗಿ ನಿರ್ಣಯವನ್ನು ತೆಗೆದುಕೊಂಡು ನೀರನ್ನು ಬಿಡುವಂಥ ನಿರ್ಣಯವನ್ನು ತೆಗೆದುಕೊಂಡು ನೀರನ್ನು ಬಿಡುತ್ತಿದ್ದಿರೋ ಅದನ್ನು ತಕ್ಷಣ ನಿಲ್ಲಿಸಬೇಕು. ಸುಪ್ರೀಂ ಕೋರ್ಟ್‌ಗೆ ನಮ್ಮ ಜಲಾನಯನ ಪ್ರದೇಶದ ನೀರಿನ ಪರಿಸ್ಥಿತಿ, ಬರಗಾಲವಿರುವ ಸಮಯದಲ್ಲಿ ನೀರನ್ನು ಬಿಡಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು. ಬಹುಶಃ ಈ ಸದನದ ಎಲ್ಲಾ ಶಾಸಕರಿಗೆ ಇದು ಒಂದು ರೀತಿಯಾದ ಸತ್ವಪರೀಕ್ಷೆಯಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ 159ರ ಅಡಿಯಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇವೆ, ಚರ್ಚೆ ಮಾಡಲು ಅಡ್ಮಿಟ್ ಆಗಿರುವ ಈ ಕಾಲದಲ್ಲಿ ಓಟಿಂಗ್ ಆಗುತ್ತದೆ. ಆ ಸಂದರ್ಭದಲ್ಲಿ ಅಧಿಕಾರದಲ್ಲಿರುವ ನಮ್ಮ ಶಾಸಕ ಮಿತ್ರರು ರಾಜ್ಯದ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ನಿರ್ಣಯವನ್ನು ತೆಗೆದುಕೊಳ್ಳದೇ ತಮಿಳುನಾಡಿಗೆ ಅನುಕೂಲ ಮಾಡಿಕೊಡತಕ್ಕ ನಿರ್ಣಯ ತೆಗೆದುಕೊಂಡರೆ ಸರಿಯಲ್ಲ. ನಾಳೆ ನಾವು ನೀವು ನಮ್ಮ ಕ್ಷೇತ್ರಕ್ಕೆ ಹೋಗಿ ಮತ್ತೆ ಆಯ್ಕೆಯಾಗಿ ಬರಬೇಕು, ಜನರ ಆಶೀರ್ವಾದ ನಮಗೆ ಬೇಕು, ಕನ್ನಡಿಗರ ಆಕ್ರೋಷಕ್ಕೆ ನಾವು ಗುರಿಯಾಗಬಾರದೇಂದು ಇದ್ದರೆ ಬಹಳ ಜನ ನಮ್ಮ ಶಾಸಕ ಸ್ನೇಹಿತರು ಓಟಿಂಗ್ ಸಂದರ್ಭದಲ್ಲಿ ನಮ್ಮ ಪರವಾಗಿ ನಿಂತು ನಮ್ಮ ನಿರ್ಣಯಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೀರೋ ಅಥವಾ ಅದಕ್ಕೂ ಮೊದಲು ನಿಮ್ಮ ಸಭೆಯನ್ನು ಕರೆದು ನೀರನ್ನು ಬಿಡುತ್ತಿರುವುದನ್ನು ತಕ್ಷಣವೇ ನಿಲ್ಲಿಸಿ, ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದೆ ಹೋಗತಕ್ಕ ಪ್ರಯತ್ನ ಮಾಡಬೇಕೆಂದು ವಿನಂತಿಸುತ್ತೇನೆ. ಕೇಂದ್ರ ಸರ್ಕಾರದಿಂದ ಕಾರ್ಯದರ್ಶಿಯವರಿಗೆ ಬರುವುದರ ಬದಲಾಗಿ ಮಾನ್ಯ ನಾಗೇಗೌಡರಿಗೆ ಫ್ಯಾಕ್ಸ್ ಸಂದೇಶ ಬಂದಿದೆಯೆಂದು ಸುದ್ದಿ ಇದೆ. ಸಾಧ್ಯವಾದರೆ ಏನು ಸಂದೇಶ ಬಂದಿದೆ, ಮತ್ತೆ ಏನಾದರೂ ನೀರನ್ನು ಬಿಡಬೇಕೆಂದು ಬಂದಿದೆಯೇ ಎಂಬ ಬಗ್ಗೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದನ್ನು ತಿಳಿಸತಕ್ಕ ಪ್ರಯತ್ನ ಮಾಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಫ್ಯಾಕ್ಸ್ ಸಂದೇಶವೆಂದರೆ, ಪ್ರಧಾನಮಂತ್ರಿಗಳಿಂದ ಬಂದಿದೆಯೇ, ನೀರಾವರಿ ಕಾರ್ಯದರ್ಶಿಯವರಿಂದ ಬಂದಿದೆಯೇ, ನಿರಾವರಿ ಸಚಿವರಿಂದ ಬಂದಿದೆಯೇ, ಯಾರಿಂದ ಬಂದಿದೆಯೆಂದು ತಾವು ಕೇಳಿದರೆ ಅವರು ಹೇಳುತ್ತಾರೆ. ಫ್ಯಾಕ್ಸ್‌ನ್ನು ಅವರಿಗೆ ಬೇಕಾದವರು ಮಾಡಬಹುದು.

ಶ್ರೀ ಸಿದ್ಧರಾಮಯ್ಯ:- ಮಾನ್ಯ ವಿರೋಧ ಪಕ್ಷದ ನಾಯಕರು ಕಲ್ಪನೆ ಮಾಡಿ ಹೇಳುತ್ತಿರುವುದರಿಂದ ಅವೆಲ್ಲಾ ಹೇಗೆ ಹೇಳುವುದಕ್ಕಾಗುತ್ತದೆ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಕಲ್ಪನೆ ಮಾಡಿ ಹೇಳುತ್ತಿಲ್ಲ. ಈ ಫ್ಯಾಕ್ಸ್ ಮೆಸೇಜ್ ಏನು? ಯಾರಿಂದ ಬಂದಿದೆ? ಯಾರಿಗೆ ಬಂದಿದೆ ಎಂಬುದು ಮಾನ್ಯ ಖರ್ಗೆಯವರಿಗೆ ಖಚಿತವಾಗಿ ಗೊತ್ತಿದೆ ಎಂದು ನಾನು ಅಂದುಕೊಂಡಿರುತ್ತೇನೆ. ಏಕೆಂದರೆ ನಿನ್ನೆ ದಿವಸ ಇದೆಲ್ಲಾ ಚರ್ಚೆಯಾದಾಗ ನೀರು ಬಿಡುತ್ತಾರೆ ಎನ್ನುವುದಕ್ಕೆ ಮುಂಚೆ ಇಲ್ಲಿ ಬಂದು ಪಕ್ಕದಲ್ಲಿ ಕುಳಿತುಕೊಂಡಿರಿ ಮೊನ್ನೆಯ ದಿವಸ. ನಾನು ಯಾವುದೋ ಮೂಡ್‌ನಲ್ಲಿ ಮಾನ್ಯ ನಾಗೇಗೌಡರವರು ಪ್ರೀತಿಯಿಂದ, ವಿಶ್ವಾಸದಿಂದ ಇಲ್ಲಿಗೆ ಬಂದಿದ್ದಾರೆ, ಕುಳಿತುಕೊಂಡಿದ್ದಾರೆ ಎಂದುಕೊಂಡರೆ, ಯಾವುದೋ ಇಕ್ಕಟ್ಟಿಗೆ ಸಿಲುಕಿ ಇವತ್ತು ನಾನು ನೀರು ಬಿಡುತ್ತಿದ್ದೇನೆ, ಸ್ವಲ್ಪ ಇದರ ಬಗ್ಗೆ ಅವಾಂತರ ಮಾಡಬೇಡಿ ಎಂದು ಕೇಳುವುದಕ್ಕೆ ನನ್ನ ಬಳಿಗೆ ಬಂದಿದ್ದೀರ ಎಂದು ನಾನು ಅಂದುಕೊಂಡಿದ್ದೆ. ಬಹುಶಃ ಈಗ ಯಾವುದಾದರೂ ಒಂದು ಗೊಂದಲದಲ್ಲಿ ಸಿಕ್ಕಿ ಹಾಕಿಕೊಂಡಿದ್ದರೆ, ನಾನು ಇಲ್ಲಿ ಮಂತ್ರಿಯಾಗಿರುವವರೆಗೂ, ನೀರಾವರಿ ಸಚಿವನಾಗಿ ಇಂತಹ ಅನ್ಯಾಯ ನಾಡಿನ ಜನರಿಗೆ ಮಾಡುವುದಕ್ಕಾಗುವುದಿಲ್ಲ, ಜನ ನಂಬಿಕೊಂಡು ಬಂದರು, ಅವರಿಗೆ ನಾನು ವಿಶ್ವಾಸಘಾತುಕತನ ಮಾಡುವುದಕ್ಕಾಗುವುದಿಲ್ಲ, ಈ ನಿಮಿಷಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ನಾನು ನೀರು ಬಿಡುವುದನ್ನು ನಿಲ್ಲಿಸುತ್ತೇನೆ, ತಮಿಳುನಾಡಿಗೆ ಈ ವಿಷಯವನ್ನು ತಿಳಿಸುತ್ತೇನೆ ಎಂದು ಹೇಳಿದರೆ ನೀವು ಉಳಿಯುತ್ತೀರಿ, ನಿಮ್ಮ ದೃಷ್ಟಿಯಿಂದ, ರಾಜ್ಯದ ಜನರ ದೃಷ್ಟಿಯಿಂದ ದೊಡ್ಡ ಒಂದು ಗೌರವಕ್ಕೆ ಪಾತ್ರರಾಗುತ್ತೀರಿ, ನಿಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮಂತ್ರಿಮಂಡಲದಿಂದ ಹೊರಗೆ ಹೋಗುವುದು ಸೂಕ್ತ, ನಿಮ್ಮ ದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಎಂದು ನಾನು ಹೇಳುತ್ತೇನೆ. ಬಹುಶಃ ಈಗಾಗಲೇ ನಿಮ್ಮ ಮನಸ್ಸು ನೊಂದಿದೆ, ನಿಮ್ಮ ಮುಖವನ್ನು ನೋಡಿದಾಗ, ನಿಮ್ಮ ಮನಸ್ಸಿನ ನೋವನ್ನು, ನೀವು ಮಾತನಾಡಬೇಕಾದರೆ, ಏನೋ ನಿನ್ನೆ ದಿವಸ ವಿಧಾನ ಪರಿಷತ್ತಿನಲ್ಲಿ ಹೀಗೆಲ್ಲಾ ಹೇಳಿಬಿಟ್ಟೆ ನಾನು, ಅಕ್ಷಮ್ಯ ಅಪರಾಧ ಆಯಿತು ಎನ್ನುವ ಅರಿವು ನಿಮಗೆ ಇದೆ. ಏಕೆಂದರೆ ವಿಧಾನ ಪರಿಷತ್ತಿನಲ್ಲಿ ನೀವು ಕೆಲಸ ಮಾಡುತ್ತಿರುವುದನ್ನು ನಾವು ನೋಡಿದವರು. ಅಂದರೆ ಈ ನಾಡಿನ ಜನರಿಗೆ, ಅಧಿಕಾರ ಸಿಕ್ಕಿದಾಗ ಒಂದು ರೀತಿ ನಡೆದುಕೊಳ್ಳುತ್ತಾರೆ, ವಿರೋಧ ಪಕ್ಷದಲ್ಲಿದ್ದಾಗ ಒಂದು ತರಹ ನಡೆದುಕೊಳ್ಳುತ್ತಾರೆ ಎನ್ನುವ ಭಾವನೆ ನಿಮ್ಮಿಂದ ಆಗಬಾರದು ಎಂಬ ದೃಷ್ಟಿಯಿಂದ ನಾನೀಗ ಮತ್ತೆ ಒತ್ತಾಯ ಮಾಡುತ್ತಿದ್ದೇನೆ, ದಯಮಾಡಿ ತಾವು ಈ 30 ಟಿ.ಎಂ.ಸಿ. ನೀರಿನಲ್ಲಿ ಎಷ್ಟು ವಾಸ್ತವಿಕವಾಗಿ ನಮಗೆ ಬೇಕು, ಎಷ್ಟು ಉಪಯೋಗಿಸಿಕೊಳ್ಳಬೇಕು ಎಂಬ ಅರಿವು ನಿಮಗೆ ಇದೆ ಎಂಬ ದೃಷ್ಟಿಯಿಂದ, ನೀರು ಬಿಡುವುದನ್ನು ಈ ಕ್ಷಣದಲ್ಲಿ ನಿಲ್ಲಿಸಿ ಇಲ್ಲದಿದ್ದರೆ ನಾಲ್ಕಾರು ಜನ, ಹಾಗೂ ಸಚಿವರನ್ನು ವಿಡಿಯೋಗ್ರಾಫರ್ ಮತ್ತು ಕ್ಯಾಮರಾಮೆನ್ ಇವರನ್ನೆಲ್ಲಾ ಕಳುಹಿಸಿಕೊಟ್ಟು ಅಲ್ಲಿ ವಾಸ್ತವಿಕ ಸ್ಥಿತಿಯನ್ನು ನೋಡಿಕೊಂಡು ಬರುವುದಕ್ಕಾದರೂ ನೀವು ಅವಕಾಶ ಕೊಟ್ಟು, ಆ ಕಾರ್ಯಕ್ರಮದ ವ್ಯವಸ್ಥೆಯನ್ನು ಮಾಡಬೇಕೆಂದು ಒತ್ತಾಯ ಮಾಡಿ, ಈ ಒಂದು ಸಂದರ್ಭದಲ್ಲಿ ಇನ್ನೂ ಅನೇಕ ಸ್ನೇಹಿತರು ಮಾತನಾಡುವವರಿದ್ದಾರೆ. ಬಹುಶಃ ಅದರಲ್ಲಿ ನುರಿತಿರುವಂತಹ ಅನೇಕ ಹಿರಿಯರು ಮಾತನಾಡಿದರೆ ತಾವು ಕನ್‌ವೀನ್ಸ್ ಆಗುತ್ತೀರಿ, ನಮ್ಮ ಒಂದು

ಒತ್ತಾಯಕ್ಕೆ ಮಣಿಯುತ್ತೀರಿ ಎಂದು ನಾನು ಅಂದುಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ವಿರೋಧ ಪಕ್ಷದ ನಾಯಕರು ತಮಿಳುನಾಡಿನ ರಿಸರ್‌ವಾಯರ್ಸ್ ಪೊಸಿಷನ್ ಕೇಳಿದ್ದರು. ನನ್ನ ಬಳಿ ಈಗ ಆ ಮಾಹಿತಿ ಇದೆ, ನಿಮಗೆ ಹೇಳುತ್ತೇನೆ. ಅದು ನಿಮಗೆ ಸಹಾಯಕವಾಗುತ್ತದೆಂದು ನಾನು ಭಾವಿಸುತ್ತೇನೆ. ಮೆಟ್ಟೂರು ಡ್ಯಾಮ್‌ನ ಗ್ರಾಸ್ ಸ್ಟೋರೇಜ್ 11.923 ಟಿ.ಎಂ.ಸಿ. ಲೈವ್ ಸ್ಟೋರೇಜ್ 9.763 ಟಿ.ಎಂ.ಸಿ. ಭವಾನಿ ಸಾಗರದ ಗ್ರಾಸ್ ಸ್ಟೋರೇಜ್ 8.75 ಟಿ.ಎಂ.ಸಿ., ಲೈವ್ ಸ್ಟೋರೇಜ್ 6.22 ಟಿ.ಎಂ.ಸಿ. ಅಂದರೆ ಟೋಟಲ್ ಗ್ರಾಸ್ ಸ್ಟೋರೇಜ್ 20.6 ಟಿ.ಎಂ.ಸಿ ಇದೆ, ಲೈವ್ ಸ್ಟೋರೇಜ್ 15.98 ಟಿ.ಎಂ.ಸಿ ಇದೆ. ಅವರು ಆ್ಯಸ್ ಆನ್ ಡಿಫಿಷಿಟ್ ಎಫೆಕ್ಟೆಡ್ 1696 ಟು 7.7.96ಕ್ಕೆ 15 ಟಿ.ಎಂ.ಸಿ ಕೇಳಿದ್ದಾರೆ.

ಉಪಾಧ್ಯಕ್ಷರು:- ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಪುನಃ 3.00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವನ್ನು 1 ಗಂಟೆ 53 ನಿಮಿಷಕ್ಕೆ ಮುಂದೂಡಲಾಯಿತು ಹಾಗೂ ಸದನವು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು ಮಧ್ಯಾಹ್ನ 3-20 ಗಂಟೆಗೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಮಾನ್ಯ ಉಪಸಭಾಧ್ಯಕ್ಷರೆ, ಈಗಾಗಲೇ ನಾವು ಸೆಕ್ಷನ್ 159 ರೂಲ್ 159ರ ಕೆಳಗಡೆ "On a matter of public interest by a motion" ಬಹುಶಃ ಈ ಸದನದಲ್ಲಿ ಮೊದಲನೆ ಸಲ ತಂದಿದ್ದೇವೆ ಅಂದರೆ ಸಮಾರು ಒಂದೂವರೆ ವರ್ಷಗಳಲ್ಲಿ ಈ ಒಂದು ರೂಲ್ ಕೆಳಗಡೆ ನಾವು ಮೋಷನ್ ಮೂವ್ ಮಾಡಿರಲಿಲ್ಲ. ಇದು ಮೊದಲನೆ ಸಲ ರೂಲ್ 159ರ ಕೆಳಗಡೆ ಇವತ್ತು ಈ ಕಾವೇರಿ ನೀರಿನ ಬಿಡುಗಡೆ ಬಗ್ಗೆ ಮೂವ್ ಮಾಡಿದ್ದೇವೆ. ಅದರ ಬಗ್ಗೆ ಈಗಾಗಲೇ ವಿರೋಧ ಪಕ್ಷದ ನಾಯಕರು ಕೂಡ ಮಾತನಾಡಿದ್ದಾರೆ. ಮತ್ತು ಅದರ ಗುಣಗಳು ಏನು? ಯಾವ ಉದ್ದೇಶಕ್ಕಾಗಿ ಈ ರೂಲ್ 159ರ ಕೆಳಗೆ ನಾವು ಈ ವಿಷಯವನ್ನು ತಂದಿದ್ದೇವೆ. ಅದು ಮಾತ್ರ ಎಂಥದ್ದು ಇರಬೇಕು ಅನ್ನತಕ್ಕಂಥದ್ದರ ಬಗ್ಗೆ ಸ್ಪಷ್ಟಪಡಿಸುವಂತೆ ಅದರೊಳಗೆ ಕಂಡಿಷನ್ಸ್ ಇವೆ. "It shall raise substantially one definite issue" ಒಂದು ಡಿಫಿಸೆಟ್ ಇಷ್ಟು ಏನು, ಅದು ಕಾವೇರಿ ಇಷ್ಟು ಈ 5 ಟಿ.ಎಂ.ಸಿ ನೀರು ಬಿಟ್ಟಿದ್ದು "I shall not contain arguments, interierences.. ಇದರ ಬಗ್ಗೆ ಆರ್ಗ್ಯುಮೆಂಟ್ ಆಗತಕ್ಕಂಥದ್ದು ಏನೂ ಇಲ್ಲ. ಅದಕ್ಕೆ ಈ ಒಂದು 161ರ ಕೆಳಗಡೆ ಇರತಕ್ಕಂಥ ಎಲ್ಲಾ ಕಂಡೀಷನ್ಸ್

ಫುಲ್‌ಫಿಲ್ ಮಾಡಿದಮೇಲೆ ಬಹುಶಃ ಇದರ ಅಂಗೀಕಾರಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ. ಆ ಕನ್ಸೆಂಟ್ ಕೊಟ್ಟಮೇಲೆ ಮುಂದೆ ಇರತಕ್ಕಂಥದ್ದು ನಮ್ಮ ಚರ್ಚೆ ಆದಮೇಲೆ ರೂಲ್ 165 ಕೆಳಗೆ ಕೊನೆ ಇರತಕ್ಕಂಥದ್ದು ಅಂದರೆ:-

"The Speaker shall at the appointed hours on the allotted day or the last of the allotted days, as the case may be, forthwith put very question to determine the decision of the House on the original question"

ಅಂದರೆ ಈ 5 ಟಿಎಂಸಿ ನೀರು ಬಿಟ್ಟಿದ್ದು ಸರಿಯೋ ತಪ್ಪೋ ಅದರ ಬಗ್ಗೆ ನಮ್ಮ ವಾದವಿವಾದಗಳನ್ನು ನಾವೇನು ಈ ಮನೆಯ ಮುಂದೆ ಇಡುತ್ತಾ ಇದ್ದೇವೆ ಅದರ ಬಗ್ಗೆ ಈ ಸದನದಲ್ಲಿ ಮತಗಳು ಆಗಲಿ ಅಥವಾ ಅದಕ್ಕೆ ಫಾರ್ ಮತ್ತು ಎಗೆನೆಸ್ಟ್‌ನ್ನು ಕೇಳತಕ್ಕಂಥ ಹಕ್ಕು ಈ ಸದನಕ್ಕೆ ಇದೆ. ಅಂದರೆ ಎಷ್ಟು ಜನ ಈ ನೀರು ಬಿಟ್ಟಿದ್ದನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ? ಎಷ್ಟು ಜನ ಇದಕ್ಕೆ ಬೆಂಬಲ ಕೊಡುತ್ತಾರೆ, ಎನ್ನತಕ್ಕಂಥದ್ದನ್ನು ಕೂಡ ನಾವು ರೂಲ್ 165 ಕೆಳಗೆ ನೋಡಬೇಕಾಗಿದೆ. ಇವತ್ತು ಆ ಒಂದು ರೂಲ್ 165 ಕೆಳಗೆ ನಾವು ಈ ಸದನದ ಸದಸ್ಯರ ಬೆಂಬಲವನ್ನು ಕೇಳುವಾಗ ಅದಕ್ಕೆ ಕಾರಣಗಳನ್ನು ಕೂಡ ಹೇಳಬೇಕಾಗುತ್ತದೆ. ಈ ನಿಯಮದ ಕೆಳಗೆ ಕಾವೇರಿ ನೀರಿನ ವಿಷಯವನ್ನು ತರುವುದಕ್ಕೆ ಪ್ರಮುಖವಾದಂಥ ಕಾರಣ ಏನು? ಈ ರೂಲ್ 159ರ ಕೆಳಗೆ ಸಬ್‌ಸ್ಟ್ಯಾನ್‌ಟೀವ್ ಮೋಷನ್ ಮಾಡಲು ನಾವು ಏಕೆ ಈ ಸದನ ಸದಸ್ಯರ ಬೆಂಬಲವನ್ನು ಕೇಳುತ್ತಾ ಇದ್ದೇನೆ? ಎಲ್ಲಾ ವಿರೋಧ ಪಕ್ಷದ ಮುಖಂಡರು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಉದ್ದೇಶ ಏನು? ಅದರ ಉದ್ದೇಶ ಇಷ್ಟೆ.

ಕಾವೇರಿ ಜಲಾಶಯದಲ್ಲಿ ಇವತ್ತು ನೀರು ಇಲ್ಲ. ಅನೇಕ ರಿಸರ್ವಾಯರ್‌ಗಳಲ್ಲಿ ಇಲ್ಲದಿದ್ದರೂ ಕೂಡ ಸರ್ಕಾರದವರು ಇವತ್ತು 5 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟಿದ್ದಾರೆ. 5 ಟಿಎಂಸಿ ನೀರು ಕನಿಷ್ಟ ಪಕ್ಷ ನಮ್ಮ ರೈತರ ಸಮಸ್ಯೆಗಳ ಅಧ್ಯಯನ ಮಾಡಿದಂತಹ ಕೃಷಿ ಕಾರ್ಮಿಕರು ಯಾರು ಇದ್ದಾರೆ, ಅದರಲ್ಲಿಯೂ ವಿಶೇಷವಾಗಿರತಕ್ಕಂಥ ತಜ್ಞರು ಯಾರು ಇದ್ದಾರೆ ಅವರು ಹೇಳತಕಂಥವರು 5 ಟಿಎಂಸಿ ನೀರು 5 ಲಕ್ಷ ಎಕರೆಗೆ ಒಂದು ಸಲ ನೀರನ್ನು ಕೊಡಬಹುದು. ಅಷ್ಟೊಂದು ನೀರನ್ನು ಇತ್ತು ನಮ್ಮ ಸರ್ಕಾರ ನೀರು ಇಲ್ಲ ಎಂದು ಹೇಳಿ ತಮಿಳುನಾಡಿಗೆ ಬಿಡುಗಡೆ ಮಾಡಿದ್ದಾರೆ. ಆದುದರಿಂದ ಸರ್ಕಾರದವರಿಗೆ ನಾನು ಒಂದು ಪ್ರಶ್ನೆಯನ್ನು ಕೇಳುವುದು ಏನೆಂದರೆ, 8ನೇ ತಾರೀಖು ಎಲ್ಲಾ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮೀಟಿಂಗ್‌ಗೆ ಮಾನ್ಯ ಮುಖ್ಯಮಂತ್ರಿಗಳು ಕರೆಸಿದರು.. ಮಾನ್ಯ ಮುಖ್ಯಮಂತ್ರಿಗಳ ಮುಖ್ಯವಾದಂತಹ ಉದ್ದೇಶ ಏನು ಇತ್ತು ಎಂದರೆ, 11ನೇ ತಾರೀಖು ಏನು ಕಾವೇರಿ ನೀರಿನ ಬಗ್ಗೆ ಟ್ರಿಬ್ಯೂನಲ್ ಮುಂದೆ ಕೇಸ್ ಇತ್ತು ಬಹುಶಃ ಯಾವ ರೀತಿಯಾಗಿ ಆ ಕೇಸಿನ ಬಗ್ಗೆ ಚರ್ಚೆ ಮಾಡಬೇಕು, ಯಾವ ರೀತಿಯಾಗಿ ನಾವು ಮುಂದುವರೆಯಬೇಕು ಅದರ ಮೇಲೆ

ಚರ್ಚೆ ಮಾಡೋಣವೆಂದು ಕರೆದಿರಬಹುದು. ಆದರೆ ಟ್ರಿಬ್ಯೂನಲ್ ಛೇರ್ಮನ್ ಆಗಿದ್ದಂತಹ ಚಿತ್ರೋಷ್ ಘೋಷ್ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟ ಮೇಲೆ ಟ್ರಿಬ್ಯೂನಲ್ ನಡೆಯುವುದಿಲ್ಲ ಮುಂದೂಡಲಾಯಿತು ಎಂದು ಗೊತ್ತಾದಮೇಲೆ ಸುಮ್ಮನೆ ಫಾರ್ಮಲಿಟಿಗೋಸ್ಕರವಾಗಿ ಕರೆದು ಏನಾದರೂ ಮಾತನಾಡಿ ಕಳುಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಜನರಲ್ ಆಗಿ ಮಾತನಾಡಿ ಅಲ್ಲಿಗೆ ಸಭೆಯನ್ನು ಮುಗಿಸಿದರು. ಮಾನ್ಯ ಮುಖ್ಯಮಂತ್ರಿಗಳು ನಾನು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ, ಚರ್ಚೆ ಮಾಡಿ, ಇದನ್ನು ಯಾವ ರೀತಿಯಾಗಿ ಬಗೆಹರಿಸಬೇಕಾಗುತ್ತದೆ ಎಂಬುದನ್ನು ನೋಡೋಣ. ಮತ್ತೆ ಪುನಃ ಅಂತಹ ಸಂದರ್ಭ, ಇಕ್ಕಟ್ಟಿನ ಪರಿಸ್ಥಿತಿ ಬಂದಾಗ ನಿಮ್ಮ ಅವಶ್ಯಕತೆ ಬಿದ್ದಾಗ ವಿರೋಧ ಪಕ್ಷದ ಮುಖಂಡರನ್ನು ಕರೆಯಿಸಿಕೊಳ್ಳುತ್ತೇನೆ ಎನ್ನುವಂತಹ ಮಾತನ್ನು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಮುಗಿಸಿದರು. ಆ ಮಿಟಿಂಗ್‌ನಲ್ಲಿ 5 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಬೇಕು ಎನ್ನುವಂತಹ ಮಾತು ಏನೂ ಬಂದಿಲ್ಲ. ಇದರ ಬಗ್ಗೆ ಒಂದು ಚಕಾರದ ಮಾತನ್ನು ಕೂಡ ಮಾತನಾಡಲಿಲ್ಲ. ಎಲ್ಲಿಯವರೆಗೆ ಎಂದರೆ ಸುಮಾರು 4 ಗಂಟೆಯವರೆಗೆ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಬೇಕೆಂಬುದರ ಬಗ್ಗೆ ಯಾವ ಒಂದು ಅನಿಸಿಕೆಯಾಗಲಿ ಅಥವಾ ಹೇಳಿಕೆಯಾಗಲಿ ಇದರ ಬಗ್ಗೆ ಏನು ಕೂಡ ಹೇಳಲಿಲ್ಲ. ಆದರೆ ಪುನಃ ನನಗೆ ಅನ್ನಿಸಿದ ಮಟ್ಟಿಗೆ ದೆಹಲಿಯಿಂದ ಒತ್ತಡ ಬಂದಿರಬೇಕು. ಆದರೆ ಆಡಳಿತ ಪಕ್ಷದವರು ಎಷ್ಟೇ ಬೇಕಾದರೂ ನಮಗೆ ಎಲ್ಲಿಂದಲೂ ಒತ್ತಡ ಬಂದಿಲ್ಲವೆಂದು ಹೇಳಬಹುದು. ಒತ್ತಡ ಬಂದಿದೆ ಎಂದು ನ್ಯೂಸ್ ಪೇಪರ್‌ನಲ್ಲಿ ಬಂದಿದೆ. ಬಹಿರಂಗವಾಗಿದೆ. ಶ್ರೀಮಾನ್ ಬೊಮ್ಮಾಯಿಯವರು ಮಾನವ ಸಂಪನ್ಮೂಲದ ಮಂತ್ರಿಗಳವರು ಮದ್ರಾಸ್‌ಗೆ ಹೋಗಿ ಕರುಣಾನಿಧಿಯವರನ್ನು ಭೇಟಿಯಾಗಿ ಅವರಲ್ಲಿ ಏನು ಹೇಳಿದರು ಎಂದರೆ ನೋಡಿ ಸ್ವಾಮಿ ನಿಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳಬೇಡಿ, ನೀವು ಕೇಳಿದ ಹಾಗೆ ನಾವು ಕೇಳುತ್ತೇವೆ, ನೀವು ಕೊಟ್ಟಂತಹ ಬೆಂಬಲವನ್ನು ವಾಪಸ್ಸು ಪಡೆದುಕೊಂಡರೆ ನಮ್ಮ ಸರ್ಕಾರ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ನಾವು ಇನ್ನು ಕೇವಲ ಅಧಿಕಾರಕ್ಕೆ ಒಂದು ತಿಂಗಳು ಮಾತ್ರ ಆಗಿದೆ. ಈ ಒಂದು ತಿಂಗಳಿನಲ್ಲಿಯೇ ಪೆಟ್ರೋಲ್ ಬೆಲೆಯನ್ನು ಹೆಚ್ಚು ಮಾಡಿದ್ದೇವೆ, ಎಲ್.ಪಿ.ಜಿ. ಗ್ಯಾಸ್ ಸಿಲಿಂಡರ್ ಬೆಲೆಯನ್ನು ಜಾಸ್ತಿ ಮಾಡಿದ್ದೇವೆ, ಡಿಸೇಲ್ ಬೆಲೆಯನ್ನು ಹೆಚ್ಚು ಮಾಡಿದ್ದೇವೆ, ಇನ್ನು ಅನೇಕ ವಸ್ತುಗಳ ಬೆಲೆಯನ್ನು ಹೆಚ್ಚಿಸಬೇಕಾಗಿದೆ. ಇನ್ನು ಸ್ವಲ್ಪ ಬೆಂಬಲವನ್ನು ಮುಂದುವರೆಸಿ ಎಂದು ಕೇಳಿಕೊಳ್ಳುವುದಕ್ಕೆ ಶ್ರೀಮಾನ್ ಬೊಮ್ಮಾಯಿಜೀಯವರು ಮದ್ರಾಸ್‌ಗೆ ಹೋದರು. ಮದ್ರಾಸ್‌ಗೆ ಶ್ರೀ ಬೊಮ್ಮಾಯಿಯವರು ಹೋಗಿ ಕರುಣಾನಿಧಿಯವರ ಜೊತೆಯಲ್ಲಿ ಮಾತುಕತೆಯಾದ ಮೇಲೆ ಅವರು ನೇರವಾಗಿ ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲರಿಗೆ ಫೋನ್ ಮಾಡಿದರು. ಇದರ ಮಧ್ಯದಲ್ಲಿ ನಿನ್ನೆ ದಿವಸ ಮುಂಜಾನೆಗೆ 9 ಗಂಟೆ 10 ಗಂಟೆ ಮಧ್ಯದಲ್ಲಿ ನಾಗೇಗೌಡರಿಗೆ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರಿಂದ ಟೆಲಿಫೋನ್‌ನಲ್ಲಿ ಸಂಪರ್ಕವಾಗಿದೆ. ಇದನ್ನು ಮಾನ್ಯ ನಾಗೇಗೌಡರು ಒಪ್ಪಿಕೊಳ್ಳುತ್ತಾರೆಯೋ ಇಲ್ಲವೋ

ಗೊತ್ತಿಲ್ಲ. ಹೀಗಾಗಿ ಒಂದು ಕಡೆಯಲ್ಲಿ ಮಾತುಕತೆಯಲ್ಲಿ ದೇವೇಗೌಡರು ಮತ್ತು ನಾಗೇಗೌಡರು ಮತ್ತೊಂದು ಕಡೆ ಬೊಮ್ಮಾಯಿಯವರು ಮತ್ತು ಜೆ.ಹೆಚ್.ಪಟೇಲರು. ಇದು ಸತ್ಯಾಂಶ. ಇದನ್ನು 'ಎ' ಟೀಮ್ ಮತ್ತು 'ಬಿ' ಟೀಮ್ ಎಂದು ತಿಳಿದುಕೊಳ್ಳಿ. ಇವರಲ್ಲಿ ಚರ್ಚೆಯಾಗಿ ಏನು ತೀರ್ಮಾನಕ್ಕೆ ಬಂದರು ಎಂದರೆ ದೆಹಲಿಯ ಸರ್ಕಾರವನ್ನು ಭದ್ರವಾಗಿ ಇಡಬೇಕಾದರೆ, ನಾವು 5 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಲೇಬೇಕು. ಇಲ್ಲದಿದ್ದರೆ ದೆಹಲಿಯ ಸರ್ಕಾರಕ್ಕೆ ಬೆಂಬಲವಿಲ್ಲದೇ ಸರ್ಕಾರ ಅಧಿಕಾರದಿಂದ ಇಳಿಯಬೇಕಾಗುತ್ತದೆ. ಎಂದು ಹೇಳಿ ತರಾತುರಿಯಲ್ಲಿ ತಮಿಳುನಾಡಿಗೆ ನೀರನ್ನು ಬಿಡುವುದಕ್ಕೆ ನಿರ್ಣಯವನ್ನು ಮಾಡಿದಿರಿ. ಸುಪ್ರೀಂಕೋರ್ಟ್‌ಗೆ ತಮಿಳುನಾಡಿನವರು ಕೇಸ್ ಹಾಕಿದ್ದಾರೆ. ಅದಕ್ಕೆ ನಮ್ಮ ಸರ್ಕಾರ ನೀರನ್ನು ಬಿಟ್ಟಿದ್ದೇವೆಂದರೆ ನೀವು ನಮ್ಮನ್ನು ಮೀಟಿಂಗ್ ಕರೆದಿದ್ದಾಗ ಈ ಸತ್ಯ ಏಕೆ ನಿಮ್ಮ ಬಾಯಿಯಿಂದ ಬರಲಿಲ್ಲ? ಏಕೆ ಎರಡು ತಾಸಿನಲ್ಲಿ ಏನಾದರೂ ವ್ಯತ್ಯಾಸವಾಯಿತೇ? ಏನು ಎರಡೇ ತಾಸಿನಲ್ಲಿ ಟೆಲಿಫೋನ್‌ನಲ್ಲಿ ನೀವು ಕನ್ವಿನ್ಸ್ ಆಗಿದ್ದೀರೋ? ನಾನು ಇದರ ಬಗ್ಗೆ ಕೇಳುತ್ತಿದ್ದೇನೆ. ಅಂದರೆ ಇದರ ಅರ್ಥ ಏನಾಗುತ್ತದೆ ಎಂದರೆ ನಮ್ಮಿಂದ ಮುಚ್ಚಿಡತಕ್ಕಂತಹ ಅವಶ್ಯಕತೆ ಏನಿತ್ತು? ಅದರಿಂದ ಏನಾಗುತ್ತದೆ ಎಂದರೆ ನಮಗೆ ಡೌಟ್ ಬರುತ್ತದೆ, ನಮಗೆ ಅನುಮಾನ ಬರುತ್ತದೆ ನಮಗೆ ಏನಾಗುತ್ತದೆ ಎಂದರೆ ಯಾವ ಒಂದು ಮಾತನ್ನು ವಿರೋಧ ಪಕ್ಷದ ನಾಯಕರ ಸಭೆಯಲ್ಲಿ ಹೇಳಬಾಕಾಗಿತ್ತು ಅದನ್ನು ಏಕೆ ಹೇಳಲಿಲ್ಲ? ಅದರ ಹಿನ್ನಲೆ ಏನು? ಅದರ ಗುಟ್ಟು ಏನು? ಅದರ ಬಗ್ಗೆ ಅನುಮಾನ ಬಂದಿದೆ. ನಮಗೆ ಹೇಳಬಾರದು ಎಂದು ಹೇಳಿ ಹಿಂದೆ ನೀವು ಮತ್ತು ತಮಿಳುನಾಡಿನವರು ಗೌಪ್ಯವಾಗಿ ಪರಸ್ಪರವಾಗಿ ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಂಡಿದ್ದೀರಿ? ನಮ್ಮ ರಾಜ್ಯವನ್ನು ಉಳಿಸಿ ಅಥವಾ ನಮ್ಮ ರಾಜ್ಯದ ಪ್ರಧಾನ ಮಂತ್ರಿಗಳನ್ನು ಉಳಿಸಿ, ಅದಕ್ಕಾಗಿ ನೀವು ಏನು ಹೇಳಿದರು ಕೇಳುತ್ತೇವೆ ಎಂದು ಅಂಡರ್ ಸ್ಟ್ಯಾಂಡಿಂಗ್ ಮಾಡಿಕೊಂಡರೋ, ಹೇಗೆ? ಇದನ್ನು ಬಿಟ್ಟರೆ ಬೇರೆ ಕಾರಣವೇನು ಇಲ್ಲ. ನೀರು ಬಿಡಿ ಎಂದು ಹೇಳಿ 4 ದಿವಸವಾಗಿದೆ, 8 ದಿವಸವಾಗಿದೆ ಅದಕ್ಕಾಗಿ ತಮಿಳುನಾಡಿನವರು ಬಂದು ಕನ್ವಿನ್ಸ್ ಮಾಡಿದರು, ವಿಶೇಷವಾದ ಟೀಮ್ ಬಂತು, ಅಥವಾ ಯಾವುದಾದರೂ ಒಂದು ಸಂದೇಶ ಬಂತು, ಅದಕ್ಕಾಗಿ ಇದನ್ನು ಮಾಡಿದ್ದೇವೆ ಇಲ್ಲದಿದ್ದರೆ ಅನಾಹುತವಾಗುತ್ತಿತ್ತು, ಎಂದಾದರೂ ಹೇಳಬೇಕಾಗಿತ್ತು ಏಕೆಂದರೆ ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿದೆ ಅದೇ ರೀತಿಯಲ್ಲಿ ಮಾನ್ಯ ಶ್ರೀ ಕೆ.ಎನ್.ನಾಗೇಗೌಡರಿಗೂ ಗೊತ್ತಿದೆ ಸುಪ್ರೀಂ ಕೋರ್ಟ್‌ನವರು ಹಿಂದೆ ಆದೇಶವನ್ನು ಕೊಟ್ಟರು. ಏನೆಂದರೆ ಇದೇ ತಮಿಳುನಾಡಿನವರು ಟ್ರಿಬ್ಯೂನಲ್ ಮುಂದೆ 15 ಟಿಎಂಸಿ ನೀರನ್ನು ಬಿಡಬೇಕೆಂದು. ಆಗ ನೀರನ್ನು ಮಧ್ಯಂತರ ಆದೇಶದ ಪ್ರಕಾರವಾಗಿ ತಮಿಳುನಾಡಿಗೆ ನೀರನ್ನು ಬಿಡಬೇಕೆಂದು ಟ್ರಿಬ್ಯೂನಲ್‌ನವರೂ ಕೂಡ ಹೇಳಿದರು. ಹೇಳಿದ ಮೇಲೆ ಕೂಡ ಅದನ್ನು ಜಾರಿಗೆ ತರಲಿಲ್ಲ. ಇದು ಟೈಮ್ ಗ್ಯಾಪ್ ಆಯಿತು. ತದನಂತರ ತಮಿಳುನಾಡಿನವರು ಏನೂ ಮಾಡುವುದಿಲ್ಲವೆಂದು ಸುಮ್ಮನಿದ್ದರು. ಆಗ ಟ್ರಿಬ್ಯೂನಲ್‌ನವರು ಆರ್ಡರ್ ಕೊಟ್ಟರೂ ಕೂಡ ಕರ್ನಾಟಕ ಸರ್ಕಾರ ಇದನ್ನು ಜಾರಿಗೆ ತರುತ್ತಿಲ್ಲವೆಂದು ಹೇಳಿ ತಮಿಳುನಾಡಿನವರು ಸುಪ್ರೀಂಕೋರ್ಟ್‌ಗೆ ಹೋದರು 10

execute that decree or that order. ಅದು ಟೈಮ್ ಆಯಿತು, ಅದಾದಮೇಲೆ ಏನೇ ಕೊಟ್ಟರೂ ಸಹ ನಾವು ಮನ್ನಣೆಯನ್ನು ಕೊಡುವುದಿಲ್ಲ ಎಂದು ಹೇಳಿ ಸರ್ಕಾರ ಬಿಗಿಯಾಗಿ ನಿಂತ ಮೇಲೆ ಸುಪ್ರೀಂ ಕೋರ್ಟ್‌ನವರು ಪ್ರಧಾನಮಂತ್ರಿಗಳಿಗೆ ಡೈರಕ್ಷನ್‌ನ್ನು ಕೊಟ್ಟರು. ಪ್ರಧಾನಮಂತ್ರಿಗಳು 11ಟಿಎಂಸಿ ನೀರನ್ನು ಪ್ರತಿದಿವಸ ಇಷ್ಟು ಇಷ್ಟು ನೀರನ್ನು ಬಿಡಬೇಕೆಂದು ಆದೇಶವನ್ನು ಹೊರಡಿಸಿದರು. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅಂದಿನ ಪ್ರಧಾನಮಂತ್ರಿಗಳಾದ ಶ್ರೀ ನರಸಿಂಹರಾವ್‌ರವರು ಎಲ್ಲಾರನ್ನೂ ಕರೆಯಿಸಿ ಮಾತುಕತೆಯನ್ನು ಆಡಿದರು, ಇದನ್ನು ಆ ಟ್ರಿಬ್ಯೂನಲ್ ಆರ್ಡರ್‌ನಲ್ಲಿಯೇ ಏನೆಂದು ಹೇಳಿದ್ದಾರೆ ಎಂದರೆ, ಅಂತಹ ಒಂದು ಸುಪ್ರೀಂಕೋರ್ಟ್ ಆರ್ಡರ್ ಇದ್ದರೂ ಕೂಡ ಪ್ರಧಾನಮಂತ್ರಿಗಳು ಟೈಮ್‌ನ್ನು ತೆಗೆದುಕೊಂಡು ಎಲ್ಲಾ ವಿರೋಧ ಪಕ್ಷದ ನಾಯಕರನ್ನು ಕರೆಯಿಸಿ, ಮುಖ್ಯಮಂತ್ರಿಗಳನ್ನು ಕರೆಯಿಸಿ, ನೀರಾವರಿ ಮಂತ್ರಿಗಳನ್ನು ಕರೆಯಿಸಿ ಚರ್ಚೆ ಮಾಡಿ ಆಮೇಲೆ ನೀರನ್ನು ಬಿಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡರು, ಅಷ್ಟೊಂದು ಟೈಮ್ ಆಯಿತು. ನಿಮಗೆ ಪುರುಸೊತ್ತೇ ಇಲ್ಲ. ಇಲ್ಲಿ ಮೀಟಿಂಗ್ ನಡೆದಿದೆ ಅಲ್ಲಿ ಇದರ ಬಗ್ಗೆ ಹೇಳಲೇ ಇಲ್ಲ. ಮರುದಿವಸ ಏನೆಂದರೆ ನೀವೇ ಸಾಯಂಕಾಲ ನೀವೇ ಡಿಕ್ಲೇರ್ ಮಾಡಿಕೊಳ್ಳುತ್ತೀರಿ 5 ಟಿಎಂಸಿ ನೀರನ್ನು ಸೊವ್ರೋಮೋಟೋ ಬಿಟ್ಟುಬಿಡುತ್ತೀರಿ. ಅರ್‌ಬಿಟ್ರರಲಿ ಒನ್ ವೇ ಅಂದರೆ ಎಷ್ಟರ ಮಟ್ಟಿಗೆ ನಿಮ್ಮಲ್ಲಿ ಕರ್ನಾಟಕದ ರೈತರ ಬಗ್ಗೆ ಆಸಕ್ತಿ ಇದೆ ಎಂದರೆ, ಎಷ್ಟರಮಟ್ಟಿಗೆ ತಮಿಳು ಜನತೆಯ ಬಗ್ಗೆ ಇದೆ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ. ಲೀಗಲ್ ಇಚ್ಛೆ ಏನಿದೆ ಹೇಳಿ, 8 ದಿವಸ ಇದ್ದರೆ ಏನಾದರೂ ಆಗಬಹುದು, 4 ದಿವಸ ಇದ್ದರೆ ಏನಾದರೂ ಆಗುತ್ತಿತ್ತೇ? ಹಿಂದಿನ ಒಂದು ಆರ್ಡರ್‌ನಲ್ಲಿ ಸುಪ್ರೀಂಕೋರ್ಟ್‌ನವರೇ ಇದರ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ತಾ: 16-4-96ರಲ್ಲಿ ಏನು ಜಡ್ಜ್‌ಮೆಂಟನ್ನು ಕೊಟ್ಟಿದ್ದಾರೆ ಅದರಲ್ಲಿ ಕೂಡ ನಮೂದಿಸಿದ್ದಾರೆ. ಅಂದರೆ ಹಿಂದಿನ ಆರ್ಡರ್‌ನಲ್ಲೇ ಇದು ಇದೆ. ಅವರು ಏನು ಸ್ಪಷ್ಟಪಡಿಸಿದ್ದಾರೆ ಎಂಬುದನ್ನು ತಾವು ನೋಡಬೇಕು. ತಾ: 19-12-95ರಲ್ಲಿ 11 ಟಿ.ಎಂ.ಸಿ. ನೀರನ್ನು ಬಿಡುವ ಬಗ್ಗೆ ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬಹುದೆಂಬುದನ್ನು ಸುಪ್ರೀಂಕೋರ್ಟ್‌ನವರು ಸ್ಪಷ್ಟಪಡಿಸಿದ್ದಾರೆ. ಅವರು ಏನು ಹೇಳಿದ್ದಾರೆಂದರೆ:

"In view of the letters written by the respective Chief Ministers to the Prime Minister for his intervention, the Prime Minister Sri P.V.Narasimha Rao is requested to convene as expeditiously as possible within 2 days from to-day a meeting of the Chief Minister of Tamilnadu, the Chief Minister of Karnataka, the respective Floor leaders.....

ಕೇವಲ ರೆಕಗ್ನೈಸ್ಡ್ ಲೀಡರ್ಸ್ ಎಂದೂ ಕೂಡ ಹೇಳಿಲ್ಲ.

"....... of all Political Parties and Opposition Leaders in the Legislative Assemblies of the State of Tamilnadu, Karnataka as well as the Members of Parliament hailing from Mettur Reservoir of Tamilnadu and counterpart in Karnataka.

ಅಂದರೆ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿರತಕ್ಕ ಎಂ.ಪಿ.ಗಳಿಗೆ ಮತ್ತು ಫ್ಲೋರ್ ಲೀಡರ್ಸ್, ಅಪೊಸಿಷನ್ ಲೀಡರ್ಸ್, ಇರಿಗೇಷನ್ ಮಿನಿಸ್ಟರ್‌ರವರು, ಚೀಫ್ ಮಿನಿಸ್ಟರ್ ಇವರೆಲ್ಲರನ್ನೂ ಕರೆದು ಮಾತನಾಡಿ ಅಲ್ಲಿನ ಬೆಳೆಗಳ ರಕ್ಷಣೆಗಾಗಿ ಎಷ್ಟು ನೀರನ್ನು ಬಿಡಬೇಕೆಂಬುದನ್ನು ನೀವು ಕೇವಲ 2 ದಿನದೊಳಗೆ ಸಭೆಯನ್ನು ಕರೆದು ತೀರ್ಮಾನ ತೆಗೆದುಕೊಳ್ಳಬೇಕೆಂಬ ಮಾತನ್ನು ಆಗ ಹೇಳಿದ್ದಾರೆ. ಅಂದರೆ ಸುಪ್ರೀಂ ಕೋರ್ಟ್‌ನವರು ಈ ಮಾತನ್ನು ಹೇಳಿರಬಹುದು, ಆದರೆ ಆ ಸೌಜನ್ಯ ನಿಮಗೆ ಇಲ್ಲ. 5 ಟಿ.ಎಂ.ಸಿ ನೀರನ್ನು ನಾವು ಬಿಡಬೇಕಾಗಿದೆ, ಇದಕ್ಕೆ ನಾವು ಏನು ಮಾಡೋಣ ಎಂದು ಕೇಳುವಂಥ ಸೌಜನ್ಯ ನಿಮಗಿಲ್ಲ. ಅಂಥ ಸೌಜನ್ಯದ ಕೆಲಸವನ್ನು ಇವತ್ತು ಸುಪ್ರೀಂಕೋರ್ಟ್ ಮಾಡಿದೆ. ಬೇರೆ ಯಾವುದಾದರೂ ವಿಚಾರ ಬಂದಾಗ ನಾವು ಏನು ಮಾಡಬೇಕೆಂದು ಪದೇ ಪದೇ ಕೇಳುತ್ತೀರಿ; ಆದರೆ ಇದರ ಬಗ್ಗೆ ನೀವು ಆಸಕ್ತಿಯನ್ನು ವಹಿಸಿ, ನಮ್ಮಲ್ಲಿ ಇಷ್ಟು ನೀರಿದೆ, ಇದರಲ್ಲಿ ಎಷ್ಟನ್ನು ಬಿಡಬಹುದು, ಎಷ್ಟನ್ನು ಬಿಡುವುದಕ್ಕಾಗುವುದಿಲ್ಲ, ಈ ವಿಚಾರದಲ್ಲಿ ನಾವು ಯಾವರೀತಿ ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡುವುದಕ್ಕೂ ನಿಮಗೆ ಸಮಯ ಇಲ್ಲ ಎಂದರೆ, ನಿವು ವಿರೋಧಪಕ್ಷದವರನ್ನು ಎಷ್ಟಮಟ್ಟಿಗೆ ವಿಶ್ವಾಸಕ್ಕೆ ತೆಗೆದುಕೊಂಡಿದ್ದೀರಿ ಎಂಬುದನ್ನು ಇದು ತೋರಿಸುತ್ತದೆ. ನಾನು ತಮಗೆ ಹೇಳಬೇಕಾಗುತ್ತದೆ. You have betrayed the Opposition Parties. You have not only betrayed the Leaders but also the Members. You have betrayed the House.

ನೀವು ನಮ್ಮನ್ನು ಸಭೆಗೆ ಕರೆದು ಈ ವಿಚಾರವನ್ನು ಅಲ್ಲಿ ಪ್ರಸ್ತಾಪ ಮಾಡದೆ ಮನಸ್ಸು ಬಂದಂತೆ, ನಿಮಗೆ ಇಚ್ಛೆ ಬಂದಂತೆ ಬೇಕಾದಾಗ ನೀರನ್ನು ಬಿಟ್ಟು ನೀರನ್ನು ಬಿಡತಕ್ಕದ್ದು, ನಮ್ಮಲ್ಲಿ ಸಾಕಷ್ಟು ನೀರಿತ್ತು, 30 ಟಿ.ಎಂ.ಸಿ ನೀರಿತ್ತು, ಆದ್ದರಿಂದ ಇದರಲ್ಲಿ 5 ಟಿ.ಎಂ.ಸಿ ನೀರನ್ನು ಬಿಟ್ಟರೆ ಏನಾಗುತ್ತದೆಂದು ಹೇಳುವುದು ಸರಿಯಲ್ಲ. ಇನ್ನೂ ಏನು ಹೇಳಿದ್ದೀರೆಂದರೆ, ಜುಲೈ ಕೊನೆಯವರೆಗೆ ಈ ನೀರು ಸಾಕಾಗುತ್ತದೆ ಎಂದು. ಅಂದರೆ ಇನ್ನೂ 20 ದಿನಗಳ ಕಾಲ. 20 ದಿನದೊಳಗೆ ನೀರು ಬರದೇ ಹೋದರೆ ಸುಮಾರು 10.20 ಲಕ್ಷ ಎಕರೆ ಅಚ್ಚುಕಟ್ಟು ಪ್ರದೇಶ ಇದೆ, ಇದರಲ್ಲಿ ಬೆಳೆ ಇಟ್ಟಿರತಕ್ಕ ಜನರು ನೇಣು ಹಾಕಿಕೊಳ್ಳಬೇಕೇ? ಇದು ನಿಮ್ಮ ನಿರೀಕ್ಷೆ ಇರಬಹುದು. ನಿಮ್ಮ ಊಹೆ ಏನೆಂದರೆ, ನಮ್ಮಲ್ಲಿ 30 ಟಿ.ಎಂ.ಸಿ ನೀರಿದೆ, ಇದರಲ್ಲಿ 5 ಟಿ.ಎಂ.ಸಿ. ನೀರನ್ನು ಬಿಟ್ಟರೆ ಏನೂ ಆಗುವುದಿಲ್ಲ. ನಮಗೆ 25 ಟಿ.ಎಂ.ಸಿ. ನೀರು ಸಾಕು. ನಮ್ಮಲ್ಲಿರತಕ್ಕ 6.72 ಲಕ್ಷ ಎಕರೆ

ಪ್ರದೇಶದಲ್ಲಿರುವ ಬೆಳೆಗೆ ಇಷ್ಟು ನೀರು ಸಾಕು, ಈ ನೀರು ಜುಲೈ ಕೊನೆಯವರೆಗೆ ಆಗುತ್ತದೆ, ಅನಂತರ ಮುಂದಿನದನ್ನು ನೋಡಿಕೊಳ್ಳೋಣ ಎಂದು ಹೇಳುವುದನ್ನು ಕೇವಲ ಊಹೆಯ ಮೇಲೆ, ಕಲ್ಪನೆಯ ಮೇಲೆ ಮಾಡುವುದಕ್ಕಾಗುತ್ತದೆಯೇ? ಆಕಾಶದಿಂದ ಬರತಕ್ಕ ಮಳೆಯನ್ನು ನೀವು ನಿರೀಕ್ಷೆ ಮಾಡಿ ನಿಮ್ಮಲ್ಲಿದ್ದ ನೀರನ್ನು ಅವರಿಗೆ ಬಿಟ್ಟು, ನಮ್ಮ ರೈತರ ಬಗ್ಗೆ ನೀವು ಎಷ್ಟರಮಟ್ಟಿನ ಕಾಳಜಿಯನ್ನು ವಹಿಸಿದ್ದೀರಿ ಎಂಬುದನ್ನು ನಾನು ಕೇಳಬಯಸುತ್ತೇನೆ. ಈಗಾಗಲೇ ನೀವೇ ಸ್ಪಷ್ಟಪಡಿಸಿದ್ದೀರಿ, ಭವಾನಿ ಡ್ಯಾಂನಲ್ಲಿ ಎಷ್ಟು ನೀರಿದೆ, ಮೆಟ್ಟೂರು ಡ್ಯಾಂನಲ್ಲಿ ಎಷ್ಟು ನೀರಿದೆ, ಅಷ್ಟೇ ಅಲ್ಲ ಆ ಡ್ಯಾಂನಲ್ಲಿರತಕ್ಕ ನೀರಿನ ಆಳತೆಯನ್ನೂ ಕೂಡ ನೀವು ಹೇಳಿದ್ದೀರಿ. ನಮ್ಮಲ್ಲಿರತಕ್ಕ ನೀರು ಮತ್ತು ಬೆಳೆ ಏನಿದೆ ಎಂಬುದನ್ನು ತಿಳಿದುಕೊಂಡು ಒಂದು ಸಭೆಯನ್ನು ಕರೆದು ಇಷ್ಟು ನೀರು ಅವರಲ್ಲಿದೆ, ಇಷ್ಟು ನೀರು ನಮ್ಮಲ್ಲಿದೆ, ನಮಗೆ ಜುಲೈ ಕೊನೆಯವರೆಗೂ ಇಷ್ಟು ನೀರು ಬೇಕಾಗುತ್ತದೆ, ಮುಂಗಾರು ಮಳೆ ಬರದೇ ಹೋದರೆ ಆಗ ನಾವು ಏನು ಮಾಡಬೇಕು, ಎನ್ನತಕ್ಕ ವಿಚಾರದ ಬಗ್ಗೆ ನೀವು ಏತಕ್ಕೆ ಚರ್ಚೆಮಾಡಲಿಲ್ಲ? ಇದರಿಂದಾಗಿ ನನಗೆ ಸಂಶಯ ಬರುತ್ತಿದೆ. ನೀವು ಖಾಸಗಿಯಾಗಿ, ಗೌಪ್ಯವಾಗಿ you have got an understanding with Tamilnadu and that too on political reasons. ಎನ್ನತಕ್ಕ ಮಾತನ್ನು ನಾನು ತಮಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಇದರ ಅವಶ್ಯಕತೆಯೇ ಇರಲಿಲ್ಲ. ಇಲ್ಲಿ ಏನಾದರೂ ಒಂದು ಸಣ್ಣ ಗಲಾಟೆ ಆದರೆ, ಅಥವಾ ಧರಣಿ ಆದರೆ ಅಥವಾ ಇನ್ನ್ಯಾವುದಾದರೂ ವಿಚಾರದಲ್ಲಿ ಇಲ್ಲಿ ಪರಸ್ಪರ ಮಾತಿನ ಚಕಮಕಿ ಆದರೆ ನಮ್ಮನ್ನೆಲ್ಲಾ ತಮ್ಮ ಕೊಠಡಿಗೆ ಕರೆಸಿಕೊಂಡು ಅನೇಕಸಾರಿ ಮಾತನಾಡುತ್ತೀರಿ. ಈ ವಿಚಾರ ಸುಮಾರ 6-7 ಲಕ್ಷ ಎಕರೆಯಲ್ಲಿರತಕ್ಕ ಬೆಳೆಗೆ ಹಾನಿಯಾಗತಕ್ಕ ಪ್ರಶ್ನೆ. ಇದರ ಬಗ್ಗೆ ನಿಮಗೆ ಚಿಂತನೆ ಇಲ್ಲ........

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಮಾತನಾಡುತ್ತಾ, ಈ ಸದನದಲ್ಲಿ ನಮ್ಮನ್ನು ಕೇಳಲಿಲ್ಲ, ಶಾಸನ ಸಭೆಯನ್ನು ಕಡೆಗಣಿಸಿದ್ದೀರಿ ಇತ್ಯಾದಿ ಹೇಳುತ್ತಿದ್ದೀರಿ. ಆದರೆ ಮಾನ್ಯ ನಾಗೇಗೌಡರು ಏನು ಹೇಳಿದ್ದಾರೆ ಗೊತ್ತೇ? ತಾವು ಈ ಕಡತವನ್ನು ಕೇಳಿದರೆ ಕಳುಹಿಸಿಕೊಡುತ್ತೇನೆ. ನಾನು ನೀರಾವರಿ ಸಚಿವನಾಗುತ್ತೇನೆಂದು ಅವರಿಗೆ ಗೊತ್ತಿತ್ತು. ಗೊತ್ತಿಲ್ಲದಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ. ಕಳೆದಸಾರಿ ನಾವು 6 ಟಿ.ಎಂ.ಸಿ. ನೀರನ್ನು ಬಿಟ್ಟಾಗ ಅವರು ಏನು ಹೇಳುತ್ತಾರೆ ಅಂದರೆ ''ನಾನು ಮೊನ್ನೆ ಪ್ರವಾಸದಲ್ಲಿದ್ದಾಗ ಈ ಸುದ್ದಿ ಬಂದಿದ್ದನ್ನು ಕೇಳಿ ನನಗೂ ಸಹ ಅತ್ಯಂತ ಗಾಬರಿಯಾಯಿತು. ನನಗೆ ಗಾಬರಿಯಾಗಿ ಅಲ್ಲಿಂದ ಇಂಜಿನಿಯರ್‌ಗಳಿಗೆ ಫೋನ್ ಮಾಡಿದಾಗ ನೀರು ಬಿಡುತ್ತಿದ್ದಾರೆಂಬ ಮಾತನ್ನು ಅವರು ನನಗೆ ಹೇಳಿದರು. ನಮ್ಮಲ್ಲಿ ಕೆ.ಆರ್.ಎಸ್. ಕನ್ಸಲ್ಟೇಟೀವ್ ಕಮಿಟಿ ಇದೆ, ಹೇಮಾವತಿ ಕನ್ಸಲ್ಟೇಟಿವ್ ಕಮಿಟಿ ಇದೆ; ಇದೆಲ್ಲಾ ಇದ್ದರೂ ನಮ್ಮ ಮುಖ್ಯಮಂತ್ರಿಗಳು ಹೇಗೆ ತಮಿಳ್ನಾಡಿಗೆ ನೀರನ್ನು ಬಿಡುವ ತೀರ್ಮಾನವನ್ನು ತೆಗೆದುಕೊಂಡರು. ಮಾನ್ಯ ಮುಖ್ಯಮಂತ್ರಿಗಳಿಗೆ ಕಾವೇರಿ ವಿಚಾರದಲ್ಲಿ ನಮಗಿಂತ ಹೆಚ್ಚಿನ ತಿಳುವಳಿಕೆ ಇದೆ; ಆದರೂ ಈ ಕೆಲಸವನ್ನು ಮಾಡಿದ್ದಾರೆ. ಇದು

ಮಾನ್ಯ ನಾಗೇಗೌಡರ ಭಾಷಣ ಇದು ಇಲ್ಲಿ

ಶ್ರೀ ಕೆ.ಎನ್.ನಾಗೇಗೌಡ:- ಯಾವಾಗ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಹಾಗಾದರೆ ನಾನು ಯಾವುದನ್ನು ಹೇಳಿದ್ದು ಎಂದು ತಿಳಿದಿರಿ? ಇದು ಈಗಲ್ಲ, ನೀವು ಗಾಬರಿಯನ್ನು ಮಾಡಿಕೊಂಡಿರಿ. ನೀವು ಆಡಳಿತ ಪಕ್ಷದಲ್ಲೇ ಇದ್ದಾಗ, ಮಾನ್ಯ ದೇವೇಗೌಡರ ಜೊತೆಯಲ್ಲೇ ಇದ್ದಾಗ, ಅವರು ನೀರನ್ನು ಬಿಟ್ಟಾಗ, ನೀವು ಏನು ಹೇಳಿದ್ದೀರಿ ಎಂಬುದನ್ನು ನಿಮಗೆ ನೆನಪುಮಾಡಿಕೊಟ್ಟೆ ಅಷ್ಟೆ. ನೀರಾವರಿ ಸಚಿವರಾಗಿ ಈಗ ಇವರೆಲ್ಲರನ್ನೂ ಕನ್‌ಸಲ್ಟ್ ಮಾಡಿದ್ದೀರೋ?

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ಒಂದು ತಿದ್ದುಪಡಿ ಏನೆಂದರೆ: ಈ ಮಾತನ್ನು ಈಗ ಹೇಳಿಲ್ಲ, ಆಗ ಹೇಳಿದ್ದಾರೆ. ಅದನ್ನು ನೀವು ಏತಕ್ಕೆ ನಂಬಬೇಕು? ಆಗ ಹೇಳಿದ ಮಾತನ್ನು ಇವರು ಈಗ ಏತಕ್ಕೆ ಹೇಳುತ್ತಾರೆ? ಹೇಳುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ನಾನು ಕೋಟ್ ಮಾಡಿದ್ದೇನೆ. ಇದು ಸುಪ್ರೀಂಕೋರ್ಟ್‌ನ ಜಡ್ಜ್‌ಮೆಂಟ್, ಎಲ್ಲರನ್ನೂ ಕರೆಯಿಸಿಕೊಂಡು ಮಾತನಾಡಬೇಕೆಂದು ಅದರಲ್ಲೇ ಇದ್ದರೂ ಕೂಡ ಇವರು....

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಇದನ್ನು ಏತಕ್ಕೆ ಓದಬೇಕೆಂದರೆ, ಅವರು ಹಿಂದೆ ಏನು ಹೇಳಿದ್ದರೆಂಬುದು ಜ್ಞಾಪಕಕ್ಕಾದರೂ ಬಂದರೆ, ಅದರಿಂದ ಜ್ಞಾನೋದಯವಾಗಿ, ನನ್ನಿಂದ ಅಪರಾಧವಾಗಿದೆ. ನೀರನ್ನು ಬಿಡುವುದನ್ನು ತಡೆಹಿಡಿಯುತ್ತೇನೆ, ಈ ನಿಲುವಳಿಸೂಚನೆಯನ್ನು ಮಂಡಿಸುವ ಅಗತ್ಯತೆ ಇಲ್ಲವೆಂದು ಹೇಳಬಹುದು ಎಂದು ನಾನು ಹೇಳುತ್ತಿರುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ಜಡ್ಜ್‌ಮೆಂಟ್‌ನಲ್ಲಿ ಇಷ್ಟೊಂದು ಸ್ಪಷ್ಟವಾಗಿ ಬರೆದರೂ ಕೂಡ ನೀವು ವಿರೋಧಪಕ್ಷದವರನ್ನು ಸಭೆಗೆ ಕರೆಸುವ ಸೌಜನ್ಯವನ್ನು ತೋರಿಸಲಿಲ್ಲ. ಇನ್ನು ಎರಡನೆಯದಾಗಿ ನನಗೆ ಆಶ್ಚರ್ಯವೆಂದರೆ, ಹಿಂದೆ ನಾವು ಅನೇಕ ನಿರ್ಣಯಗಳನ್ನು ಮಾಡಿದ್ದೇವೆ. ಆ ನಿರ್ಣಯಗಳೇನೆಂದರೆ, ನಮ್ಮ ಮಾನ್ಯ ಪ್ರಧಾನಮಂತ್ರಿಯವರು ರಾಷ್ಟ್ರೀಯ ಜಲನೀತಿಯ ಮಾರ್ಗಸೂಚಿ ಪ್ರಕಟವಾಗಿ ಫೆಬ್ರವರಿ ಮೊದಲನೇ ವಾರದಲ್ಲಿ ಸಭೆಯನ್ನು ಕರೆಯುವುದಾಗಿ ದಿನಾಂಕ: 1-1-96ರ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿರುವುದರಿಂದ ರಾಷ್ಟ್ರೀಯ ಜಲನೀತಿ ಮಾರ್ಗದರ್ಶಿ ಪ್ರಕಟವಾಗುವವರೆಗೆ, ಕರ್ನಾಟಕವು ಕಾವೇರಿ ನ್ಯಾಯಾಧಿಕರಣದ ಮುಂದೆ ಭಾಗವಹಿಸಬಾರದೆಂದು ತೀರ್ಮಾನಿಸಿದೆ. ಇದು ಸರ್ವಪಕ್ಷಗಳ ಸಭೆಯಲ್ಲಿ ಏನು ತೀರ್ಮಾನ ಆಯಿತು ಎಂದರೆ, ರಾಷ್ಟ್ರೀಯ ಜಲನೀತಿಯನ್ನು ರೂಪಿಸುವವರೆಗೂ ನಾವು ನ್ಯಾಯಾಧಿಕರಣದ ಮುಂದೆ ಭಾಗವಹಿಸಬಾರದು ಎಂದು. ಈ ತೀರ್ಮಾನ ಇದ್ದರೂ ಕೂಡ ನೀವು ಮತ್ತೆ ಟ್ರಿಬ್ಯುನಲ್ ಮುಂದೆ ಏತಕ್ಕೆ ಹೋದಿರಿ? ಮತ್ತೆ ಸಭೆಯನ್ನು ಏತಕ್ಕೆ ಕರೆಯಲಿಲ್ಲ? ನಮ್ಮನ್ನು ಏತಕ್ಕೆ ಮತ್ತೆ ಕನ್ಸಲ್ಟ್ ಮಾಡಲಿಲ್ಲ? ಫೆಬ್ರವರಿ ತಿಂಗಳಲ್ಲಿ

ಮೀಟಿಂಗ್‌ನ್ನು ಮಾಡಿದಮೇಲೆ ಪುನಃ ನೀವು ಮೀಟಿಂಗ್‌ನ್ನೇ ಮಾಡಲಿಲ್ಲ; ತರಾತುರಿಯಲ್ಲಿ ನಿಮಗೆ ಬೇಕಾದ ರೀತಿಯಲ್ಲಿ ಆ ಕೆಲಸವನ್ನು ಮಾಡಿದ್ದೀರಿ. ಇದು ಗೊತ್ತಿದ್ದರೂ ಕೂಡ ಮಾನ್ಯ ಜೆ.ಹೆಚ್.ಪಟೇಲರು ಒಂದು ಹೇಳಿಕೆಯನ್ನು ಜೂನ್ 11ನೇ ತಾರೀಖು ಏನು ಕೊಟ್ಟಿದ್ದಾರೆಂದರೆ ''ನಾವು ಟ್ರಿಬ್ಯುನಲ್ ಮುಂದೆ ಹಾಜರಾಗುತ್ತೇವೆ, ಎಂದು. ಆಗಲಿ ನೀವು ಅಲ್ಲಿ ಭಾಗವಹಿಸಿ, ಟ್ರಿಬ್ಯುನಲ್ ಪ್ರೊಸೀಡಿಂಗ್ಸ್‌ನ್ನು ಮುಂದೆ ಹಾಕಬೇಕೆಂದು ನೀವು ಟ್ರಿಬ್ಯುನಲ್ ಮುಂದೆ ಹೋದಿರಿ. ಆ ಟ್ರಿಬ್ಯುನಲ್‌ನವರು ಏನು ಹೇಳಿದರೆಂದರೆ, ಈ ಪ್ರೊಸೀಡಿಂಗ್ಸ್‌ನ್ನು ಮುಂದಕ್ಕೆ ಹಾಕುವುದಕ್ಕಾಗುವುದಿಲ್ಲ, ರಾಷ್ಟ್ರೀಯ ಜಲನೀತಿ ಮಾರ್ಗಸೂಚಿ ಏನಿದೆ ಇದು ನಮಗೆ ಬೈಂಡಿಂಗ್ ಏನೂ ಅಲ್ಲ, ಅದನ್ನು ಸುಮ್ಮನೆ ನಾವು ನೋಡಿಕೊಳ್ಳಬಹುದು, ಅದು ನಮಗೆ ಗೈಡ್ ಮಾಡಬಹುದೇ ಹೊರತು, ಅದು ನಮಗೆ ರೂಲ್ ಅಲ್ಲ, ಕಾನೂನು ಅಲ್ಲ; ಏನೂ ಅಲ್ಲ.

3.50 ಪಿ.ಎಂ.

ಅದಕ್ಕಾಗಿ ಅದೇನೂ ಅವಶ್ಯಕತೆ ಇಲ್ಲ. ಅದರವರೆಗೆ ನಾವು ಹೋಗಬೇಕಾಗಿಲ್ಲವೆಂದು ಹೇಳಿದರು. ನಿಮ್ಮ ಪಟಿಷನ್ ಅನ್ನು ಅವರು ರಿಜೆಕ್ಟ್ ಮಾಡಿದರು. ಆದರೆ ನೀವು ಏತಕ್ಕೆ ಹೋಗಬೇಕಾಗಿತ್ತು? ಇವತ್ತು ನಾನು ಹೇಳುತ್ತೇನೆ, ನಿಮಗೆ ಅವಕಾಶ ಇತ್ತು. ಮಾನ್ಯ ನಾಗೇಗೌಡರು ಒಂದು ಮಾತು ಹೇಳಿದರು, ಅದೇನೆಂದರೆ ಒಂದು ವೇಳೆ ಸುಪ್ರೀಂ ಕೋರ್ಟ ಮುಂದೆ ಅವರು ಹೋಗದಂತೆ ಪೆಟಿಷನ್ ಇಮಿಟ್ ಮಾಡಿಕೊಂಡು ಅಲ್ಲಿಂದ ಡೈರೆಕ್ಷನ್ ಬಂದಮೇಲೆ ಕೊಡುವುದಕ್ಕಿಂತ ಮುಂಚೆ ನಾವೇ ಕೊಟ್ಟುಬಿಟ್ಟಿದ್ದೇವೆಂದು ಹೇಳಿದರು. ಆದರೆ ಒಂದು ಮಾತನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಹಿಂದೆ ಹಠ ಹಿಡಿದಿದ್ದೇವೆ, ಒಂದು ಸ್ಟ್ಯಾಂಡ್ ತೆಗೆದುಕೊಂಡಿದ್ದೇವೆ. ಏನು ಸ್ಟ್ಯಾಂಡ್ ಎಂದರೆ, ಯಾವಾಗ ತೊಂದರೆ ಬಂದಾಗ, ಕಷ್ಟದಲ್ಲಿದ್ದಾಗ, ನೀರು ಇಲ್ಲದೆ ಇದ್ದಾಗ; ಮಳೆ ಬಾರದೆ ಇದ್ದಾಗ, ಸ್ಕೇರ್ಸಿಟಿ ಇದ್ದಾಗ ನಾವು ಟ್ರಿಬ್ಯುನಲ್ ಮುಂದೆ ಬಂದು ಕ್ಲಾರಿಫಿಕೇಷನ್ ಕೇಳಿಕೊಂಡು ಪುನಃ ಒಂದು ಮನವಿ ಸಲ್ಲಿಸಿ ನೀರು ಇಲ್ಲ ನಮ್ಮ ಹತ್ತಿರ, ನೀರು ಕೊಡುವುದಕ್ಕಾಗುವುದಿಲ್ಲ, ಅದಕ್ಕಾಗಿ ಡಿಸ್ಟ್ರೆಸ್ ಫಾರ್ಮುಲ ಪ್ರಕಾರ ನಮಗೆ ನೀರು ಬಿಡುಗಡೆ ಮಾಡತಕ್ಕ ಪ್ರಶ್ನೆ ಇಲ್ಲವೆಂದು ಹೇಳಿ ಪದೇ ಪದೇ ಹೋಗುವುದಕ್ಕೆ ನಿಮಗೆ ಅವಕಾಶ ಇದೆ. ಈಗ ನೀವು ಕೊಟ್ಟ ಒಂದು ಪುಸ್ತಕ 'Cauvery Water Dispute' ಅದರ ಪುಟ 19, ಪ್ಯಾರಾ 6ರಲ್ಲಿ ಏನು ಹೇಳುತ್ತದೆಂದರೆ "The Tribunal gave its clarificatory order on 3rd April 1992.... 1992ರಲ್ಲಿ ಒಂದು ಕ್ಲಾರಿಫಿಕೇಟರಿ ಆರ್ಡರ್ ಕೊಟ್ಟರು. ಯಾವುದರ ಮೇಲೆ ಅಂದರೆ ಅಂದಿನ ಇಂಟರಿಂ ಆರ್ಡರ್ ಏನಿತ್ತು ಜೂನ್ 1991ರ ಆರ್ಡರ್ ಅದರ ಮೇಲೆ ಕೊಟ್ಟರು. ಅದೇನೆಂದರೆ, "No interference is called for at this stage with the order of 25th June 1991. In a situation of distress, pro-rata sharing of distress can always be adopted.

(c) In case here inafter there is any change of circumstances or undue hardship is caused, in a particular year, to any party, ನಮಗೆ ಇರಬಹುದು, ತಮಿಳ್ನಾಡಿನವರಿಗೆ ಇರಬಹುದು. ಆದರೆ ಬದಲಾದ ಸನ್ನಿವೇಶದಲ್ಲಿ ವ್ಯತ್ಯಾಸವಾದರೆ ಆ ಒಂದು ಗೊತ್ತಾದ ವರ್ಷದಲ್ಲಿ ಅಥವಾ ಕಾಲದಲ್ಲಿ "it will be open to such party to approach the Tribunal for appropriate orders.." ಅಂದರೆ ನಿಮಗೆ ಪ್ರೊಹಿಬಿಟ್ ಮಾಡಿಲ್ಲ. ನೀವು ಟ್ರಿಬ್ಯುನಲ್ ಮುಂದೆ ಬಂದು ನಿಮ್ಮ ಕಷ್ಟನಷ್ಟಗಳನ್ನು ಹೇಳಿಕೊಳ್ಳುವುದಕ್ಕೆ ನಿಮ್ಮ ತೊಂದರೆಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ನಿಮಗೆ ಟ್ರಿಬ್ಯುನಲ್ ಪ್ರೊಹಿಬಿಟ್ ಮಾಡಿಲ್ಲ. ನಿಮಗೆ ಪ್ರೊಹಿಬಿಟ್ ಮಾಡಿದ್ದು ಯಾವುದು, ಈಗಿರತಕ್ಕ ಪ್ರೊಸೀಡಿಂಗ್ಸ್ ಏನಿದೆ ಅಥವಾ ಈಗ ಏನು ಚಾಲ್ತಿಯಲ್ಲಿ ಕೇಸ್ ಏನಿದೆ ಆ ಕೇಸನ್ನು ನಿಲ್ಲಿಸಿ ಎಂದು ಏನು ಕೇಳುತ್ತಿದ್ದೀರಿ ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಏಕೆಂದರೆ, ಬರೀ ನ್ಯಾಷನಲ್ ವಾಟರ್ ಪಾಲಿಸಿ ಆಗಿಲ್ಲವೆಂದು ಅದು ಒಂದೇ ಕಾರಣಕ್ಕೋಸ್ಕರ ಯಾವುದೇ ಒಂದು ಬದಲಾದ ಸನ್ನಿವೇಶ ಇಲ್ಲ, ಅದಕ್ಕೆ ನಿಲ್ಲಿಸುವುದಿಲ್ಲವೆಂದು ಅವರು ನಿಮ್ಮ ಅರ್ಜಿಯನ್ನು ವಜಾ ಮಾಡಿದರು. ಆದರೆ ನಿಮಗೆ ಈ ಒಂದು ಕ್ಲಾರಿಫಿಕೇಟರಿ ಆರ್ಡರ್ ಪ್ರಕಾರ ಅವಕಾಶ ಇತ್ತಲ್ಲಾ. ನಿಮಗೆ ಸುಪ್ರೀಂ ಕೋರ್ಟಿನಿಂದ ಬಂದರೂ ಕೂಡ ಇನ್ನೊಮ್ಮೆ ನೀವು ಕೇಳತಕ್ಕ ಸಾಧ್ಯತೆ ಇತ್ತಲ್ಲ! ಏತಕ್ಕೆ ಕೇಳಲಿಲ್ಲ? ಏತಕ್ಕೆ ತರಾತುರಿಯಲ್ಲಿ ನೀರು ಬಿಟ್ಟಿರಿ? ಈ ರೆಮಿಡಿಯನ್ನು ಎಕ್ಸಾಸ್ಟ್ ಮಾಡದೆ ಈ ರೆಮಿಡಿ ಪ್ರಕಾರ ಅಪ್ಲಿಕೇಷನ್ ಹಾಕದೆ, ಈ ರೆಮಿಡಿ ಪ್ರಕಾರ ಟ್ರಿಬ್ಯುನಲ್ ಮುಂದೆ ವಿನಂತಿಸಿಕೊಳ್ಳದೆ ಇವತ್ತಿನ ದಿವಸ ತರಾತುರಿಯಲ್ಲಿ ಹೇಳುತ್ತಿದ್ದರೆ ಸುಪ್ರೀಂಕೋರ್ಟ್ ಏನು ಮಾಡಬೇಕೆಂದು ಹೇಳುತ್ತಿತ್ತು; ಅಂದರೆ ಏನಾದರೂ ಕಂಪಲ್‌ಷನ್ ಬಂದಿತ್ತಾ? ಏನಾದರೂ ಒತ್ತಾಯ ಇತ್ತೆ?

ಶ್ರೀ ಕೆ.ಎನ್.ನಾಗೇಗೌಡ:- ಏನು ಮಾನ್ಯ ಖರ್ಗೆಯವರು ಡಿಸ್ಟ್ರೆಸ್ ಫಾರ್ಮುಲಾ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಆ ಅಟೆಮ್ಟ್ ಅನ್ನು ನಮ್ಮ ರಾಜ್ಯ ಸರ್ಕಾರ ಮಾಡಿದೆ. ಪ್ರಾರಂಭದಲ್ಲಿ ನಿಮ್ಮ ಡಿಸ್ಟ್ರೆಸ ಫಾರ್ಮುಲಾ ವರ್ಕ್‌ಔಟ್ ಮಾಡಿ first two weeks of June, first two weeks of July ಎಂದು ಲೆಕ್ಕಾಚಾರ ಮಾಡಿ ನಮ್ಮದೇ ಆದ ಫಾರ್ಮುಲ ಇಟ್ಟುಕೊಂಡು ಲೆಕ್ಕಾಚಾರ ಮಾಡಿ ವರ್ಕ್‌ಔಟ್ ಮಾಡಿ ರಿಜಿಸ್ಟ್ರಾರ್ ಮುಂದೆ ನಾವು ಅಪ್ಲಿಕೇಷನ್ ಹಾಕಿದ್ದೇವೆ. ತಮಿಳ್ನಾಡಿನವರು ಒಪ್ಪಲಿಲ್ಲ, ರಿಜಿಸ್ಟ್ರಾರ್ ಒಪ್ಪಲಿಲ್ಲ. it will come before the Tribunal ಎಂದು ಹೇಳಿದರು. Yesterday, we have filed the application before the Tribunal. When there is no Chairman ಹಿಯರಿಂಗ್, ಮುಂದಕ್ಕೆ ಹೋಗಿದೆ. ಅಟೆಮ್ಟ್ ಮಾಡಲಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. We did that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಟೆಮ್ಟ್ ಯಾವಾಗ ಮಾಡುತ್ತಾರೆ? ಇವತ್ತು ಹಾಕಿದ್ದಾರೆ ಅರ್ಜಿ. ನೀರು ಬಿಟ್ಟು ಅಟೆಮ್ಟ್ ಮಾಡುವುದೇ?

ಶ್ರೀ ಕೆ.ಎನ್.ನಾಗೇಗೌಡ:- ಇದು ಇವತ್ತಲ್ಲ, ಮೊದಲಿನಿಂದಲೇ ಅಟೆಮ್ಟ್ ಮಾಡಿಕೊಂಡು ಬಂದಿದ್ದೇವೆ. ಇದು ನಿನ್ನೆ ಹಾಕಿದ್ದು, ಡಿಸ್ಟೆಸ್ ಫಾರ್ಮುಲ ಟ್ರಿಬ್ಯುನಲ್ ಮುಂದೆ ಬರಬೇಕು; not before the Registrar ಎಂದು ಬಂದಾಗ, When Tamil Nadu was not accepted this has been filed before the Tribunal.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ಅಧ್ಯಕ್ಷರೇ ನಾನು ಕೇಳುವುದು, ನಿಮಗೆ ಏನು ಒತ್ತಡ ಇತ್ತು ನೀರು ಬಿಡಬೇಕೆಂದು? ಈ ರೆಮಿಡಿಯನ್ನು ಎಕ್ಸಾಸ್ಟ್ ಮಾಡದೇ, ಈ ರೆಮಿಡಿ ಕೆಳಗೆ ನೀವು ಕೇಳದೆ ರಿಜೆಕ್ಟ್ ಆಗಲಿ ಅಥವಾ ಅವರ ಮನಸ್ಸಿಗೆ ಬಂದದ್ದು ಹೇಳಬಹುದಾಗಿತ್ತು. ಅದಕ್ಕೆ ನೀವು ಕೊಟ್ಟಂಥ ಅಪ್ಲಿಕೇಷನ್ ಪ್ರಕಾರ ನಿಮ್ಮ ಕ್ಲಾಸ್ (ಸಿ) ಏನಿದೆ ನೋಡಿ:-

"In case, hereinafter there is any change of circumstances or undue hardship is caused in a particular year to any party ನಮಗೇ ಇರಬಹುದು, ತಮಿಳ್ನಾಡಿನದೇ ಇರಬಹುದು. it will be open to such party to approach the Tribunal for appropriate orders. ಅಂದರೆ ಟ್ರಿಬ್ಯುನಲ್ ಎಲ್ಲಿ ಪ್ರೊಹಿಬಿಟ್ ಮಾಡಿದೆ ಸ್ವಾಮಿ? You can approach any time, if you have got hardship, if you have got reasons to convince.. ಈ ಕೆಲಸ ಮಾಡದೆ ನೀವು ಮೆಹರ್ಬಾನಿ ಪಡೆದುಕೊಳ್ಳುವುದಕ್ಕೆ, ವೈಯಕ್ತಿಕವಾಗಿ ನಿಮಗೋಸ್ಕರ ನಿಮ್ಮ ಸ್ವಂತ ಪ್ರತಿಷ್ಠೆಗೋಸ್ಕರ ನಿಮ್ಮದೆಂದು ಪಕ್ಷದ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ತರಾತುರಿಯಲ್ಲಿ ನೀರು ಬಿಟ್ಟಿದ್ದೀರ. ಇದಕ್ಕೆ ಉತ್ತರ ಹೇಳಿ. ಇದರ ಕೆಳಗೆ ನೀವು ಹೋಗುವುದು ಬಿಟ್ಟು ಇವತ್ತಿನ ದಿವಸ ಸುಮ್ಮನೆ ಸುಪ್ರೀಂ ಕೋರ್ಟ್ ಆದೇಶ ಬರುತ್ತಿತ್ತು ಅದರ ಸಲುವಾಗಿ ನಾವೇ ಮೊದಲು ಮಾಡಿದೆವು. ಬರಲಿ ಸುಪ್ರೀಂ ಕೋರ್ಟ್ ಆರ್ಡರ್, ಬಂದರೆ ಯೋಚನೆ ಮಾಡಬೇಕಾಗಿತ್ತು; ಹಿಂದೆ ಮಾಡಿಲ್ಲ? ಸುಪ್ರಿಂ ಕೋರ್ಟ್ ಆರ್ಡರ್ ಬಂದಮೇಲೂ ಕೂಡ..

(ಗೊಂದಲ)

SRI K.N.NAGEGOWDA:- I will just strengthen your hand. You are also the State Leader. You are not away from the State. ದಾರಿ ತಪ್ಪಿಸುವುದು ಬೇಡ. ಅವರಿಗೆ ಏನು ಏಪ್ರಿಲ್ 1992ರಲ್ಲಿ ಕ್ಲಿಯರ್ ಆಗಿ ಇಂಥ ಡಿಸ್ಟ್ರೆಸ್ ಬಂದಂಥ ಕಾಲದಲ್ಲಿ You must go before the Tribunal ಎಂದು ಹೇಳಿದ್ದಾರೆ. ಡಿಸ್ಟೆಸ್ ಪೀರಿಯಡ್ ಯಾವಾಗ ಎಂದು ನೋಡಿಕೊಂಡು ಟ್ರಿಬ್ಯುನಲ್ ಮುಂದೆ ಹೋಗಬೇಕು. First week and Second week of June is a distress period. The Third week

and fouth week of June, is not a distress period. ಹೋದ ಎರಡು ವಾರ ಡಿಸ್ಟ್ರೆಸ್ ಇಲ್ಲವೆಂದು ಹೇಳುವ ಫಿಗರ್ಸ್ ಇದೆ. ಬೇಕಾದರೆ ಸೀಕ್ರೆಟ್ ಆಗಿ ನಿಮಗೆ ಕೊಡುತ್ತೇನೆ. ಎಷ್ಟೆಷ್ಟು ಇನ್‌ಫ್ಲೋ ಆಗಿದೆ ಎಂದು ಅಂಕಿ ಅಂಶ ಇದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅಲ್ಲ, ಹೋಗಿರುವುದು ಅಲ್ಲ. ಈಗ ನೀರಿಲ್ಲ, ಮಳೆ ಇಲ್ಲ; ನಿಮಗೆ ಗೊತ್ತಿದೆ. ಅಲ್ಲಿ ಹತ್ತು ಪರ್ಸೆಂಟ್ ರಿಸರ್ವಾಯರ್‌ನಲ್ಲಿ ನೀರಿಲ್ಲ. ನೀವು ಹೋಗಿ ಅಟೆಮ್ಟ್ ಮಾಡಿದ್ದೀರಾ ಹೇಳಿ, ಸುಮ್ಮನೆ ಆರ್ಗ್ಯುಮೆಂಟಿಗೆ ಹೇಳುವುದಕ್ಕೆ ಹೋಗಬೇಡಿ.

SRI.K.N.NAGEGOWDA:- I will place all the records if you want what is the amount of inflow to the Cauvery Basin? Kindly listen to me. You have raised a most relevant point. First week and second week of June, inflow in the Reservoir is 1205 Cusecs, in the second week of June, the inflow in the Cauvery was 1286 cusecs. ಎಷ್ಟು ಬರಬೇಕಾಗಿತ್ತು- ಎಂದರೆ 16168 ಕ್ಯೂಸೆಕ್ಸ್ ನೀರು ಬರಬೇಕಾಗಿತ್ತು. 16,168 Cusecs of inflow was expected in the first week and second week of June. ಬಂದದ್ದು 2491. ಆದರಿಂದ First and Second week of June is a distress period. Therefore, we attempted before the Tribunal. ರಿಜಿಸ್ಟ್ರಾರ್ ಮುಂದೆ ಹೋಗಿದ್ದೇವೆ. ಆದರೆ ಜೂನ್ 3ನೇ ವಾರಕ್ಕೆ ಮತ್ತು ಜೂನ್ನ 4ನೇ ವಾರಕ್ಕೆ 16908ರಲ್ಲಿ 36 ಸಾವಿರ. ಅಂದರೆ ಜೂನ್ ತಿಂಗಳಲ್ಲಿ ಇನ್‌ಫ್ಲೋ ಎಷ್ಟು ಬರಬೇಕಾಗಿತ್ತು ಅಂದರೆ 32336 ಕ್ಯೂಸೆಕ್ಸ್ ಎಷ್ಟು ಇನ್‌ಫ್ಲೋ ಎಕ್ಸ್‌ಪೆಕ್ಟ್ ಮಾಡಿದ್ದೇವೆ ಅದಕ್ಕಂತ 38 ಸಾವಿರ ಕ್ಯೂಸೆಕ್ಸ್ ಅಂದರೆ ಜಾಸ್ತಿ ಬಂದಿದೆ. ಅಂದರೆ ಜೂನ್‌ನಲ್ಲಿ 6,000 Cusecs is more than the normal distress period. ಆದುದರಿಂದ ಡಿಸ್ಟ್ರೆಸ್ ಎಂದು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದುದರಿಂದ, ಜುಲೈ ಮೊದಲ ವಾರ ಡಿಸ್ಟ್ರೆಸ್ ಪೀರಿಯಡ್. ಅದಕ್ಕೆ ನಾವು ಕಾಯುತ್ತಿದ್ದೇವೆ. ಅದನ್ನು ಕ್ಯಾರಿ ಓವರ್ ಮಾಡಿಕೊಳ್ಳಬೇಕು. ಫಾರ್ಮುಲಾಸ್ ಏನಿವೆ ಅವನ್ನು ನಾವು ಅಟೆಮ್ಟ್ ಮಾಡುತ್ತೇವೆ. ಈಗ ನಾವು ಫೈಲ್ ಮಾಡಿದ್ದೇವೆ What you have said is that the Government have failed to file the distress formula before the Tribunal. ಅದಕ್ಕೇ ನಾನು ಹೇಳಿದೆ. Of course, you are correct, you have raised a very relevant point.

SRI M.MALLIKARJUN KHARGE:- I would like to

bring to your kind notice what was the inflow last year in the same month and this year. You can go through the article appeared in 'Samyukta Karnataka'. In have brought it.

ಶ್ರೀ ಕೆ.ಎನ್.ನಾಗೇಗೌಡ:- ಆರ್ಟಿಕಲ್ ಬೇಡ. I have placed the records before the House.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕಂಪೇರ್ ಮಾಡಿ. ಅಂದರೆ ಹೋದವರ್ಷದ ಇನ್‌ಫ್ಲೋ ಅದೇ ತಿಂಗಳಲ್ಲಿ ಈ ವರ್ಷದ ಇನ್‌ಫ್ಲೋ ನೋಡಿಕೊಂಡು ನೀವು ಹೇಳಬೇಕಾದರೆ. ಅದು ಸರಿ ಇದೆ ಅಂದರೆ ಆ ಮಾತು ಬೇರೆ. ಆದರೆ ಡಿಸ್ಟ್ರೆಸ್ ಫಾರ್ಮುಲಾ ಪ್ರಕಾರ ನಿಮ್ಮ ಅಟೆಂಪ್ಟ್.........

ಶ್ರೀ ಕೆ.ಎನ್.ನಾಗೇಗೌಡ:- ಹೋದವರ್ಷದ ಇನ್‌ಫ್ಲೋ ಈ ವರ್ಷದ ಇನ್‌ಫ್ಲೋ ಎಂದು ಕಂಪೇರ್ ಮಾಡುವುದಿಲ್ಲ ಡಿಸ್ಟ್ರೆಸ್‌ಗೆ. ಎಷ್ಟು ಕ್ಯೂಸೆಕ್ಸ್ ಇನ್‌ಫ್ಲೋ ಇದ್ದರೆ ಡಿಸ್ಟ್ರೆಸ್ ಎನ್ನುವುದನ್ನು ಡಿರೈವ್ ಮಾಡಿದ್ದಾರೆ. 8084 cusecs per month if inflow is there, that is distress. More than that inflow, it is not a distress. 1st & 2nd week of June, it is distress; 3rd & 4th week, it is not a distress. ಎಲ್ಲಾ ರೆಕಾರ್ಡ್ ಆಗಿದೆ. You can't compare previous year figures. You have to take this year's figures.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಹೋದವರ್ಷಕ್ಕೆ ಕಂಪೇರ್ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ನಾನು ಹೇಳುತ್ತೇನೆ ಹೋದವರ್ಷ ಅನೇಕ ಸಾರಿ ಇಂಥಹ ಸಂದರ್ಭಗಳು ಬಂದಾಗ ನೀರು ಬಿಟ್ಟಿಲ್ಲ. ಯಾವಾಗ ಬಿಟ್ಟಿದ್ದೇವೆ ಅಂದರೆ ಕುತ್ತಿಗೆಗೆ ಬಂದಾಗ ಬಿಟ್ಟಿದ್ದೇವೆ. ಇನ್ನೂ ನಿಮ್ಮನ್ನು ಯಾರೂ ಕೇಳಲೇ ಇಲ್ಲ. ತರಾತುರಿಯಲ್ಲಿ ಅಲ್ಲಿ ನೀರು ಇದೆಯೋ ಇಲ್ಲವೋ. ಶಹಬಾಸ್‌ಗಿರಿ ತೆಗೆದುಕೊಳ್ಳುವುದಕ್ಕೆ ಮಾಡಿದಿರಾ? when there are so many ways to approach before the court, ಇಷ್ಟಿದ್ದರೂ ಕೂಡ ಇವತ್ತಿನ ದಿವಸ ನೀವು ಇದನ್ನು ಬದಿಗಿಟ್ಟು ಹೋಗುತ್ತೇವೆ ಅಂದರೆ ನಾನೇನು ಹೇಳಬೇಕು ಆಗ? ಅಂದರೆ ಇದು ಏಕಪಕ್ಷೀಯವಾಗಿದೆ. ಆರ್ಬಿಟ್ರರಿಯಾಗಿದೆ. ಈ ರಾಜ್ಯದ ರೈತರಿಗೆ ಅನ್ಯಾಯವಾಗಿದೆ ನಿಮ್ಮ ಈ ನಿರ್ಣಯದಿಂದ. ಮತ್ತು ನೀವು ವಿರೋಧಪಕ್ಷದವರನ್ನು ಕರೆಯಿಸಿ ಮೋಸ ಮಾಡಿ ದ್ರೋಹ ಮಾಡಿದ್ದೀರಿ ಎಂಬ ಮಾತನ್ನು ಕೂಡ ನಾನು ಸ್ಪಷ್ಟವಾಗಿ ಇಲ್ಲಿ ಹೇಳಬೇಕಾಗುತ್ತದೆ. ನಿಮ್ಮ ಪಕ್ಷದ ಮೀಟಿಂಗ್‌ನಲ್ಲಿ ಏನು ನಡೆದಿದೆ ಎನ್ನತಕ್ಕದ್ದನ್ನು ಹೇಳುತ್ತೀರಿ. ಆದರೆ ಆ ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ತಯಾರಿಲ್ಲ. ಕೃಷ್ಣರಾಜಸಾಗರದಿಂದ ಎಷ್ಟು ನೀರು ಬಿಡಬೇಕು, ಕಬಿನಿಯಿಂದ ಎಷ್ಟು ನೀರು

ಬಿಡಬೇಕು ಹಾರಂಗಿಯಿಂದ ಎಷ್ಟು ನೀರು ಬಿಡಬೇಕು ಇದೆಲ್ಲವನ್ನೂ ಕೂಡ ನೀವು ಮಾತನಾಡುತ್ತೀರಿ. ಆದರೆ ಸದನದಲ್ಲಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿ ಎಂದು ನಾವು ಕೇಳಿದಾಗ ಹಠ ಹಿಡಿಯುತ್ತೀರಿ. ಸುಮಾರು ನಾಲ್ಕು ತಾಸಿನವರೆಗೆ ಇಲ್ಲಿ ಧರಣಿ ನಡೆಯಿತು. ಆದರೆ ಅದೇ ಮಾತನ್ನು ಮರುದಿವಸ ನಿಮ್ಮ ಪಕ್ಷದ ಮೀಟಿಂಗ್‌ನಲ್ಲಿ ಡಿಸ್‌ಕ್ಲೋಸ್ ಮಾಡಿದಿರಿ. ಅದನ್ನು ಪತ್ರಿಕೆ ಮೂಲಕ ಬಿಡುಗಡೆಯೂ ಆಯಿತು. ಸ್ಟೇಟ್‌ಮೆಂಟನ್ನೂ ಕೂಡ ಕೊಟ್ಟಿರಿ. ಅಂದರೆ ಇದು ಬ್ರೀಚ್ ಆಫ್ ಪ್ರಿವಿಲೈಜ್ ಅಲ್ಲವೇ? ಸದನ ನಡೆಯುವಾಗ, ಸದನ ನಡೆದಾಗ, ಸದನ ಅಸ್ತಿತ್ವದಲ್ಲಿದ್ದಾಗ ಸದನದಲ್ಲಿ ನಾವೆಲ್ಲರೂ ಜೀವಂತ ಇದ್ದಾಗ ಇಲ್ಲಿ ನೀವು ಆ ಸ್ಟೇಟ್‌ಮೆಂಟ್ ಮಾಡದೆ ಸ್ಟೇಟ್‌ಮೆಂಟ್ ಹೊರಗಡೆ ಮಾಡುತ್ತೀರಿ. ಆ ಹೇಳಿಕೆ ನಿಮ್ಮ ಪಕ್ಷದ ಮೀಟಿಂಗ್‌ನಲ್ಲಿ ಮಾಡುತ್ತೀರಿ. ಅಂದರೆ ನಿಮ್ಮ ಪಕ್ಷ ಬಹಳ ದೊಡ್ಡದೋ ಅಥವಾ ಸದನ ದೊಡ್ಡದೋ ಎನ್ನತಕ್ಕದ್ದನ್ನು ಹೇಳಬೇಕು. ಸದನದ ಸದಸ್ಯರಿಗೆ ಗೌರವ ಇಲ್ಲವೇ? ಇಲ್ಲಿ ಕೇಳುವುದಕ್ಕೆ ನಮಗೆ ಹಕ್ಕಿಲ್ಲವೆ? ಆ ಹಕ್ಕನ್ನು ಮೊಟಕುಗೊಳಿಸಿ ನಿಮಗೆ ಬೇಕಾದಲ್ಲಿ ಇದರ ಬಗ್ಗೆ ಪ್ರಕಟಣೆ ಮಾಡಿ ನೀರುಕೊಟ್ಟಿರಿ. ಇದು ಎರಡನೇ ತಪ್ಪು. ಅದಕ್ಕೆ ಬೇರೆ ಫಾರಂನಲ್ಲಿ ನಾವು ತರುತ್ತೇವೆ. ಯಾವರೀತಿಯಾಗಿ ಬ್ರೀಚ್ ಆಫ್ ಪ್ರಿವಿಲೈಜ್ ತರಬೇಕೋ ನೋಡೋಣ. ಆದರೆ ಇವತ್ತಿನ ದಿವಸ ಸ್ವಲ್ಪ ಸೌಜನ್ಯ ತೋರಿಸಲಿಲ್ಲ. ಸೀಕ್ರೆಟ್ ಇದೆ ಎಂದು ಹೇಳಿದಿರಿ ನಮಗೆ ಮೀಟಿಂಗ್‌ನಲ್ಲ. ಏನು ಸೀಕ್ರೆಟ್? ನಮಗೆ ಸೀಕ್ರೆಟ್ ಇದೆ ಎಂದು ಹೇಳಿಬಿಟ್ಟು ಜನತಾದಳದ ಪಾರ್ಟಿ ಮೀಟಿಂಗ್‌ನಲ್ಲಿ ಬಹಿರಂಗಗೊಳಿಸುತ್ತೀರಿ. ಆವತ್ತು ಮೀಟಿಂಗ್‌ನಲ್ಲಿ ಆಲ್ ಪಾರ್ಟಿ ಲೀಡರ್ಸ್ ಬಂದಿದ್ದರು. ಯಡಿಯೂರಪ್ಪನವರಿದ್ದರು, ನಂಜೇಗೌಡರಿದ್ದರು, ವಾಟಾಳ್ ನಾಗರಾಜ್ ಅವರು ಸಭಾಪತಿಯವರು ಇದ್ದರು. ಶ್ರೀರಾಮರೆಡ್ಡಿಯವರು, ಎಲ್ಲಾ ಪಾರ್ಟಿ ಲೀಡರ್‌ಗಳು ಇದ್ದರು. ಆ ಎಲ್ಲಾ ಪಾರ್ಟಿ ಲೀಡರ್ಸ್ ಇದ್ದಾಗ ಏನು ಹೇಳಿದರು? ಕೆಲವು ವಿಷಯಗಳಿವೆ. ಅದನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ನಾನು ಆಮೇಲೆ ಹೇಳುತ್ತೇನೆ ಅಂದಿರಿ. ಆದರೆ ನಿಮ್ಮ ಪಕ್ಷದ ಮೀಟಿಂಗ್‌ನಲ್ಲಿ ಎಲ್ಲವನ್ನೂ ಬಹಿರಂಗಪಡಿಸಿದಿರಿ. ಇದು ಯಾವ ನ್ಯಾಯ? ಇದು ಯಾವ ಕಾನೂನು? ನಾನು ಕೇಳುತ್ತೇನೆ. ಹೀಗೆ ಒಂದಲ್ಲ. ಅನೇಕ ತಪ್ಪುಗಳನ್ನು ಎಳೆಯುತ್ತಾ ಇದ್ದೀರಿ. ಮತ್ತು ನೀರು ನಮ್ಮಲ್ಲಿದೆ. ಅದರ ಅಂಕಿಅಂಶವನ್ನು ಈಗಾಗಲೇ ಯಡಿಯೂರಪ್ಪನವರು ಕೊಟ್ಟರು. ಪುನಃ ಅದನ್ನು ನಾನು ರೀಪೀಟ್ ಮಾಡುವುದಿಲ್ಲ. ಏನು? 30 ಟಿ.ಎಂ.ಸಿ. ನೀರಿದೆ, ಅದಕ್ಕೆ ನಾವು ಬಿಟ್ಟಿದ್ದೇವೆ ಎಂದು ನೀವು ಹೇಳಬೇಕಾದರೆ ನೀವು ಲೆಕ್ಕ ಹಾಕಿದ್ದುದು 6 ಲಕ್ಷ 70 ಸಾವಿರ. ಆದರೆ ಉಳಿದಂಥ, ಟೋಟಲ್ ಇರಿಗೇಷನ್ ಕಾವೇರಿ ಬೇಸಿನ್‌ನಲ್ಲಿರತಕ್ಕದ್ದು 11 ಲಕ್ಷ 20 ಸಾವಿರ. ಅದು ಅಂಕಿಸಂಖ್ಯೆ ನಾವು ಕೊಟ್ಟಿದ್ದೇವೆ. ಅಂದರೆ ನಾಳೆ ಕೇಳಿದಾಗ 6ಲಕ್ಷ 70 ಸಾವಿರ ಅಷ್ಟೇ ಸಾಕಾಗುತ್ತದೆ ಅಂದರೆ ಉಳಿದ 5 ಲಕ್ಷ ಕಲ್ಟಿವೇಟ್ ಮಾಡುತ್ತಿಲ್ಲವೆ? ಅದಕ್ಕೆ ನೀರು ಬೇಕಾಗಿಲ್ಲವೆ? ಅದಕ್ಕೆ ಎಂದು ನೀರು ಬೇಕಾಗುತ್ತದೆ? ಅದನ್ನು ಎಲ್ಲಾದರೂ ಹೇಳಿದ್ದೀರೋ? ನಾವು ಸೂಕ್ಷ್ಮವಾದ ಕೆಲವು ವಿಷಯಗಳನ್ನು ರಾಜ್ಯದ ಹಿತದೃಷ್ಟಿಯಿಂದ ಕೇಳಬಾರದು ಎಂದು ನಾವು ಯಾವುದನ್ನೂ ಕೂಡ ಕೇಳುವುದಕ್ಕೆ ಹೋಗಿಲ್ಲ. ಇಲ್ಲಿ

ಇರತಕ್ಕದ್ದನ್ನೂ ರೆಕಾರ್ಡ್‌ನಲ್ಲಿ ತೆಗೆಸತಕ್ಕ ಪ್ರಯತ್ನ ಆಯಿತು ಇಲ್ಲಿ. ಯಾವುದು? ಸಫಿಷಿಯೆಂಟ್ ವಾಟರ್ ಇದೆ ಎಂದು ಹೇಳಿ ಅವರು ಹೇಳಿದಮೇಲೆ ಅದು ಬೇಡ ಎಂದು ಆಯಿತು. ಇಷ್ಟಾದರೂ ಕೂಡ ನೀವು ಒಂದು ದೊಡ್ಡ ಸ್ಟೇಟ್‌ಮೆಂಟ್ ಕೊಟ್ಟಿರಿ. ಸಾಕಷ್ಟು ನೀರಿದೆ. 22 ಟಿ.ಎಂ.ಸಿ. ಸಾಕು ಜುಲೈ ಕೊನೆಯವರೆಗೆ. 6 ಲಕ್ಷ 72 ಸಾವಿರ ಎಕರೆಗೆ ನೀರು ಸಂಪೂರ್ಣವಾಗಿ ಸಾಕಾಗುತ್ತದೆ. ಇನ್ನೂ ಇನ್‌ಫ್ಲೋ ಬರುತ್ತಿದೆ. ಅದನ್ನು ಲೆಕ್ಕ ಹಾಕಿಲ್ಲ ಎಂದು ಹೇಳಿದರು. ಅದೂ ಲೆಕ್ಕ ಹಾಕಿದರೆ ಇನ್ನೂ ಹತ್ತು ಟಿ.ಎಂ.ಸಿ. ನೀರು ಅವರಿಗೆ ಕೊಡಬಹುದು ಅನ್ನತಕ್ಕದ್ದು ಅವರ ಅನಿಸಿಕೆ ಇದೆಯೋ ಏನೋ ಗೊತ್ತಿಲ್ಲ. ಏಕೆಂದರೆ ಈಗಾಗಲೇ ಕರುಣಾನಿಧಿ ಹೇಳಿದ್ದಾರೆ. ಏನಂತ? 5 ಟಿ.ಎಂ.ಸಿ. ನೀರು ಬಿಟ್ಟಿದ್ದಾರೆ. ಇದು ನಮಗೆ ಸಫಿಷಿಯೆಂಟ್ ಇಲ್ಲ. ಇನ್ನೂ 10 ಟಿ.ಎಂ.ಸಿ ನೀರು ಅವರು ಬೇಗನೆ ಬಿಡುತ್ತಾರೆ ಎನ್ನುವ ವಿಶ್ವಾಸ ನನಗಿದೆ ಇದೆ, ನನಗೆ ನಂಬಿಕೆ ಇದೆ ಎಂದು ಹೇಳಿ ಅವರು ಇವರನ್ನು ನಂಬಿಕೊಂಡು ಹೇಳಿದ್ದಾರೆ. ಅದು ಸತ್ಯ. ಯಾಕೆಂದರೆ ನೀವು ನಮ್ಮನ್ನೇ ನಂಬಲಿಲ್ಲ. ವಿರೋಧಪಕ್ಷದವರನ್ನು ಹಾಗೂ ಶಾಸಕರನ್ನೇ ನಂಬಲಿಲ್ಲ. ಯಾರನ್ನು ನಂಬಿದ್ದೀರಿ ಅಂದರೆ ಕರುಣಾನಿಧಿಯನ್ನು ನಂಬಿದ್ದೀರ. ದಿಲ್ಲಿಯವರಿಗೆ ಸವಿಸ್ತಾರವಾದ ವಿಷಯಗಳನ್ನು ಬೊಮ್ಮಾಯಿಯವರ ಹತ್ತಿರ ಹೇಳಿದ್ದೀರಿ. ನಮ್ಮ ಸಹಕಾರ ನಿಮಗೆ ಬೇಕು. ಎಲ್ಲಿ? ಟ್ರಿಬ್ಯುನಲ್ ಮುಂದೆ ಹೋಗುವುದಕ್ಕೆ. ಅಥವಾ ಯುನಾನಿಮಸ್ ರೆಸಲ್ಯೂಷನ್ ಪಾಸ್ ಮಾಡುವುದಕ್ಕೆ. ಅಥವಾ ಏನಾದರೂ ಗಲಾಟೆ ಆದರೆ ಲಾ ಅಂಡ್ ಆರ್ಡರ್ ಪರಿಸ್ಥಿತಿ ಹದಗೆಟ್ಟರೆ ಎಲ್ಲರೂ ಕೂಡ ಇದನ್ನು ಶಾಂತವಾಗಿ ಮಾಡಬೇಕು, ಪೀಸ್‌ಫುಲ್ ಆಟ್ಮಾಸ್ಫಿಯರ್ ತರಬೇಕು ಎನ್ನುವುದಕ್ಕೆ ನಮ್ಮ ಸಹಕಾರ ನಮ್ಮ ಸಹಾಯ ಬೇಕು. ಆದರೆ ಉಳಿದಂಥ ಕೆಲಸಕ್ಕೆ, ಅದೂ ನೀರು ಬಿಡುವುದಕ್ಕೆ ಯಾರಿಗೂ ಕೇಳಬೇಕಾಗಿಲ್ಲ. ಯಾಕೆ ಕೇಳಬೇಕು, ಇದು ನಮಗೆ ಅಧಿಕಾರ ಇದೆ ಎಂದು ಹೇಳುತ್ತೀರಿ. ಕೆ.ಇ.ಬಿ. ಪ್ರೈಸ್ ಹೈಕ್ ಬಗ್ಗೆಯೂ ಕೂಡ ಹೇಳಿದರು. ಪ್ರತಿಯೊಂದನ್ನೂ ನಿಮ್ಮನ್ನು ಕೇಳಿಯೇ ಮಾಡುವುದಕ್ಕಾಗುತ್ತದಾ ಎಂದು ಜೆ.ಎಚ್.ಪಟೇಲರು ಹೇಳಿದರು. ಅಂದರೆ ಎಷ್ಟು ಮಟ್ಟಿಗೆ ಸರ್ಕಾರ ಒಂದು ಕನ್‌ಸೆನ್‌ಸಸ್ ತೆಗೆದುಕೊಂಡು ಯಾವುದೇ ಒಂದು ಕೆಲಸ ಮಾಡುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಹೇಳುವುದು. ಆಮೇಲೆ ಸಿಕ್ಕಿಬಿದ್ದಾಗ ಇಲ್ಲ, ಇದು ರಾಜ್ಯದ ಹಿತದೃಷ್ಟಿಯಿಂದ ನೀವು ಒಪ್ಪಬೇಕು ಎಂದು ಹೇಳಿಕೊಂಡು ಇವತ್ತಿನ ದಿವಸ ತಾವು ಮುಂದೆ ಹೋಗುತ್ತಿದ್ದೀರಿ. ಇನ್ನೊಂದು ವಿಶೇಷವಾದಂಥದ್ದೇನೆಂದರೆ ಅವರು ಈಗ ಒಂದು ಸಸ್ಪೆನ್ಸ್ ಕ್ರಿಯೇಟ್ ಮಾಡಿದ್ದಾರೆ. ಯಾವುದೇ ಒಂದು ವಿಷಯವನ್ನು ಬಹಿರಂಗಪಡಿಸದೆ ತಮಗೆ ಬೇಕಾದಂಥ ರೀತಿಯಲ್ಲಿ ನಡೆದುಕೊಂಡು ಒಬ್ಬರಿಗೂ ಕೂಡ ಮಾಹಿತಿ ಕೊಡದೆ ತಿಳಿಸದೆ ಈ ಮಾತನ್ನು, 5 ಟಿ.ಎಂ.ಸಿ ನೀರನ್ನು ಬಿಟ್ಟು ಈ ರಾಜ್ಯದ ರೈತರಿಗೆ, ವಿಶೇಷವಾಗಿ ಕಾವೇರಿ ಬೇಸಿನ್‌ನಲ್ಲಿರತಕ್ಕ ರೈತರಿಗೆ ತೊಂದರೆ ಮಾಡಿದ್ದಾರೆ ಎನ್ನುವುದರಲ್ಲಿ ಯಾವ ಸಂಶಯವೂ ಕೂಡ ಇಲ್ಲ. ನಮ್ಮ ಹೇಳಿಕೆ ಪ್ರಕಾರ ಅಂತೂ ಅಲ್ಲಿ ನೀರಿಲ್ಲ. ಇದು ಬಿಡಬಾರದಿತ್ತು. ಬಿಟ್ಟಿದ್ದು ತಪ್ಪು ಎಂಬುದು ನಮ್ಮ ಸ್ಪಷ್ಟ ನಿಲುವು. ಅವರು ಮಾಡಿದಂಥದ್ದು ಮೋಸ ಎಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಅವರಿಗೆ ಯಾರದೂ ಕೂಡ ಒತ್ತಾಯ ಇರಲಿಲ್ಲ

ಎನ್ನುವ ಮಾತನ್ನೂ ಇನ್ನೂ ನಾನು ಸ್ಪಷ್ಟಪಡಿಸುತ್ತೇನೆ. ಸುಪ್ರೀಂ ಕೋರ್ಟ್ ಒತ್ತಾಯ ಇರಲಿಲ್ಲ. ಟ್ರಿಬ್ಯುನಲ್ ಒತ್ತಾಯ ಇರಲಿಲ್ಲ. ಅಥವಾ ದೊಡ್ಡ ಚಳುವಳಿ ನಡೆದು ಇಲ್ಲಿ ನೀವು ನೀರು ಕೊಡಲೇಬೇಕು ಎಂದು ಹೇಳಿ ನೂರಾರು ಜನ ಏನೂ ಸತ್ತಿಲ್ಲ. ಆದರೆ ಇದು ಎಲ್ಲಾ ಒತ್ತಡ ಇಲ್ಲದಿದ್ದರೂ ಕೂಡ ಅವರು ಇವತ್ತು ನೀರು ಬಿಡುತ್ತಾ ಇದ್ದಾರೆ ಅಂದರೆ ವೈಯಕ್ತಿಕವಾಗಿ ಶಹಭಾಸ್‌ಗಿರಿ ಪಡೆದುಕೊಳ್ಳುವುದಕ್ಕೆ ಈ ಸರ್ಕಾರ ಈ ಕೆಲಸ ಮಾಡಿದೆ ಎನ್ನತಕ್ಕ ಮಾತನ್ನು ನಾನು ಮತ್ತೊಮ್ಮೆ ಹೇಳುತ್ತೇನೆ. ಮತ್ತು ಅವರ ಸರ್ಕಾರ ಉಳಿದುಕೊಂಡು ಹೋಗಬೇಕು ಅಂದರೆ ನಾವು ಇದೇ ರೀತಿಯಾಗಿ ತಮಿಳುನಾಡಿಗೆ ನೀರು ಬಿಟ್ಟುಕೊಳ್ಳುತ್ತಲೇ ಹೋಗಬೇಕಾಗುತ್ತದೆ ಎಂದು ಹೇಳಿ ಅವರು ಒಂದು ನಿರ್ಣಯಕ್ಕೆ ಬಂದಿದ್ದಾರೆ.

ಕಾವೇರಿಯದು ಇದೆ ಎಂದು ನಾವು ನಿಮ್ಮ ಜೊತೆಯಲ್ಲಿ ಎಜಿಟೇಷನ್ ಮಾಡಿದ್ದೇವೆ. ನಿಮ್ಮ ಜೊತೆಯಲ್ಲೂ ಬಂದಿದ್ದೇವೆ, ನೀವೂ ಸತ್ಯಾಗ್ರಹ ಮಾಡಿದವರು. ಆದರೆ ಈಗ ಏನಾಗಿದೆ ಎಂದರೆ ನೀವು ಆ ಕಡೆ ಹೋಗಿ ನಿಮ್ಮ ಧಾಟಿಯನ್ನೇ ಬದಲಾಯಿಸಿಬಿಟ್ಟರಲ್ಲಾ. 8ನೇ ತಾರೀಖು 3 ಗಂಟೆಯವರೆಗೆ ನಮ್ಮ ಧಾಟಿಯಲ್ಲೇ ಮಾತನಾಡುತ್ತಿದ್ದಿರಿ. 4 ಗಂಟೆಗೆ ನಿಮ್ಮ ಧಾಟಿಯೇ ಬದಲಾವಣೆಯಾಯಿತು. 9-10 ಗಂಟೆಗೆ ದೇವೇಗೌಡರ ಜೊತೆಯಲ್ಲಿ ಮಾತನಾಡಿದರೂ ಕೂಡ ಆ ಧಾಟಿಯಲ್ಲಿ ಸ್ವಲ್ಪವೂ ವ್ಯತ್ಯಾಸವಾಗಿರಲಿಲ್ಲ. ಆದರೆ ಮದರಾಸಿನಿಂದ ಟೆಲಿಫೋನ್ ಬಂದಮೇಲೆ ಧಾಟಿ ಇಬ್ಬರ ದಿಸೆಯಲ್ಲೂ ಬದಲಾವಣೆಯಾಯಿತು. ಡೆಲ್ಲಿ ಮತ್ತು ಮದರಾಸು, ಎರಡೂ ಕಡೆಗಳಿಂದ ಟೆಲಿಫೋನ್ ಬಂದ ಮೇಲೆ ವಾತಾವರಣವೇ ಬದಲಾವಣೆಯಾಯಿತು. ಆಗ ಅವರಿಗೆ ಅರಿವಾಯಿತು, ಏನೆಂದರೆ ಡೆಲ್ಲಿಯಲ್ಲಿ ನಾವು ರಾಜ್ಯ ಕಳೆದುಕೊಳ್ಳಬೇಕಾಗುತ್ತದೆ, 5 ಟಿಎಂಸಿ ನೀರು 5 ಲಕ್ಷ ಎಕರೆ ನೀರಾವರಿಗೆ ಆಗುತ್ತದೆ ಅಷ್ಟೇ; 5 ಲಕ್ಷ ಎಕರೆಗೆ ಒಂದು ಸಲ ನೀರು ಕೊಡಬೇಕಾದರೆ 5 ಟಿಎಂಸಿ ನೀರು ಬೇಕು ಎಂದು ಹೆಚ್ಚು ಕಡಿಮೆ ನಿಮ್ಮ ತಜ್ಞರ ಅಭಿಪ್ರಾಯ. ಅಂದರೆ, ಅಷ್ಟು ನೀರು ಕೊಟ್ಟರೆ ಏನಾಗುತ್ತದೆ, ನಮ್ಮ ರೈತರಿಗೆ ಕೊಡದೇ ಇದ್ದರೂ ನಡೆಯುತ್ತದೆ. ಏಕೆಂದರೆ, ಅವರು ಏನು ತಿಳಿದುಕೊಂಡರು ಎಂದರೆ ನಾವು ನೀರು ಬಿಟ್ಟಿದ್ದೇವೆ, ತೆರಿಗೆಗಳನ್ನು ಹೆಚ್ಚು ಮಾಡಿದ್ದೇವೆ, ದರ ಹೆಚ್ಚು ಮಾಡಿದ್ದೇವೆ, ಅದು ಕೆಇಬಿ ದರ ಇರಬಹುದು, ಹಾಲಿನ ದರ ಇರಬಹುದು, ಪೆಟ್ರೋಲ್ ದರ ಇರಬಹುದು, ಡೀಸಲ್ ದರ ಇರಬಹುದು, ಇವೆಲ್ಲವನ್ನೂ ಹೆಚ್ಚಿಗೆ ಮಾಡಿದರೂ ಕೂಡ ಜನ ನಮಗೆ ಮುನಿಸಿಪಾಲಿಟಿಯಲ್ಲಿ ವೋಟ್ ಕೊಟ್ಟಿದ್ದಾರೆ, ಪಾರ್ಲಿಮೆಂಟಿನಲ್ಲಿ ಕೊಟ್ಟಿದ್ದಾರೆ, ಅಸೆಂಬ್ಲಿಯಲ್ಲಿ ಕೊಟ್ಟಿದ್ದಾರೆ, ಹೀಗೆ ಎಲ್ಲಾ ಕಡೆಯೂ ಕೂಡ ಕೊಟ್ಟಿದ್ದಾರೆ. ಅದಕ್ಕೆ ಏನು ಮಾಡಿದರೂ ನಡೆಯುತ್ತದೆ ಎನ್ನತಕ್ಕಂಥ ಒಂದು ಭ್ರಮೆಯಲ್ಲಿ ಅವರು ಇದ್ದಾರೆ. ಆದರೆ ಒಂದು ಸಾರಿ ಏಟು ಬಿದ್ದರೆ, ಆಮೇಲೆ ಇವರು ಏಳುವುದಿಲ್ಲ. ಅದು ಏನೊಂದು ಸಾರಿ ಚೆನ್ನಾಗಿ ಇರುತ್ತದೆ. ಒಂದು ವರ್ಷ, ಎರಡು ವರ್ಷ ಎಂದು ಟೈಮ್ ಇರುತ್ತದೆ. ಅದು ಆದಮೇಲೆ, ಮೇಲಿನ ಏಟು ಬಿದ್ದರೆ ಆಗ ಯಾರೂ ಏಳುವುದಕ್ಕೆ ಸಾಧ್ಯವಿಲ್ಲ, ಇದು ಒಂದು. ಎರಡನೆಯದು, ಅವರು ಏನು ಹೇಳಿದರು ಎಂದರೆ 3,500 ಕ್ಯೂಸೆಕ್ಸ್ ನೀರನ್ನು

ಪ್ರತಿದಿನ ಬಿಡುತ್ತಿದ್ದೇವೆ. 5 ಟಿಎಂಸಿ ನೀರು ಹೋಗಬೇಕೆಂದರೆ ಸುಮಾರು 10 ದಿವಸ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿನ ವರದಿ ಪ್ರಕಾರ, ಲೋಕಲ್ ರಿಪೋರ್ಟ್ ಪ್ರಕಾರ, ಮಾಹಿತಿಗಳ ಪ್ರಕಾರ, ಇವತ್ತಿನ ದಿವಸ ಇವರು 3,500 ಅಲ್ಲ, ಸುಮಾರು ಕೆಲವು ಕಡೆಗಳಲ್ಲಿ 6 ಸಾವಿರದಿಂದ 20 ಸಾವಿರ ಕ್ಯೂಸೆಕ್ಸ್ ನೀರು ಬಿಡುತ್ತಿದ್ದಾರೆ. ಅನ್ನತಕ್ಕಂಥ ಸ್ಪಷ್ಟವಾದಂಥ ಒಂದು ವರದಿ ಮೈಸೂರಿನಿಂದ ಬಂದಿದೆ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ. ಯಾವ ರೀತಿಯಾಗಿ ಅದಕ್ಕೆ ಎಕ್ಸ್‌ಪ್ಲನೇಷನ್ ಕೊಡುತ್ತಾರೋ ನನಗೆ ಗೊತ್ತಿಲ್ಲ. ಮತ್ತು ಇದರಿಂದ ಅಕ್ಕಪಕ್ಕದಲ್ಲಿರತಕ್ಕಂಥ ಹಳ್ಳಿಗಳ ಜನರಿಗೆ ತೊಂದರೆಯಾಗುತ್ತದೆ ಎಂದು ಅಲರ್ಟ್ ಕೂಡ ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಅದಕ್ಕೆ ಇದರ ಬಗ್ಗೆಯೂ ಕೂಡ ತಾವು ತಮ್ಮ ಸ್ಪಷ್ಟವಾದಂಥ ಅನಿಸಿಕೆಯನ್ನು ಹೇಳಬೇಕು ಮತ್ತು ಪುನಃ ನಮ್ಮ ಬೇಡಿಕೆ ಇದೇ. ನಾವು ಪದೇ ಪದೇ ಬೇರೆ ಬೇರೆ ವಿಷಯ ಪ್ರಸ್ತಾಪ ಮಾಡುವುದಿಲ್ಲ. ತಾವು ದಯವಿಟ್ಟು ಪ್ರಧಾನಮಂತ್ರಿಗಳು ಹೇಳಿದ್ದಾರೆ ಎಂದು ನೀರು ಬಿಡುವುದಕ್ಕೆ ಹೋಗಬೇಡಿ ಅಥವಾ ಬೊಮ್ಮಾಯಿಯವರು ಟೆಲಿಫೋನ್ ಮಾಡಿದರು ಎಂದು ನೀರು ಬಿಡುವುದಕ್ಕೆ ಹೋಗಬೇಡಿ. ಇಲ್ಲಿನ ವಾಸ್ತವ ಪರಿಸ್ಥಿತಿ ನೋಡಿಕೊಂಡು ನೀವು ಆ್ಯಕ್ಟ್ ಮಾಡಬೇಕಾಗುತ್ತದೆ. ಈಗಲಾದರೂ, ಕನಿಷ್ಟ ಪಕ್ಷ ತಾವು ತಕ್ಷಣ ನೀರು ನಿಲ್ಲಿಸಿ, ಮುಂದೇ ಬೇಕಾದರೆ ಕುಳಿತು ಚರ್ಚೆಮಾಡಿ ಯಾವರೀತಿಯಾಗಿ ನಾವು ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ತಾವು ಒಪ್ಪಿದರೆ ನಿಜವಾಗಿಯೂ ರಾಜ್ಯಕ್ಕೆ ಒಂದು ಒಳ್ಳೆಯ ಹೆಸರು ಬರುತ್ತದೆ ಮತ್ತು ರೈತರ ಸಮಸ್ಯೆಗೆ ನಾವು ನೀವು ಕೂಡಿಯೇ ಸ್ಪಂದಿಸಿದ ಹಾಗೆ ಆಗುತ್ತದೆ. ಅದಕ್ಕಾಗಿ ದಯವಿಟ್ಟು ಈಗಲಾದರೂ ನೀರು ನಿಲ್ಲಿಸಬೇಕು. ಈಗ ಬಹಳ ಎಂದರೆ ಒಂದು ಟಿ.ಎಂ.ಸಿ ಅಥವಾ ಎರಡು ಟಿಎಂಸಿ ನೀರು ಹೋಗಿದೆ. ಕನಿಷ್ಟ ನಾವು ಇನ್ನೂ 3 ಟಿಎಂಸಿ ನೀರು ಉಳಿಸಬಹುದು. ಅದಕ್ಕೆ ತಾವು ದಯವಿಟ್ಟು ಇದರ ಬಗ್ಗೆ ತಕ್ಷಣ ಆದೇಶವನ್ನು ಕೊಟ್ಟು ಈ 3ಟಿಎಂಸಿ ನೀರನ್ನು ಉಳಿಸಬೇಕು ಮತ್ತು ನೀರು ನಿಲ್ಲಿಸಬೇಕು ಎನ್ನುವುದರ ಬಗ್ಗೆ ಆದೇಶ ಕೊಡಬೇಕು ಎನ್ನತಕ್ಕಂಥ ಮಾತನ್ನು ನಾನು ತಮಗೆ ಇವತ್ತು ಕೇಳಿಕೊಳ್ಳುತ್ತಿದ್ದೇನೆ. ತಾವು ಇದನ್ನು ಒಪ್ಪುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಮತ್ತು ನಾನು ಈಗಾಗಲೇ ಪ್ರಾಮುಖ್ಯವಾದಂಥ ಒಂದು ಪ್ರಶ್ನೆಯನ್ನು ನಾನು ಎತ್ತಿದ್ದೇನೆ. ನಿಮಗೆ ಅನೇಕ ಹಾದಿಗಳಿದ್ದರೂ ಕೂಡ, ಆ ಹಾದಿಯಿಂದ ಹೋಗದೆ, ಹಿಂದಿನ ಬಾಗಿಲಿನಿಂದ ಹೋಗಿದ್ದೀರಿ, ಇದು ಸರಿಯಲ್ಲ, ಅದರ ಬಗ್ಗೆಯೂ ಕೂಡ ಸ್ಪಷ್ಟವಾದಂಥ ನಿಮ್ಮ ನಿಲುವನ್ನು ಹೇಳಬೇಕು ಮತ್ತು ಮುಂದೆ ತಾವು ನೀರನ್ನು ನಿಲ್ಲಿಸುತ್ತೀರೋ, ಇಲ್ಲವೋ ಎನ್ನತಕ್ಕಂಥಾದ್ದರ ಬಗ್ಗೆಯೂ ಕೂಡ ಸ್ಪಷ್ಟಪಡಿಸಬೇಕು ಎನ್ನತಕ್ಕಂಥ ಮಾತನ್ನು ತಮ್ಮ ಮುಖಾಂತರ ಅವರಿಗೆ ಕೇಳಿಕೊಂಡು, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಯು.ಆರ್.ಸಭಾಪತಿ (ಉಡುಪಿ):- ಸನ್ಮಾನ್ಯ ಸಭಾಧ್ಯಕ್ಷರೇ, ಸದನದ ಹಿರಿಯ ವಿರೋಧಪಕ್ಷದ ನಾಯಕರುಗಳು ಬಹಳ ಸವಿಸ್ತಾರವಾಗಿ, ರಾಜ್ಯದಲ್ಲಿ ಎರಡು

ದಿನಗಳಿಂದ ಆಗಿರತಕ್ಕಂಥ ಆಗುಹೋಗುಗಳ ಬಗ್ಗೆ ವಿವರವಾಗಿ ಹೇಳಿದ್ದಾರೆ. ಇವತ್ತು ರಾಜ್ಯಾದ್ಯಂತ ಒಂದು ಉದ್ವಿಗ್ನತೆ ಬಂದಿದೆ. ಜನರಲ್ಲಿ ಭೀತಿ ಹಬ್ಬಿದೆ. ಈ ಸರ್ಕಾರದವರು ರಾಜ್ಯದಲ್ಲಿ ಏನು ಮಾಡುತ್ತಿದ್ದಾರೆ, ರಾಷ್ಟ್ರದ ಚುಕ್ಕಾಣಿ ಹಿಡಿದವರು ಏನು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಬಹಳ ವ್ಯಾಕುಲತೆಯಿಂದ ಚಿಂತಿತರಾಗಿದ್ದಾರೆ. ದಿನಕ್ಕೊಂದು ರೀತಿಯ ಆಘಾತವನ್ನು ನಮ್ಮ ರಾಜ್ಯದ ಜನತೆ ಈ ಸರ್ಕಾರದಿಂದ ಎದುರಿಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಒಂದು ದಿನ ಕೆ.ಇ.ಬಿ.ಯ ವಿದ್ಯುತ್ ದರದ ಆಘಾತ ಅನುಭವಿಸಿದರೆ ಮತ್ತೊಂದು ದಿನ ಅದರ ಜೊತೆಗೆ ಬಂತು, ಪೆಟ್ರೋಲ್, ಡೀಸಲ್ ಮತ್ತು ಅಡಿಗೆ ಅನಿಲದ ದರಗಳ ಏರಿಕೆಯ ಬಗ್ಗೆ ಇನ್ನೊಂದು ಆಘಾತ. ಅದು ಮುಗಿದದ್ದೇ ತಡ, ಅದರ ಹಿಂದೆಯೇ ಕಾವೇರಿಯ ನೀರನ್ನು ತಮಿಳುನಾಡಿಗೆ ಬಿಡುವಂಥ ಒಂದು ಕೃತ್ಯವನ್ನು ಇವರು ಎಸಗಿದ್ದಾರೆ. ೬ನೇ ತಾರೀಖಿನ ದಿವಸ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ವಿರೋಧ ಪಕ್ಷಗಳ ನಾಯಕರನ್ನು ಕರೆಸಿ, ಇವರು ಬಹಳ ಚೆನ್ನಾಗಿ ಮಾತನಾಡಿದರು. ನಮ್ಮೊಂದಿಗೆ ಮಾತನಾಡುವಾಗ ಮಾನ್ಯ ನಾಗೇಗೌಡರಿಗೆ ಮುಖ್ಯಮಂತ್ರಿಗಳಿಗೆ ಬಹಳ ಕಳಕಳಿಯಿಂದ ಇತ್ತು. ಏನು ಕಳಕಳಿ ಎಂದರೆ ನಮಗೆ ಬಹಳ ಸಂತೋಷವಾಯಿತು. ಇವತ್ತಾದರೂ ಇವರು ನಮ್ಮ ವಿರೋಧ ಪಕ್ಷದ ನಾಯಕರುಗಳನ್ನು ಇಷ್ಟೊಂದು ರೀತಿಯಲ್ಲಿ ನಮಗೆ ಒಂದು ಮಾನ್ಯತೆ ಕೊಟ್ಟರಲ್ಲಾ ಎಂದು ಬಹಳ ಸಂತೋಷದಿಂದ ನಾವೂ ಕೂಡ ಹೊರಗೆ ಬರುವಾಗ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೇ, ಪ್ರಧಾನಮಂತ್ರಿಗಳ ಹತ್ತಿರ ಮುಖ್ಯಮಂತ್ರಿಗಳು ಮಾತನಾಡುತ್ತಾರಂತೆ, ಒಂದು ದಿವಸ ಬಿಡೋಣ ಎಂದು ಬಿಟ್ಟರೆ, ಮಾರನೇ ದಿವಸ ಬೆಳಿಗ್ಗೆ ಎದ್ದು ನಾವು ಪತ್ರಿಕೆ ಓದುವಾಗ ಏನನ್ನು ನೋಡಿದ್ವು ಎಂದರೆ 5 ಟಿಎಂಸಿ ನೀರು ಬಿಡಲಾಗಿದೆ. 5 ಟಿಎಂಸಿ ನೀರನ್ನು ತಮಿಳುನಾಡಿಗೆ ಇವರು ಬಿಟ್ಟಾಗಿದೆ. ಇಲ್ಲಿ ಬಂದು ನಾವು ಧರಣಿ ಕುಳಿತರೆ ಮಾನ್ಯ ಮುಖ್ಯಮಂತ್ರಿಗಳು, ಏನು ನಿಮ್ಮ ನಾಟಕ ಎಂದು ಹೇಳುತ್ತಿದ್ದಾರೆ. ನಾಟಕವನ್ನು ಯಾರು ಸ್ವಾಮಿ ಮಾಡಿದ್ದು? ನೀವು ಮಾಡಿದ್ದೋ ಅಥವಾ ನಾವು ಮಾಡಿದ್ದೋ? ವಿರೋಧ ಪಕ್ಷಗಳ ನಾಯಕರುಗಳ ಸಭೆಯನ್ನು ಕರೆಸಿ, ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿಬಿಟ್ಟು, ನೀವು ಮುಖ್ಯಮಂತ್ರಿಗಳು ಯಾವುದೋ ಸಂದರ್ಭದಲ್ಲಿ ಹೇಳಿಕೆ ಕೊಟ್ಟಿದ್ದಾರೆ, ತಮಿಳುನಾಡಿಗೆ ನೀರನ್ನು ಬಿಡುವುದಿಲ್ಲ ಎಂದು ಹೇಳಿರುವುದನ್ನು ಸರ್ವಥಾ ಅಲ್ಲಗಳೆದುಕೊಂಡು ರಾತ್ರೋ ರಾತ್ರಿ ದೆಹಲಿಯಿಂದ ಆದೇಶ ಬಂದ ತಕ್ಷಣ, ನಿಮ್ಮ ನಿಮ್ಮಿಷ್ಟಕ್ಕೇ 5 ಟಿಎಂಸಿ ನೀರನ್ನು ಬಿಡುವಂಥ ಒಂದು ಪ್ರಯತ್ನವನ್ನು ಮಾಡಿದಿರಲ್ಲಾ, ಅದು ಯಾರದ್ದು ಸ್ವಾಮಿ ನಾಟಕ? ನಿಮ್ಮ ನಾಟಕವೋ, ನಮ್ಮ ನಾಟಕವೋ? ಆತ್ಮಸಾಕ್ಷಿಗೆ ಸರಿಯಾಗಿ ನೀವು ಮಾತನಾಡಬೇಕು. ಈ ರಾಜ್ಯದ ಹಿತ ಚಿಂತನೆಯ ಒಂದೇ ಒಂದು ಕಾರಣ ಆಗಿದ್ದಿದ್ದರೆ ನೀವು ನೀರು ಬಿಟ್ಟರೆ ನಿಮ್ಮಿಂದ ಏನೂ ಆಕ್ಷೇಪ ಇಲ್ಲ. ಇವತ್ತು ಲೋಕಸಭೆ ಪ್ರಾರಂಭವಾಗಿದೆ. ಇವತ್ತು ಅಲ್ಲಿ ಲೋಕಸಭೆ ಪ್ರಾರಂಭವಾಗಿ ದೇವೇಗೌಡರು ಅಲ್ಲಿ ಇರಬೇಕಾದರೆ ತಮಿಳುನಾಡಿನ ಸಂಸತ್ ಸದಸ್ಯರ ಬೆಂಬಲ ಬೇಕಾಗಿದೆ. ಇದಕ್ಕೋಸ್ಕರ ನೀವು ಈ ರಾಜಕೀಯವನ್ನು ತಿರುಗಿಸಿದಿರಿ. ಇದಕ್ಕೋಸ್ಕರ ರಾಜ್ಯದ ಜನತೆಯ ಹಿತಾಸಕ್ತಿಯನ್ನು ಬಲಿಕೊಟ್ಟಿದ್ದೀರಿ

ಎಂದು ಹೇಳಿದರೆ ತಪ್ಪಾಗಲಾರದು. 9ನೇ ತಾರೀಖಿನ ದಿವಸ ನೀವು ನಮ್ಮನ್ನು ಕರೆಯಬಹುದಿತ್ತು, ಎಲ್ಲಾ ವಿರೋಧ ಪಕ್ಷಗಳ ನಾಯಕರನ್ನು ಕರೆಸಿ, ಮುಂಚಿನ ದಿವಸ ನೀವು ಸಭೆ ಕರೆದ ಹಾಗೆ ಇಲ್ಲಿ ಏನಾಗಿದೆ, ಏನು ನಡೆಯುತ್ತಿದೆ ಎಂದು ಹೇಳುವಂಥ ವಿಚಾರವನ್ನು ನಮ್ಮಲ್ಲಿ ಹೇಳಬಹುದಿತ್ತು. ಮಾನ್ಯ ಮುಖ್ಯಮಂತ್ರಿಗಳು 8ನೇ ತಾರೀಖು ಹೇಳಿದರು, ವಿಷಯ ಬಹಳ ಗುಟ್ಟಿನ ವಿಷಯವಾಗಿರುತ್ತದೆ. ಅದನ್ನು ಇಲ್ಲಿ ಹೇಳಲಿಕ್ಕೆ ಆಗುವುದಿಲ್ಲ. ಇಲ್ಲಿ ಅಧಿಕಾರಿಗಳು ಇರುತ್ತಾರೆ, ಅವರು ಇರುತ್ತಾರೆ, ಇವರು ಇರುತ್ತಾರೆ, ಅದು ನಾಳೆ ಕೋರ್ಟಿಗೆಲ್ಲಾ ತುಂಬಾ ತೊಂದರೆಯಾಗುತ್ತದೆ ಎಂದು ಹೇಳುವುದಿದ್ದರೆ, ನೀವು ರಾತ್ರಿ ಎಂಟೂವರೆ ಗಂಟೆಗೋ, ಒಂಭತ್ತು ಗಂಟೆಗೋ, ಹತ್ತು ಗಂಟೆಗೋ ನಮ್ಮನ್ನು ಕರೆಯಿಸಿ ನಮ್ಮ ಹತ್ತಿರ ಮಾತುಕತೆ ನಡೆಸಬಹುದಿತ್ತು. ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಿದ್ದರೆ, ನಾವು 12 ಗಂಟೆ ರಾತ್ರಿಯಲ್ಲೂ ಕೂಡ ನಿಮ್ಮ ಹತ್ತಿರ ಬಂದು ನಾವು ನಿಮ್ಮ ಹತ್ತಿರ ಮಾತುಕತೆಗೆ ಸಿದ್ಧರಿದ್ದೇವೆ. ಆದರೆ ಅದನ್ನೆಲ್ಲಾ ಬಿಟ್ಟರು. 9 ಗಂಟೆಗೆ ಜನತಾದಳ ಪಾರ್ಟಿಯದು ಲೆಜಿಸ್ಲೇಟೀವ್ ಮೀಟಿಂಗ್ ಕರೆದಿರಿ. ಅಲ್ಲಿ ನೀವು ಅನೌನ್ಸ್ ಮಾಡಿದಿರಿ. ಅಲ್ಲಿ ನಿಮ್ಮ ಕಾರ್ಯದರ್ಶಿಗಳು ಒಂದು ದೊಡ್ಡ ಪ್ರೆಸ್ ರೀಲೀಸ್ ರಿಲೀಸ್ ಮಾಡಿದರು. ಇಲ್ಲಿ ಕುಳಿತುಕೊಂಡಿರುವಾಗಲೇ ನಮಗೆ ಪ್ರೆಸ್ ರಿಲೀಸ್‌ನ ತುಣುಕು ಬಂತು. ಹಾಗಾದರೆ ನಿಮ್ಮ ವಿಶ್ವಾಸಘಾತಕತನ ಇದಕ್ಕೆ ರಾಜ್ಯದ ಜನ ಖಂಡಿತವಾಗಿಯೂ ಛೀಮಾರಿ ಹಾಕುತ್ತಾರೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ನೀವು ಹೇಳುತ್ತೀರಿ, ನಮ್ಮಲ್ಲಿ ಬೇಕಾದಷ್ಟು ನೀರು ಇದೆ ಎಂದು. ಒಂದು ವೇಳೆ ಬೇಕಾದಷ್ಟು ನೀರು ಇದ್ದಿದ್ದರೆ ನೀರನ್ನು ಬಿಟ್ಟುಬಿಡಿ. ಈ ಸುಪ್ರೀಂ ಕೋರ್ಟ್ ಏಕೆ ಇಷ್ಟೊಂದು ಖರ್ಚು ಮಾಡಬೇಕು, ಲಕ್ಷಗಟ್ಟಲೆ ವಕೀಲರಿಗೆ ಏಕೆ ತುಂಬಿಸಬೇಕು. ನೀರು ಸಮೃದ್ಧವಾಗಿ ಹೋಗಲಿ ತಮಿಳುನಾಡಿಗೆ. ಯಾರೂ ಬೇಡ ಎಂದು ಹೇಳುವುದಿಲ್ಲ. ಜನ ನಿಮ್ಮನ್ನು ನೋಡುತ್ತಾರೆ. ಕಳೆದ ವರ್ಷ ಇದೇ ಹೊತ್ತಿನಲ್ಲಿ, ಇದೇ ರೀತಿ ಒಂದು ಅವ್ಯವಸ್ಥೆ ಆಗಿತ್ತು. ಇಡೀ ರಾಜ್ಯದಲ್ಲಿ ಉದ್ವಿಗ್ನತೆ ಬಂತು. ಆಗಲಾದರೂ ಒಂದು ವೇಳೆ ನೀವು ಆಗಿನ ಪರಿಸ್ಥಿತಿ, ಈಗಿನ ಪರಿಸ್ಥಿತಿ ಹೋಲಿಸುವುದು ಇದ್ದರೆ, ಈಗಾಗಲೇ ಮಾನ್ಯ ಖರ್ಗೆ ಸಾಹೇಬರು ಹೇಳಿದರು, ಕಳೆದ ವರ್ಷ 1995ನೇ ಇಸವಿಯಲ್ಲಿ ಕೃಷ್ಣರಾಜಸಾಗರದಲ್ಲಿ ಎಷ್ಟು ಕ್ಯೂಸೆಕ್ಸ್ ಪ್ರಮಾಣದ ನೀರು ಇದೆ ಎಂದರೆ 5,270 ಕ್ಯೂಸೆಕ್ಸ್ ನೀರು ಕಳೆದ ವರ್ಷ ಇದ್ದರೆ, ಈ ವರ್ಷ 891 ಕ್ಯೂಸೆಕ್ಸ್ ನೀರು ಇದೆ. ಕಪಿಲಾದಲ್ಲಿ ಕಳೆದ ವರ್ಷ 8,285 ಕ್ಯೂಸೆಕ್ಸ್ ನೀರು ಇದ್ದರೆ, ಈ ವರ್ಷ 1,978 ಕ್ಯೂಸೆಕ್ಸ್ ನೀರು ಇದೆ.

4.20 ಪಿ.ಎಂ.

ಹಾರಂಗಿಯಲ್ಲಿ 531 ಕ್ಯೂಸೆಕ್ಸ್ ಇದ್ದಿದ್ದು ಈಗ 440ಕ್ಕೆ ಇಳಿದಿದೆ. ಹೇಮಾವತಿಯಲ್ಲಿ 1525 ಕ್ಯೂಸೆಕ್ಸ್ ಇದ್ದರೆ ಈ ವರ್ಷ 528ಕ್ಕೆ ಇಳಿದಿದೆ. ಹಾಗಾದರೆ ನೀರು ಎಲ್ಲಿದೆ ಸ್ವಾಮಿ? ಅದಕ್ಕೆ ಏನು ಹೇಳುತ್ತೀರಿ? ಇವತ್ತು ಮಳೆಯಿಲ್ಲದೆ ನಮ್ಮ ರಾಜ್ಯದ ಜನ ತತ್ತರಿಸುತ್ತಿದ್ದಾರೆ. ಎಲ್ಲೆಲ್ಲೂ ಕುಡಿಯುವ ನೀರಿಲ್ಲ. ಮೈಸೂರು, ಬೆಂಗಳೂರು, ಮಂಡ್ಯದಂಥ ದೊಡ್ಡದೊಡ್ಡ ನಗರಸಭೆಗಳಲ್ಲಿ ಕುಡಿಯುವ ನೀರು ಇಲ್ಲದೆ ಮಹಿಳೆಯರು

ಕೊಡಪಾನಗಳನ್ನು ಕಂಕುಳಲ್ಲಿ ಇಟ್ಟುಕೊಂಡು ಮೈಲುಗಟ್ಟಲೆ ನಡೆಯುತ್ತಿದ್ದಾರೆ. ಇಂತಹ ಅವ್ಯವಸ್ಥೆ ಇರುವಾಗ ನೀವು ರಾಜ್ಯದ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿ ತಮಿಳುನಾಡಿಗೆ ನೀರು ಬಿಟ್ಟಿದ್ದೀರಿ. ಇದು ರಾಜಕೀಯ ದೊಂಬರಾಟ ಇರಬಹುದು. ಅದಕ್ಕೋಸ್ಕರ ವಿಶೇಷವಾಗಿ ಇವತ್ತು ತಮಿಳುನಾಡು ಮುಖ್ಯಮಂತ್ರಿಗಳಿಗೆ ಜಯಲಲಿತಾ ಅವರಿಂದ ಬದುಕಬೇಕಾಗಿದೆ. ಜಯಲಲಿತಾ ಅವರಿಂದ ಕರುಣಾನಿಧಿ ಬದುಕಬೇಕು. ದೇವೇಗೌಡರು ಬದುಕಬೇಕಾದರೆ ಕರುಣಾನಿಧಿಯವರನ್ನು ಬದುಕಿಸಬೇಕು. ಪಟೇಲರು ಬದುಕಬೇಕಾದರೆ ದೇವೇಗೌಡರಿಂದ ಬದುಕಬೇಕು. ಇವರೆಲ್ಲಾ ಬದುಕುವುದಕ್ಕೋಸ್ಕರ ಇಡೀ ರಾಜ್ಯ ಸಾಯಬೇಕಾದ ಪ್ರಶ್ನೆಯನ್ನು ನಾನು ಸರ್ಕಾರದ ಮುಂದೆ ಇಡುತ್ತಿದ್ದೇನೆ. ಇವತ್ತು ಅಂಕಿಅಂಶಗಳನ್ನು ಏನು ಬೇಕಾದರೂ ಹೇಳಿಕೊಳ್ಳಬಹುದು. ಆದರೆ ಒಬ್ಬ ಸಾಮಾನ್ಯ ಮನುಷ್ಯ ಯಾವರೀತಿಯಲ್ಲಿ ನಿಮ್ಮ ಬಗ್ಗೆ ಆಲೋಚನೆ ಮಾಡುತ್ತಾನೆ ಎಂಬುದನ್ನು ದಯವಿಟ್ಟು ತಾವು ಆಲೋಚನೆ ಮಾಡಿ. ನಾನು ಇಷ್ಟೇ ನಿಮ್ಮನ್ನು ಕೇಳುತ್ತಿದ್ದೇನೆ. ಬೇರೆ ಏನೂ ಹೇಳುವುದಿಲ್ಲ. ನಮಗೆ ಅನ್ಯಾಯವಾಗಿದ್ದು ನೀವು ತಮಿಳುನಾಡಿಗೆ ಏನು ನೀರು ಬಿಡುತ್ತಿದ್ದೀರಿ, ಅದನ್ನು ದಯವಿಟ್ಟು ನಿಲ್ಲಿಸಿ. ನಿಲ್ಲಿಸದಿದ್ದರೆ, ನಮ್ಮ ಹೋರಾಟವನ್ನು ಖಂಡಿತವಾಗಿಯೂ ರಾಜ್ಯದ ಜನರ ಪರವಾಗಿ ಮಾಡುತ್ತೇವೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ನಿಮ್ಮನ್ನು ಜನರು ರಸ್ತೆಯಲ್ಲಿ ನಡೆಯುವುದಕ್ಕೆ ಬಿಡುವುದಿಲ್ಲ. ಒಂದು ಕಡೆಯಿಂದ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆಯೇರಿಕೆಯ ತಲೆಬಿಸಿ ಬೇರೆ ಇದೆ. ಮತ್ತೊಂದು ಕಡೆ ವಿದ್ಯುತ್ ದರ ಏರಿಕೆ. ನಾವು ಏನಾದರೂ ಗಲಾಟೆ ಮಾಡಿದರೆ ನೀವು ಹೇಳುತ್ತೀರಿ, ಸದನ ಸಮಿತಿಯನ್ನು ಮಾಡಿದ್ದೇವೆ ಎಂದು. ಮಾನ್ಯ ಮುಖ್ಯಮಂತ್ರಿಗಳು ಮತ್ತೆಮತ್ತೆ ಪತ್ರಿಕಾಘೋಷ್ಠಿಯಲ್ಲಿ ಹೇಳಿದ್ದಾರೆ. ನಾವು ತಪ್ಪು ಮಾಡಿದ್ದೇವೆ, ನಾವು ತಪ್ಪ ಮಾಡಿದ್ದನ್ನು ಜನ ಸ್ವೀಕಾರ ಮಾಡುತ್ತಾರೆ, ನಮ್ಮನ್ನು ಕ್ಷಮಿಸುತ್ತಾರೆ, ಆಶೀರ್ವಾದ ಮಾಡುತ್ತಾರೆ ಎಂದು. ಇದು ಎಲ್ಲಿಯವರೆಗೆ ಸ್ವಾಮಿ? ಈಗಿನಿಂದಲೇ ಡಿಸ್ಸಾಲ್ವ್ ಮಾಡಿ. ಚುನಾವಣೆಯನ್ನು ಎದುರಿಸೋಣ. ಎಷ್ಟು ಜನ ಸದಸ್ಯರು ನಿಮ್ಮ ಕಡೆಯವರು ಬರುತ್ತಾರೆ ಎಂದು ನಾನು ತೋರಿಸಿಕೊಡುತ್ತೇನೆ. ನೀವು ಚುನಾವಣೆಗೆ ಬರುವುದಿಲ್ಲ. ನಿಮ್ಮೊಳಗೇ ಭಿನ್ನಾಭಿಪ್ರಾಯ ಇದೆ. ಚುನಾವಣೆ ನಡೆದರೆ ಎಷ್ಟು ಜನ ನಿಮ್ಮ ಕಡೆ ಇದ್ದಾರೆ ಒಂದು ಗೊತ್ತಾಗುತ್ತದೆ. ಎಷ್ಟು ಜನ ಎಂ.ಎಲ್.ಎ.ಗಳು ಮಂತ್ರಿಗಳು ಹಿಂದಿನಿಂದ ಬಂದು 'ಸಭಾಪತಿಯವರೇ, ಚೆನ್ನಾಗಿ ಮಾತನಾಡಿದಿರಿ, ಬಿಡಬೇಡಿ. ಇದು ದಿಲ್ಲಿಯ ಅವತಾರ' ಎಂದು ಗುಟ್ಟಿನಲ್ಲಿ ಹೇಳುವವರು ಇದ್ದಾರೆ. ಇದೆಲ್ಲಾ ನೀವು ಆಲೋಚನೆ ಮಾಡಿ. ರಾಜ್ಯದ ಜನರ ಹಿತಾಸಕ್ತಿಗಳನ್ನು ಬದಿಗೊತ್ತಿ, ವಿರೋಧಪಕ್ಷದವರನ್ನು ಧಿಕ್ಕರಿಸುವಂಥ ರೀತಿಯಲ್ಲಿ ಏನು ಬೇಕಾದರೂ ಮಾಡುತ್ತೇನೆ ಎಂದು ಯೋಚನೆ ಮಾಡಿದ್ದರೆ ಅದು ಸರ್ವಥಾ ತಪ್ಪು. ಇದನ್ನು ನಾವು ಖಂಡಿತವಾಗಿಯೂ ಜನರ ಮುಂದೆ ಇಡುತ್ತೇವೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಚಾರವನ್ನು ನಾನು ಹೇಳುತ್ತೇನೆ. ನಾನು ಮತ್ತೊಮ್ಮೆ ಈ ಸದನದ ಎಲ್ಲಾ ಸದಸ್ಯರ ಪರವಾಗಿ ಮುಖ್ಯಮಂತ್ರಿಗಳಿಗೆ, ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ದಯವಿಟ್ಟು

ಇಂದೇ ತಮಿಳುನಾಡಿಗೆ ಬಿಡುವಂಥ ನೀರನ್ನು ನಿಲ್ಲಿಸಿಬಿಡಬೇಕು. ಮಾನ್ಯ ದೇವೇಗೌಡರ ಅಧಿಕಾರ ಚ್ಯುತಿಯಾದರೂ ತೊಂದರೆ ಇಲ್ಲ. ಈ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಬೇಕು ಎನ್ನುವಂಥ ಮಾತನ್ನು ನಿಮಗೆ ಸ್ಪಷ್ಟವಾಗಿ ಹೇಳಿ ಇವತ್ತು ನನಗೆ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೇ, ಕಳೆದವರ್ಷ ಇದೇ ಸಂದರ್ಭದಲ್ಲಿ ಕಾವೇರಿ ನೀರಿನ ವಿಷಯವಾಗಿ ಬಹಳ ಗಂಭೀರವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬಂದಿತ್ತು. ಈ ಕಾವೇರಿ ವಿಷಯದ ಬಗ್ಗೆ ಬಹುಶಃ ಚರ್ಚೆಯಾಗದೇ ಇರುವಂಥ ವರ್ಷ ಈ ಸದನದಲ್ಲಿ ಇಲ್ಲವೆಂದು ನನ್ನ ತಿಳುವಳಿಕೆಗೆ ಗೊತ್ತಿದ್ದ ಹಾಗೆ ಅನ್ನಿಸುತ್ತಿದೆ. ಇದು ಯಾವತ್ತಿನಿಂದ ಚರ್ಚೆಯಾಗುತ್ತಿದೆ ಎಂದರೆ 1974ರಿಂದ ನಮ್ಮ 50 ವರ್ಷದ ಒಪ್ಪಂದ ಮದ್ರಾಸ್ ಮತ್ತು ಕರ್ನಾಟಕ ಮಧ್ಯೆ ಇದ್ದಂಥಾದ್ದು ಯಾವಾಗ ಮುಗಿಯಿತು, ಆವತ್ತಿನಿಂದ ಪ್ರತಿವರ್ಷ ಕಾವೇರಿ ಬಗ್ಗೆ ಈ ಸದನದಲ್ಲಿ ಚರ್ಚೆಯಾಗುತ್ತಿದೆ; ಹೊರಗಡೆಯೂ ಚರ್ಚೆಯಾಗಿದೆ. ರಾಜಕೀಯ ಪಕ್ಷಗಳ ಅಜೆಂಡಾದಲ್ಲಿದೆ, ಎಲ್ಲಾ ಕಡೆಯೂ ಚರ್ಚೆಯಾಗುತ್ತಿದೆ. 74ರ ನಂತರ ಈ 96ನೇ ಇಸವಿ. 22 ವರ್ಷವಾಯಿತು. 22 ವರ್ಷಗಳಿಂದ ಈ ವಿಷಯವನ್ನು ನಾವೆಲ್ಲರೂ ಚರ್ಚೆಮಾಡುತ್ತಿದ್ದೇವೆ. ಇಲ್ಲಿ ಇದ್ದವರು ಚರ್ಚೆಯನ್ನು ಮಾಡುತ್ತಾರೆ, ಹೊರಟು ಹೋಗಿರುವವರು ಕೂಡ ಚರ್ಚೆ ಮಾಡಿದ್ದಾರೆ. ಈಗ ಬಹುಶಃ ಮುಂದೆ ಬರುವವರೂ ಕೂಡ ಚರ್ಚೆ ಮಾಡಬಹುದು. ಇದರಲ್ಲಿ ಯಾರೂ ಅಪ್ರಮಾಣಿಕರು ಎಂದು ನನಗೆ ಅನ್ನಿಸುವುದಿಲ್ಲ. ಹಿಂದೆ ಇದ್ದವರು ಮತ್ತು ಈಗ ಇರುವವರಿಗೆ ಕರ್ನಾಟಕ ರಾಜ್ಯದ ಬಗ್ಗೆ ಕಡಿಮೆ ಅಭಿಮಾನ ಇದೆಯೆಂದು ನನಗನ್ನಿಸುವುದಿಲ್ಲ. ಎಲ್ಲರಿಗೂ ಕೂಡ ಒಂದೇ ರೀತಿಯಾದ ಅಭಿಮಾನ ಇದೆ. ಆದರೆ 22 ವರ್ಷಗಳಿಂದ ಇಷ್ಟೆಲ್ಲಾ ಕರ್ನಾಟಕ ರಾಜ್ಯದ ಬಗ್ಗೆ ಅಭಿಮಾನ ಇರತಕ್ಕಂಥವರು, ಕಾವೇರಿ ನೀರಿನ ಬಗ್ಗೆ ಕಾಳಜಿ ಇರತಕ್ಕಂಥ ಜನ, ಮುಖಂಡರು, ಮುತ್ಸದ್ದಿಗಳು ಇವರೆಲ್ಲರೂ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. 22 ವರ್ಷಗಳ ಕಾಲ ಚರ್ಚೆಮಾಡಿ ಇವತ್ತೂ ಕೂಡ ಇದನ್ನು ಮುಕ್ತಾಯ ಮಾಡುವುದಕ್ಕೆ ಸಾಧ್ಯವಾಗಿಲ್ಲವೆಂದರೆ ಇದರ ಹಿಂದೆ ಬಲವಾದ ಕಾರಣ ಇರಲೇಬೇಕು. ಇಲ್ಲದಿದ್ದರೆ ಇದು ಇಷ್ಟುವರ್ಷ ಚರ್ಚೆ ಮಾಡತಕ್ಕಂಥ ವಿಷಯ ಅಲ್ಲ. ಎರಡನೆಯದು ಇದು ಬೀದಿಯಲ್ಲಿ ಬಗೆಹರಿಸತಕ್ಕಂಥ ವಿಷಯವೂ ಅಲ್ಲ. ಮತ್ತೆ ಇದಕ್ಕೆ ಪರಿಹಾರ ಬೇಕು ಎಂದು ಹೇಳಿ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿದವರೂ ಇದ್ದಾರೆ, ಮಾಡತಕ್ಕಂಥವರು ಕೂಡ ಇದ್ದಾರೆ. ಏಕೆ ಇದು ಪರಿಹಾರ ಆಗಿಲ್ಲ? ಇದು ನಮ್ಮ ಮುಂದಿರತಕ್ಕಂಥ ಪ್ರಶ್ನೆ. ಏಕೆಂದರೆ ಕಾವೇರಿ ವಿಷಯದಲ್ಲಿ ಸಾವಿರಾರು ಜನರ ಆಸ್ತಿಪಾಸ್ತಿ ನಷ್ಟವಾಗಿದೆ ಮತ್ತು ನೂರಾರು ಜನರ ಪ್ರಾಣಹರಣವಾಗಿದೆ, ದೊಂಬಿ ನಡೆದಿದೆ, ಗಲಾಟೆ ನಡೆದಿದೆ. ಆದರೆ ಇದರ ಬಗ್ಗೆ ಯಾರೂ ಕೂಡ ಇವತ್ತಿನವರೆಗೂ ಪ್ರಾಮಾಣಿಕವಾಗಿ ಶಾಶ್ವತವಾದ ರೀತಿಯಲ್ಲಿ ಈ ಸಮಸ್ಯೆಗೆ ಪರಿಹಾರ ಹುಡುಕುವ

ಪ್ರಯತ್ನವನ್ನು ಯಾಕೆ ಮಾಡಿಲ್ಲ? ನನ್ನ ಅಭಿಪ್ರಾಯದಲ್ಲಿ ಕಾವೇರಿ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಿಂತ ಮುಖ್ಯವಾಗಿ ಇದರಿಂದ, ಕಾವೇರಿ ನೀರಿನಿಂದ ಬರತಕ್ಕಂಥ ರಾಜಕೀಯ ಲಾಭ ಪಡೆಯಲಿಕ್ಕೆ ಎಲ್ಲರೂ ಅವರವರ ಪಾಲಿನ ಪ್ರಯತ್ನ ಮಾಡಿದ್ದಾರೆ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇದರ ಪರಿಣಾಮವಾಗಿ 22 ವರ್ಷವಾಗಿ ನಮ್ಮ ಒಪ್ಪಂದ ಇವತ್ತು ಮುಗಿದರೂ ಕೂಡ ಇದು ಪರಿಹಾರವಾಗಿಲ್ಲ. ಆದರೆ ಇವತ್ತಿನವರೆಗೂ ನಾವು ಯಾವ ಒಪ್ಪಂದದ ಹಿನ್ನಲೆಯಲ್ಲಿ ಈ ಸಮಸ್ಯೆಯನ್ನು ಮುಂದಿಟ್ಟುಕೊಂಡು ಇದಕ್ಕೆ ಪರಿಹಾರ ಹುಡುಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದರೆ 1924ನೇ ಇಸವಿಯಲ್ಲಿ ಮದ್ರಾಸ್ ಪ್ರಾಂತ್ಯ ಮತ್ತು ಕರ್ನಾಟಕ ಮಹಾರಾಜರ ಕಾಲದಲ್ಲಿ ಬ್ರಿಟಿಷರ ಆಡಳಿತದ ಅಧಿಕ ಶಕ್ತಿ ಇದ್ದಂಥ ಸಂದರ್ಭದಲ್ಲಿ, ನಮ್ಮಮೇಲೆ ಹೇರಿದಂಥ ಒಪ್ಪಂದ, ಅದು ನಾವು ಒಪ್ಪಿಕೊಂಡಂಥ ಒಪ್ಪಂದ ಅಲ್ಲ. ನಮ್ಮ ಮೇಲೆ ಬಲವಂತವಾಗಿ, ಅಧಿಕಾರಯುತವಾಗಿ ಹೂರಿಸಿದಂಥ ಒಪ್ಪಂದ. ಆ ಒಪ್ಪಂದ 74ರಲ್ಲಿ ಪ್ರಾರಂಭವಾಗಿ 94ರಲ್ಲಿ ಮುಗಿದರೂ ಅದರಲ್ಲಿ ನಮಗೆ ಹಲವಾರು ಅನ್ಯಾಯಗಳು ಆಗಿವೆ, ಇದು ಸತ್ಯ. ಇದು ಎಲ್ಲರೂ ಕೂಡ ಒಪ್ಪಬೇಕಾಗಿರತಕ್ಕಂಥದ್ದು. ಈ ಒಪ್ಪಂದದಲ್ಲಿ ಮೂಲಭೂತವಾಗಿ ಹಲವು ದೋಷಗಳಿದ್ದು, ಇದರಿಂದ ನಮಗೆ ಅನ್ಯಾಯವಾಗಿದೆ. ಇದರಲ್ಲಿ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ. ಆ ಒಪ್ಪಂದದಲ್ಲಿ ಅನ್ಯಾಯವಾಗಿದೆ ಎಂದು ಸ್ಪಷ್ಟವಾಗಿ ಗೊತ್ತಿದ್ದರೂ ಕೂಡ, ಈ ಒಪ್ಪಂದ ಇವತ್ತು ಮುಗಿದು 22ವರ್ಷ ಆಗಿದ್ದರೂ ಕೂಡ ಇದರಿಂದ ಏನು ಅನ್ಯಾಯವಾಗಿದೆ, ಇದನ್ನು ಹೇಗೆ ಸರಿಪಡಿಸಬೇಕು ಎಂದು ಅಧಿಕಾರ ನಿರ್ವಹಿಸಿದಂಥವರು ಯಾರೂ ಕೂಡ ಇದಕ್ಕೆ ಒಂದು ಸೂತ್ರವನ್ನು ಕಂಡುಹಿಡಿಯಲಿಲ್ಲ. ಮತ್ತು ಇವತ್ತು ನಾವು ಯಾವ ಆಧಾರದ ಮೇಲೆ ಈ ಸಮಸ್ಯೆಗೆ ಪರಿಹಾರವನ್ನು ಹುಡುಕುತ್ತಿದ್ದೇವೆ? ಈಗ ಮಧ್ಯಂತರ ಆದೇಶ ಇರಬಹುದು ಅಥವಾ ಸುಪ್ರೀಂ ಕೋರ್ಟ್ ಆದೇಶ ಇರಬಹುದು. ಆದೇಶದಲ್ಲಿರತಕ್ಕಂಥ ಟೆಕ್ನಿಕಲ್ ಪಾಯಿಂಟ್ಸ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದು ಟ್ರಿಬ್ಯುನಲ್ ಕೊಟ್ಟಿರತಕ್ಕಂಥ ಮಧ್ಯಂತರ ಆದೇಶ ಇರಬಹುದು ಅಥವಾ ಮುಂದೆ ಕೊಡಬಹುದಾದ ಅಡ್‌ಜ್ಯುಡಿಕೇಷನ್ ಇರಬಹುದು, ಇದೆಲ್ಲದಕ್ಕೂ ಆಧಾರವಾಗಿ ನಾವು ಎಲ್ಲಿಂದ ತೆಗೆದುಕೊಳ್ಳುತ್ತಿದ್ದೇವೆ ಎಂದರೆ, ಹಿಂದೆ ಮಾಡಿದಂಥ 74ರ ಅಗ್ರಿಮೆಂಟ್‌ನಿಂದಲೇ. ಆ ಅಗ್ರಿಮೆಂಟ್‌ನಿಂದಲೇ ನಾವು ಆಧಾರವನ್ನು ಹುಡುಕುತ್ತಿದ್ದೇವೆ. ಹೊಸ ಒಂದು ಆಧಾರ ಹುಡುಕುವುದಕ್ಕೆ, ಪರಿಹಾರ ಹುಡುಕುವುದಕ್ಕೆ, ಹೊಸ ಸೂತ್ರ ಹುಡುಕಬೇಕು ಎನ್ನತಕ್ಕಂಥ ಆಲೋಚನೆ ಇಲ್ಲವೇ ಇಲ್ಲ. ನಾವೆಲ್ಲರೂ ಮತ್ತೆ ಹೇಳುತ್ತೇವೆ, ಈ ಒಪ್ಪಂದದಲ್ಲಿ ನಮಗೆ ಅನ್ಯಾಯವಾಗಿದೆ ಎಂದು. ಅನ್ಯಾಯವಾಗಿದ್ದರೆ ಆ ಒಪ್ಪಂದದ ಆಧಾರ ಇಟ್ಟುಕೊಂಡು ಸಮಸ್ಯೆಗೆ ಪರಿಹಾರ ಏಕೆ ಹುಡುಕಬೇಕು? 50 ವರ್ಷಗಳ ಹಿಂದೆ ನಮ್ಮ ಭೌಗೋಳಿಕ ಪರಿಸ್ಥಿತಿ, ಆವತ್ತಿನ ಎಕಾಲಾಜಿಕಲ್ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬೇರೆ ಇತ್ತು. ಈಗ ಸಂಪೂರ್ಣವಾಗಿ ಬೇರೆಯಾಗಿದೆ. ಈ ಹಿನ್ನಲೆಯಲ್ಲಿ ಹೊಸ ಸೂತ್ರವನ್ನು ಹುಡುಕಬೇಕಾಗುತ್ತದೆ. ಏಕೆಂದರೆ ಅಂತರರಾಜ್ಯದ ನದಿ ನೀರಿನ ಸಮಸ್ಯೆಯಾಗಬಹುದು ಅಥವಾ ಗಡಿ ಸಮಸ್ಯೆ ಆಗಬಹುದು. ಈ ಎರಡು ಸಮಸ್ಯೆಗಳನ್ನು ಬೀದಿಯಲ್ಲಿ ಪರಿಹಾರ

ಮಾಡುವುದಕ್ಕೆ ಆಗುವುದಿಲ್ಲ. ಕೋರ್ಟುಗಳ ಮುಖಾಂತರ, ಕಾನೂನು ಮುಖಾಂತರ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ. ಇದು ಏನಾದರೂ ಸೌಹಾರ್ದಯುತವಾದಂಥ ಮಾತುಕತೆಗಳ ಮುಖಾಂತರ ಪರಿಹಾರ ಆಗಬೇಕೆ ಹೊರತು ಬೀದಿಯಲ್ಲಿ ಇದಕ್ಕೆ ಪರಿಹಾರ ಹುಡುಕುವುದಕ್ಕೆ ಸಾಧ್ಯವಿಲ್ಲ. ಇದು ಕೋರ್ಟುಗಳ ಮುಖಾಂತರ ಪರಿಹಾರವಾಗುವುದಕ್ಕೆ ಸಾಧ್ಯವಿಲ್ಲ.

ಕಾನೂನಿನ ಚೌಕಟ್ಟಿನಲ್ಲಿ ಇದನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ಸಂವಿಧಾನದ ಚೌಕಟ್ಟಿನಲ್ಲಿ ಇದನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ಕಾರಣವೇನೆಂದರೆ, ಇದಕ್ಕೆ ಹಲವಾರು ಕಾರಣಗಳಿವೆ. ಇವತ್ತು ಇಡೀ ಜಗತ್ತಿನಲ್ಲೇ ಎಲ್ಲೂ ಕೂಡ ಜಲನೀತಿ, ಇಡೀ ಜಗತ್ತಿಗೆ ಅನ್ವಯಿಸತಕ್ಕ ಜಲನೀತಿಯೂ ರೂಪಿತವಾಗಿಲ್ಲ. ನಮ್ಮ ದೇಶದ ಮಟ್ಟಿಗೆ ಹೇಳುವುದಾದರೆ ನಮ್ಮ ದೇಶಕ್ಕೆ ಒಂದು ರಾಷ್ಟ್ರೀಯ ಜಲನೀತಿ ಇಲ್ಲ. ರಾಷ್ಟ್ರೀಯ ಜಲನೀತಿ ಇದ್ದರೂ ಕೂಡ ಒಂದೇ ಸಮಾನಾಂತರವಾದಂಥ ಏಕಾಭಿಪ್ರಾಯ ಬರುತ್ತದೆ ಎನ್ನುವ ಗ್ಯಾರಂಟಿ ಕೂಡ ಏನೂ ಇಲ್ಲ. ಇಷ್ಟೆಲ್ಲಾ ವಿಷಯಗಳು ಗೊತ್ತಿರತಕ್ಕಂಥ ಹಿರಿಯ ಮುಖಂಡರು ಇಲ್ಲಿ ಕುಳಿತಿದ್ದಾರೆ. ಹಿಂದೆ ಕೂಡ ಇದ್ದರು. ಇಷ್ಟೆಲ್ಲಾ ಇದ್ದರೂ ಕೂಡ, ಏಕೆ ಈ ಸಮಸ್ಯೆಯನ್ನು ಪ್ರಾಮಾಣಿಕವಾಗಿ ಪರಿಹಾರ ಮಾಡಲಿಕ್ಕೆ ಸಾಧ್ಯವಾಗಿಲ್ಲ? 1974ನೇ ಇಸವಿಯಿಂದ ಇವತ್ತಿನವರೆಗೂ ಪ್ರತಿ ವರ್ಷ ಈ ವಿಷಯವನ್ನು ನಾವು ಸೃಷ್ಟಿ ಮಾಡತಕ್ಕಂತಾದ್ದು, ಜನರನ್ನು ಬೀದಿಗೆ ಇಳಿಸತಕ್ಕಂತಾದ್ದು, ಹತ್ತಿಕೊಂಡಂಥ ಬೆಂಕಿಯನ್ನು ಆರಿಸುವುದಕ್ಕೆ ನಾವು ಚರ್ಚೆ ಮಾಡತಕ್ಕಂತಾದ್ದು, ಯಾವುದೋ ಒಂದು ತಾತ್ಕಾಲಿಕ ಪರಿಹಾರಕ್ಕೆ ನಾವು ಜೋತುಬಿದ್ದು, ಆ ಸಮಸ್ಯೆಯನ್ನು ಸಂಪೂರ್ಣವಾಗಿ ನೆನೆಗುದಿಗೆ ಹಾಕಿದ್ದೇವೆ. ನಾನು ಹೆಚ್ಚಿನ ಚರ್ಚೆಗೆ ಹೋಗುವುದಿಲ್ಲ. ಇದಾದ ನಂತರ, ಹೋದವರ್ಷವೂ ಇದೇ ಸಮಸ್ಯೆ ಗಂಭೀರವಾಗಿ ಬಂದಂಥ ಪರಿಸ್ಥಿತಿ ಇತ್ತು. ಯಾವ ಹಿನ್ನೆಲೆಯಲ್ಲಿ ಎಂದರೆ, 11 ಟಿಎಂಸಿ ನೀರನ್ನು ಕೊಡಬೇಕೆಂದು ಟ್ರಿಬ್ಯುನಲ್ ಹೇಳಿದಾಗ, 11 ಟಿಎಂಸಿ ನೀರನ್ನು ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಸುಪ್ರೀಂಕೋರ್ಟಿಗೆ ಹೋದಂಥ ಸಂದರ್ಭದಲ್ಲಿ, ಸುಪ್ರೀಂ ಕೋರ್ಟ್ ಏನು ಹೇಳಿತು. ಇದು ಬಹಳ ಮುಖ್ಯವಾದಂಥ ಅಂಶ. ಸುಪ್ರೀಂ ಕೋರ್ಟ್ ಏನು ಹೇಳಿತು, ಇದು ಕಾನೂನು ಚೌಕಟ್ಟಿನಲ್ಲಿ ಪರಿಹಾರ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪ್ರಧಾನಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ, ಸರ್ವಸಮ್ಮತವಾದಂಥ ಸೂತ್ರವನ್ನು ಕಂಡುಹಿಡಿಯಬೇಕೆಂಬ ಸುಪ್ರೀಂ ಕೋರ್ಟಿನ ಆದೇಶದ ಹಿನ್ನೆಲೆಯಲ್ಲಿ ಕಳೆದ ಡಿಸೆಂಬರ್ 29ನೇ ತಾರೀಖು ದಿಲ್ಲಿಯಲ್ಲಿ ಅಂದಿನ ಪ್ರಧಾನ ಮಂತ್ರಿಗಳು, ನಮ್ಮ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳನ್ನು, ಕೇರಳದ ಎಲ್ಲಾ ವಿರೋಧ ಪಕ್ಷದ ಮುಖಂಡರುಗಳನ್ನು ಮತ್ತು ಮುಖ್ಯಮಂತ್ರಿಗಳನ್ನೆಲ್ಲಾ ಕರೆಸಿ, ಸಭೆಯಲ್ಲಿ ಚರ್ಚೆ ಮಾಡಿದರು. ಎಲ್ಲಾ ರಾಜ್ಯಗಳವರು ಅವರವರ ಅಭಿಪ್ರಾಯವನ್ನು ಕೊಟ್ಟನಂತರ, ಪ್ರಧಾನ ಮಂತ್ರಿಗಳು 6 ಟಿಎಂಸಿ ನೀರನ್ನು ಕೊಡಬೇಕೆಂದು ಅವತ್ತು ತೀರ್ಪು ಕೊಟ್ಟರು. ಆ ತೀರ್ಪು ಕೊಟ್ಟಮೇಲೆ, ಮತ್ತೆ ಒಂದು ವರ್ಷವಾಯಿತು. ಆ ವಿಷಯವನ್ನು ನಾವೆಲ್ಲಾ

ಮರೆತೇ ಹೋಗಿದ್ದೇವೆ. 6 ಟಿಎಂಸಿ ನೀರನ್ನು ಬಿಟ್ಟು ಆಯಿತು, ಎಲ್ಲಾ ಪರಿಸ್ಥಿತಿ ಸುಧಾರಣೆಯಾಯಿತೆಂದು ಎಲ್ಲರಿಗೂ ಗೊತ್ತಾಯಿತೋ ಏನೋ ನನಗೆ ಗೊತ್ತಿಲ್ಲ. 6ಟಿಎಂಸಿ ನೀರನ್ನು ಬಿಟ್ಟು ನಾವೆಲ್ಲರೂ ತೆಪ್ಪಗೆ ಕುಳಿತೆವು. ಮತ್ತೆ ಜೂನ್, ಜುಲೈ ಬಂದರೆ ಇದೇ ಕಾವೇರಿ ಸಮಸ್ಯೆ. ಜೂನ್, ಜುಲೈ ಬಂದತಕ್ಷಣ ಎಲ್ಲರೂ ಇದರ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ಪ್ರಕೃತಿದತ್ತವಾಗಿರತಕ್ಕಂಥ ಕೆಲವು ಅಂಶಗಳ ಮೇಲೆ, ನಾವು ಯಾರೂ ಕೂಡ ನಿಯಂತ್ರಣ ಹೊಂದುವುದಕ್ಕೆ ಸಾಧ್ಯವಿಲ್ಲ. ಮಳೆ ಜಾಸ್ತಿ ಬಂದಿದ್ದರೆ, ಇಲ್ಲಿ ಚರ್ಚೆ ಮಾಡತಕ್ಕಂತ ಅವಶ್ಯಕತೆಯೇ ಇರಲಿಲ್ಲವೆಂದು ನನಗನಿಸುತ್ತದೆ. ಈ ಪ್ರಕೃತಿ ಯಾರ ಹಿಡಿತದಲ್ಲೂ ಇಲ್ಲ. ಅಂತಹ ಸಂದರ್ಭದಲ್ಲಿ, ನಾವು ಇವತ್ತು, ಈ ಸಮಸ್ಯೆ ಬಂದಂಥ ಸಂದರ್ಭದಲ್ಲಿ, ನಾವೆಲ್ಲರೂ ಕೂಡ, ನನಗನ್ನಿಸುತ್ತದೆ. ಪ್ರಾಮಾಣಿಕವಾಗಿ, ಇಲ್ಲಿ ಎಲ್ಲರಿಗೂ ಕೂಡ ಕರ್ನಾಟಕದ ಜನತೆಯ ಬಗ್ಗೆ ಅಭಿಮಾನ ಇದೆ. ಅದರಲ್ಲಿ ಕಡಿಮೆ ಒಬ್ಬರಿಗಿದೆ, ಜಾಸ್ತಿ ಒಬ್ಬರಿಗಿದೆ ಎಂದು ಹೇಳತಕ್ಕಂಥ ಪ್ರಶ್ನೆಯಲ್ಲ. ಎಲ್ಲರೂ ಕರ್ನಾಟಕದ ಹಿತರಕ್ಷಣೆ ಮಾಡಬೇಕೆಂಬುದರಲ್ಲಿ ಹಿಂದೆ ಬೀಳುವುದಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಒಬ್ಬರ ಮೇಲೆ ಒಬ್ಬರು ಆರೋಪ ಮಾಡಿಕೊಳ್ಳತಕ್ಕಂಥ ಪ್ರಶ್ನೆಯೇ ಇಲ್ಲ. ಎಲ್ಲರಿಗೂ ಪ್ರಾಮಾಣಿಕವಾದಂಥ ಕಾಳಜಿ ಇದೆ. ಕರ್ನಾಟಕದಲ್ಲಿರತಕ್ಕ ಪರಿಸ್ಥಿತಿಯನ್ನು ಪರಿಹಾರ ಮಾಡಲಿಕ್ಕೆ ನಮ್ಮಲ್ಲಿರತಕ್ಕ ಭಿನ್ನಾಭಿಪ್ರಾಯ ಅಷ್ಟೆ. ಈ ಸಮಸ್ಯೆಯ ಪರಿಹಾರಕ್ಕೆ ಇರತಕ್ಕಂಥ ಭಿನ್ನಾಭಿಪ್ರಾಯ ಈ ಸಮಸ್ಯೆಯ ಪರಿಹಾರಕ್ಕೆ, ಇವತ್ತು ನಮ್ಮ ಮುಂದೆ ಇರತಕ್ಕ ದಾರಿ ಏನು? ನೀರು ಬಿಡುವುದಿಲ್ಲ, ಬಿಡಬಾರದು ಎಂಬ ವಾದ ಒಂದು ಕಡೆ ಇದೆ. ಬಿಡಬೇಕು ಎಂಬ ವಾದ ಒಂದು ಕಡೆ ಇದೆ ಬಿಟ್ಟೇಬಿಟ್ಟಿದ್ದೇವೆಂದು ಅವರು ಹೇಳುತ್ತಿದ್ದಾರೆ. 1974ನೇ ಇಸವಿಯಿಂದ ಇವತ್ತಿನವರೆಗೂ, ಜೂನ್ ಮತ್ತು ಜುಲೈ ತಿಂಗಳಲ್ಲಿ ಯಾವಸರ್ಕಾರ ನೀರು ಬಿಟ್ಟಿಲ್ಲ ಎಂದು ಹೇಳಿಬಿಡಲಿ. ಯಾವುದೇ ಸರ್ಕಾರ, ಒಂದೇ ಒಂದು ಟಿಎಂಸಿ ನೀರು ಬಿಟ್ಟಿಲ್ಲ ಎಂದು ಹೇಳಲಿ. ಎಲ್ಲಾ ಸರ್ಕಾರಗಳೂ ನೀರು ಬಿಟ್ಟಿವೆ. ಮಳೆ ಇಲ್ಲದಿದ್ದ ಸಂದರ್ಭದಲ್ಲೂ ಕೂಡ ಕಡಿಮೆ ನೀರು ಬಿಟ್ಟಿರಬಹುದು. ಜಾಸ್ತಿ ನೀರು ಬಿಟ್ಟಿಲ್ಲದೇ ಇರಬಹುದು ಅಷ್ಟೆ. 22 ವರ್ಷದಿಂದ ಪ್ರತಿ ವರ್ಷದ ಯಾವ ಸರ್ಕಾರ ನೀರು ಬಿಟ್ಟಿಲ್ಲ ಹೇಳಿ. ಸಾಮಾನ್ಯವಾಗಿ ನಾವೆಲ್ಲರೂ ಮಾತನಾಡಬೇಕಾಗುತ್ತದೆ, ಒಪ್ಪಬೇಕಾಗುತ್ತದೆ. ಎಲ್ಲಾ ಸರ್ಕಾರಗಳೂ ಬಿಟ್ಟಿವೆ. ಆದರೆ...

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಅವಕಾಶ ಕೊಟ್ಟರೆ, ನಾವೂ ಮಾತನಾಡುತ್ತೇವೆ, ನೀವು ಒಬ್ಬರಾದರೂ ಸರ್ಕಾರಕ್ಕೆ ಸಪೋರ್ಟ್ ಮಾಡುತ್ತೀರಲ್ಲಾ....

ಶ್ರೀ ಜಿ.ಟಿ.ಶ್ರೀರಾಮರೆಡ್ಡಿ:- ದಯವಿಟ್ಟು, ನಿಮ್ಮ ಸರದಿ ಬಂದಾಗ ಮಾತನಾಡಿ. ಇದು ಯಾವುದೇ ರೀತಿಯ ಶೋಭೆ ತರತಕ್ಕಂತಾದ್ದಲ್ಲ. ಒಬ್ಬ ಸದಸ್ಯರು ಮಾತನಾಡುವಾಗ ಅವರ ಹಿಂದಿನಿಂದ ಮಾತನಾಡುವುದು ಸರಿಯಲ್ಲ. ನಾನು ಕುಳಿತುಕೊಳ್ಳುತ್ತೇನೆ, ಬೇಕಾದರೆ ತಾವು ಮಾತನಾಡಿ. ನಿಮ್ಮ ಅಭಿಪ್ರಾಯದಲ್ಲಿ, ಸರ್ಕಾರಕ್ಕೆ ಬೆಂಬಲ, ಅದು ನಿಮಗೆ ವಿರೋಧ ಎಂದರೆ ಅದಕ್ಕೆ ನಾನು ಜವಾಬ್ದಾರನಲ್ಲ. ನಿಮ್ಮ

ಪೂರ್ವಾಗ್ರಹಪೀಡಿತ ಅಭಿಪ್ರಾಯ ಅದು. ಮಾಡುವುದಕ್ಕಾಗುವುದಿಲ್ಲ. ನನ್ನ ದೃಷ್ಟಿಯಲ್ಲಿ ನಾನು ಹೇಳುತ್ತಿದ್ದೇನೆಯೇ ಹೊರತು, ಶಂಕರಲಿಂಗೇಗೌಡರ ದೃಷ್ಟಿಯಲ್ಲಿ ಹೇಳುತ್ತಾ ಇಲ್ಲ. ದಯವಿಟ್ಟು, ಅದು ಚೆನ್ನಾಗಿ ತಿಳಿದಿರಬೇಕು.

ಶ್ರೀ ಜಿ.ಬಿ.ಶಿವಕುಮಾರ್:- ದಯಮಾಡಿ, ಮಾನ್ಯ ಸದಸ್ಯರು ತಮ್ಮ ಅಪ್ಪಣೆ ಪಡೆದು ಮಾತನಾಡಬೇಕು. ಮಧ್ಯೆ, ಮಧ್ಯೆ ಈ ರೀತಿ ಎದ್ದು ಮಾತನಾಡಿದರೆ, ಇದೊಂದು ರೀತಿ ಕೂಲಿ ಮಠ ಆದಹಾಗೇ ಆಗುತ್ತಿದೆ. ಈ ಸದನಕ್ಕೆ ಗೌರವ ಇಲ್ಲವೇ? ದಯಮಾಡಿ, ಅಧ್ಯಕ್ಷರ ಅಪ್ಪಣೆ ಪಡೆದು ಮಾತನಾಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಕರ್ನಾಟಕದ ಬಗ್ಗೆ ಕಡಿಮೆ ಕಾಳಜಿ ಇರತಕ್ಕಂಥವರು ಇಲ್ಲಿ ಯಾರೂ ಇಲ್ಲ. ಅದು ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವೇ. ಒಬ್ಬರಿಗೆ ಜಾಸ್ತಿ, ಇನ್ನೊಬ್ಬರಿಗೆ ಕಡಿಮೆ ಇರುವುದಕ್ಕೆ ಸಾಧ್ಯವಿಲ್ಲ. ಎಲ್ಲರಿಗೂ ಒಂದೇ ರೀತಿಯ ಕಾಳಜಿ ಇದೆ. ಅದರ ಬಗ್ಗೆ ಯಾರೂ ಅನುಮಾನಪಡತಕ್ಕ ಪ್ರಶ್ನೆ ಇಲ್ಲ. ಎಲ್ಲಾ ಸರ್ಕಾರಗಳೂ, ಅವರವರದೇ ಆದಂಥ ರೀತಿಯಲ್ಲಿ, ಅವರವರದೇ ಆದಂಥ, ಮುಖದ ರೂಪದಲ್ಲಿ ಪ್ರತಿ ಸಲವೂ ನೀರು ಬಿಟ್ಟಿದ್ದಾರೆ. ಆದರೆ, ಇವತ್ತು ನೀರು ಬಿಡಬಾರದು ಎನ್ನತಕ್ಕ ಪ್ರಶ್ನೆ ಬಂದರೆ, ನೀರು ಬಿಡದೇ ಸಮಸ್ಯೆ ಪರಿಹಾರಕ್ಕೆ, ಏನಾದರೂ ಮಾರ್ಗವನ್ನು ನಾವು ಸೂಚಿಸಬೇಕಾಗುತ್ತದೆ. ತಮಿಳುನಾಡಿಗೆ ಒಂದೇ ಒಂದು ತೊಟ್ಟು ನೀರು ಬಿಡದೇ ನಾವು ಸಮಸ್ಯೆಗೆ ಪರಿಹಾರವನ್ನು ತೋರಿಸಬೇಕಾದರೆ, ತೋರಿಸಬೇಕಾಗುತ್ತದೆ. ಅದಕ್ಕೆ ಏನಾದರೂ, ಸರಿಯಾದಂಥ, ಸಮಗ್ರವಾದ ಸೂತ್ರವನ್ನು ಮಾಡಬೇಕು. ಆದರೆ, ಕಾವೇರಿ ನೀರಿನ ಹಂಚಿಕೆ, ಇದು 3-4 ರಾಜ್ಯಗಳಿಗೆ ಸಂಬಂಧಪಟ್ಟಂಥ ವಿಷಯ. ಒಂದೇ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ ಅಲ್ಲ. ಮತ್ತೆ ಕೃಷಿ ತಜ್ಞರು, ನೀರಾವರಿ ತಜ್ಞರು, ಈ ಎಲ್ಲರ ಅಭಿಪ್ರಾಯಗಳನ್ನು ಕೂಡ ನಾವು ಗಮನಿಸಬೇಕಾಗುತ್ತದೆ. ಗಮನಿಸಿ, ಈ ಸಮಸ್ಯೆಗೆ ಶಾಶ್ವತವಾದಂಥ ಪರಿಹಾರವನ್ನು ಹುಡುಕುವುದಕ್ಕೆ ನಾವೆಲ್ಲರೂ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುವ ಬದಲು, ಕಾವೇರಿ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವ ಬದಲು ಕಾವೇರಿ ವಿಷಯದಲ್ಲಿ ರಾಜಕೀಯ ಪಾತ್ರವೇ ಬಹಳ ಹೆಚ್ಚು. ಇದು ಕಾವೇರಿ ನೀರಿನ ಸಮಸ್ಯೆ ಅಲ್ಲ. ಕಾವೇರಿ ಹೆಸರಿನಲ್ಲಿ, ರಾಜಕೀಯ ಸಮಸ್ಯೆಯಾಗಿ ಉದ್ಭವವಾಗುತ್ತಿದೆ. ಇಂತಹ ಸೂಕ್ಷ್ಮವಾದ ವಿಷಯದಲ್ಲಿ ರಾಜಕೀಯ ಬೆರೆತರೆ, ಸಮಸ್ಯೆ ಪರಿಹಾರವಾಗುವುದಕ್ಕೆ ಖಂಡಿತ ಸಾಧ್ಯವಿಲ್ಲ. ಇನ್ನೂ 22 ವರ್ಷವಾದರೂ ಕಾವೇರಿ ಸಮಸ್ಯೆ ಪರಿಹಾರ ಆಗಲಿಕ್ಕೆ ಸಾಧ್ಯವಿಲ್ಲ. ನಾನು ತಮ್ಮ ಮುಖಾಂತರ ಕಳಕಳಿಯಿಂದ ವಿನಂತಿಸುವುದು ಇಷ್ಟೆ. ನಾವೆಲ್ಲರೂ ಪ್ರಾಮಾಣಿಕವಾಗಿ ಒಟ್ಟಿಗೆ ಸೇರಿ, ಸಮಸ್ಯೆಗೆ ಮೂಲಭೂತವಾದಂಥ ಶಾಶ್ವತ ಪರಿಹಾರವನ್ನು ಹುಡುಕಬೇಕು. ಆ ಶಾಶ್ವತವಾದಂಥ ಪರಿಹಾರ ಹುಡುಕತಕ್ಕ ವಾತಾವರಣ ನನ್ನ ದೃಷ್ಟಿಯಲ್ಲಿ, ಬದಲಾದಂಥ ಪರಿಸ್ಥಿತಿಯಲ್ಲಿ ಇವತ್ತು ಸಾಧ್ಯ ಇದೆ. ಏಕೆಂದರೆ, ಒಂದು ಕಡೆ ಇವತ್ತು ಕೇಂದ್ರದಲ್ಲಿ ಅಧಿಕಾರ ಸೂತ್ರವನ್ನು ಹಿಡಿದಿರತಕ್ಕಂಥ ನಮ್ಮ ಕರ್ನಾಟಕದಿಂದ ಹೋಗಿರತಕ್ಕಂಥ ಪ್ರಧಾನ

ಮಂತ್ರಿಗಳು ಕಾವೇರಿ ಸಮಸ್ಯೆ ಬಗ್ಗೆ ಆಳವಾದಂಥ ಪರಿಚಯ ಇರತಕ್ಕಂಥವರು. ಆದ್ದರಿಂದ, ರಾಜಕೀಯ ಪರಿಸ್ಥಿತಿ ಬದಲಾವಣೆಯಾಗಿದೆ. 3-4 ರಾಜ್ಯಗಳವರೂ ಒಟ್ಟಾಗಿ ಕುಳಿತು, ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ, ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿರುವುದು ನಮ್ಮೆಲ್ಲರ ಮುಂದೆ ಇರತಕ್ಕಂಥ ಜವಾಬ್ದಾರಿ. ಈ ವಾತಾವರಣವನ್ನು ನಾವು ಕೆಡಿಸಿ ಬಿಟ್ಟರೆ ಅಥವಾ ವಾತಾವರಣವನ್ನು ಬಿಗಿಗೊಳಿಸಿದರೆ, ಸಮಸ್ಯೆಗೆ ಪರಿಹಾರ ಖಂಡಿತ ಆಗುವುದಿಲ್ಲ, ಇದು ಉಲ್ಬಣಗೊಳ್ಳುತ್ತಾ ಹೋಗುತ್ತದೆ. ಈ ಸಮಸ್ಯೆಗೆ ಶಾಶ್ವತವಾದ ಪರಿಹಾರ ಮಾಡಲಿಕ್ಕೆ ಆರೋಗ್ಯಕರವಾದ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿರತಕ್ಕಂತಾದ್ದು ನಮ್ಮ ಎಲ್ಲರ ಜವಾಬ್ದಾರಿ ಕೂಡ ಇದೆ. ನಮ್ಮೆಲ್ಲರ ಆ ಜವಾಬ್ದಾರಿಯನ್ನು ಪೂರೈಸಬೇಕಾಗುತ್ತದೆ. ಜವಾಬ್ದಾರಿಯನ್ನು ಪೂರೈಸತಕ್ಕ ಸಂದರ್ಭದಲ್ಲಿ ಕೆಲವರಿಗೆ ಸ್ವಲ್ಪ ಕಷ್ಟವಾಗಬಹುದು, ಕೆಲವರಿಗೆ ಸ್ವಲ್ಪ ತೊಂದರೆಯಾಗಬಹುದು, ಏಕೆಂದರೆ ಅದು ತಾತ್ಕಾಲಿಕ. ತೊಂದರೆ ಬರುವುದು ತಾತ್ಕಾಲಿಕ ಎಂಬುದನ್ನು ಗಮನದಲ್ಲಿಟ್ಟು, ಇದಕ್ಕೆ ಶಾಶ್ವತವಾದಂಥ ಪರಿಹಾರವನ್ನು ಹುಡುಕಬೇಕಾಗುತ್ತದೆ. ಆದರೆ, ಇಲ್ಲಿ ಪರಿಸ್ಥಿತಿ ಬಂದಿರುವುದು ಏನು? ಕಾವೇರಿ ವಿಷಯದಲ್ಲಿ ಹಿಂದೆ ದೇವೇಗೌಡರು ವಿರೋಧಪಕ್ಷದಲ್ಲಿದ್ದಾಗ ಮಾತನಾಡಿರುವ ಭಾಷಣಗಳನು ಓದಿಬಿಟ್ಟರೆ, ಇಲ್ಲಿ ಕ್ರಾಂತಿಯಾಗಿ, ರಕ್ತ ಹರಿಯಬೇಕೆಂಬ ರೀತಿಯಲ್ಲಿ ಮಾತನಾಡಿದ್ದಾರೆ, ಅದೇರೀತಿಯಲ್ಲಿ ಪ್ರತಿಯೊಬ್ಬರೂ ಅವರದೇ ಆದಂಥ ರೀತಿಯಲ್ಲಿ ಅದಕ್ಕೆ ಕಾಣಿಕೆಯನ್ನು ಕೊಟ್ಟಿದ್ದಾರೆ. ಆ ಪರಿಸ್ಥಿತಿಯನ್ನು ಉದ್ರಿಕ್ತಗೊಳಿಸುವುದರಲ್ಲಿ, ಆ ಪರಿಸ್ಥಿತಿಯನ್ನು ಕೆಡಿಸುವುದರಲ್ಲಿ ಅವರವರ ಪರಿಸ್ಥಿತಿಗಳು ಬದಲಾವಣೆಯಾದಂಥ ಸಂದರ್ಭದಲ್ಲಿ ಅವರದ್ದೇ ಆದಂಥ ಕಾಣಿಕೆಯನ್ನು ಕೊಟ್ಟು, ತಾವೇ ಸೃಷ್ಟಿ ಮಾಡಿಕೊಂಡಿರತಕ್ಕಂಥ ಆ ವಿಷವಲಯದಿಂದ ಆಚೆ ಬರುವುದಕ್ಕೆ ಸಾಧ್ಯವಾಗದಿರತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ದೇವೇಗೌಡರಿಂದ ಪ್ರಾರಂಭವಾಗಿ, ಬೇರೆ ಬೇರೆಯವರೂ ಕೂಡ ಆ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಆ ಪರಿಸ್ಥಿತಿಯನ್ನು ನಾವು ವಾಸ್ತವಿಕ ದೃಷ್ಟಿಯಿಂದ ಆಲೋಚನೆ ಮಾಡಿ; ಇಂತಹ ಪರಿಸ್ಥಿತಿ ನಿರ್ಮಾಣವಾದರೆ, ಸಮಸ್ಯೆ ಪರಿಹಾರವಾಗುವುದಿಲ್ಲ. ಉದ್ವೇಗದಿಂದ, ಭಾವೋದ್ವೇಗದಿಂದ ಅಥವಾ ಯಾವುದೇ ರೀತಿಯ ಸಂಕುಚಿತ ದೃಷ್ಟಿಯಿಂದ ಅಂತರ ರಾಜ್ಯಗಳ ಸಮಸ್ಯೆ ಬಗ್ಗೆ ನಾವೇನಾದರೂ ದೃಷ್ಟಿ ಇಟ್ಟರೆ, ಅದು ಗಂಭೀರವಾದಂಥ ವಿಕೋಪದ ದೃಷ್ಟಿಗೆ ಹೋಗುತ್ತದೆ ಎಂಬುದನ್ನು ನಾವೆಲ್ಲರೂ ಕೂಡ ಗಮನಿಸಬೇಕಾಗುತ್ತದೆ.

ಅದರ ಅನುಭವಗಳನ್ನು ಕರ್ನಾಟಕ ರಾಜ್ಯದಲ್ಲಿ ನಾವು ಅನುಭವಿಸಿದ್ದೇವೆ. ಲಕ್ಷಾಂತರ ಜನರ ಆಸ್ತಿ ನಷ್ಟವಾಗಿದೆ. ಪ್ರಾಣಗಳ ನಷ್ಟವಾಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಇವತ್ತು ನಮ್ಮ ಮುಂದೆ ಚರ್ಚೆ ಆಗುತ್ತಾ ಇರತಕ್ಕಂಥ ವಿಷಯ ಏನು? 8ನೇ ತಾರೀಖು ವಿರೋಧಪಕ್ಷಗಳ ಸಭೆಯನ್ನು ಕರೆದರು. ಇಲ್ಲಿ ಸರ್ಕಾರದ ಕಡೆಯಿಂದ ಆಗಿರತಕ್ಕಂಥ ಒಂದು ದೊಡ್ಡ ಲೋಪ ಏನು? 8ನೇ ತಾರೀಖು ವಿರೋಧಪಕ್ಷಗಳ ಸಭೆಯನ್ನು ಕರೆದು

ಆ ವಿರೋಧಪಕ್ಷಗಳ ಸಭೆಯಲ್ಲಿ ನೀರು ಬಿಡತಕ್ಕಂಥ ಯಾವುದೇ ಅಂಶಗಳನ್ನು ಪ್ರಸ್ತಾಪ ಮಾಡದೇ ಒಮ್ಮತದಿಂದ 9ನೇ ತಾರೀಖು ಬೆಳಿಗ್ಗೆ ನೀರು ಬಿಡತಕ್ಕಂಥ ತೀರ್ಮಾನವನ್ನು ಜನತಾ ದಳದ ಶಾಸಕಾಂಗ ಪಕ್ಷದ ಸಭೆಯಲ್ಲಿ ತೆಗೆದುಕೊಂಡಿರತಕ್ಕಂಥಾದ್ದು ಸರ್ಕಾರದವರು ಈ ಸದನಕ್ಕೆ ತೋರಿಸಿರತಕ್ಕಂಥ ಅಗೌರವ ಎನ್ನತಕ್ಕಂಥಾದ್ದನ್ನು ಅವರು ಒಪ್ಪಲೇಬೇಕು. ಏಕೆಂದರೆ ನೀವು 8ನೇ ತಾರೀಖು ಮೀಟಿಂಗ್ ಕರೆಯುವಂತಹ ಅವಶ್ಯಕತೆ ಇರಲಿಲ್ಲ. ತಮಿಳುನಾಡಿಗೆ ನೀರನ್ನು ಬಿಡತಕ್ಕಂಥ ಪರಿಸ್ಥಿತಿ ನಿಮಗೆ ಏನಾದರೂ ಉದ್ಭವವಾಗಿ ನೀವು 8ನೇ ತಾರೀಖು ನಮ್ಮನ್ನು ಯಾರನ್ನೂ ಆ ಸಭೆಗೆ ಕರೆಯುವಂತಹ ಅವಶ್ಯಕತೆ ಇರಲಿಲ್ಲ. 8ನೇ ತಾರೀಖು ನಮ್ಮನ್ನು ಕರೆದವರು 9ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಕಬಿನಿಯಿಂದ ನೀರು ಬಿಡಲಿಕ್ಕೆ ಪ್ರಾರಂಭ ಮಾಡಿದಂತಹವರು ಕನಿಷ್ಠಪಕ್ಷ 8ನೇ ತಾರೀಖು ರಾತ್ರಿ ನಮ್ಮನ್ನೆಲ್ಲಾ ಒಂದು ಸಭೆಗೆ ಕರೆಯಬೇಕಾಗಿತ್ತು, ಅಥವಾ 9ನೇ ತಾರೀಖು ಬೆಳಿಗ್ಗೆ ಆದರೂ ನಮ್ಮನ್ನೆಲ್ಲಾ ಒಂದು ಸಭೆಗೆ ಕರೆಯಬೇಕಾಗಿತ್ತು. 9ನೇ ತಾರೀಖು ಬೆಳಿಗ್ಗೆ ಸಹ ಸಭೆಯನ್ನು ಕರೆದು ಪರಿಸ್ಥಿತಿ ನೋಡಿ ಹೀಗಿದೆ ಎಂದು ತಿಳಿಸಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ವಿರೋಧಪಕ್ಷಗಳ ಸಭೆಯಲ್ಲಿ, ಕೆಲವು ಮಾತುಗಳನ್ನು ನಾವು ಗುಟ್ಟಾಗಿ ಇಡಬೇಕಾಗುತ್ತದೆ. ಅದನ್ನು ಬಹಿರಂಗ ಪಡಿಸುವುದಕ್ಕೆ ಆಗುವುದಿಲ್ಲ ಎಂದು ರಾಜ್ಯದ ಹಿತದೃಷ್ಟಿಯಿಂದ ಆ ರೀತಿ ಮಾಡುವಂತಹ ಅವಶ್ಯಕತೆ ಇದ್ದಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಅಲ್ಲಿ ಗುಟ್ಟು ಎಂದು ಹೇಳಿದವರು ಜನತಾದಳದ ಶಾಸಕಾಂಗ ಪಕ್ಷದ ಸಭೆಯಲ್ಲಿ ಆದ ತೀರ್ಮಾನವನ್ನು ಜನತಾ ದಳದ ಶಾಸಕಾಂಗ ಪಕ್ಷದ ಕಾರ್ಯದರ್ಶಿಗಳ ಮುಖಾಂತರ ★★ ಇಲ್ಲಿ ನಾವು ಸದನದ ಗೌರವ ಇದೆ ಎಂದು ಹೇಳಿ....

ಶ್ರೀ ಜಿ.ಬಿ.ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ★★ ಎಂದು ಹೇಳಿದ ಪದವನ್ನು ವಾಪಸ್ಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರು ಹೇಳಿದರೆ ಅದನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ.ಬಿ.ಶಿವಕುಮಾರ್:- ಅನ್‌ಪಾರ್ಲಿಮೆಂಟರಿ ಪದಗಳನ್ನು ಈ ಸಭೆಯಲ್ಲಿ ಉಪಯೋಗಿಸುವುದಕ್ಕೆ ಅವಕಾಶ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾನು ಮಾತನಾಡಿದಂತಹ ಪದ ಅನ್ ಪಾರ್ಲಿಮೆಂಟರಿ ಪದ ಆಗಿದ್ದರೆ ಮಾನ್ಯ ಅಧ್ಯಕ್ಷರು, ಕಡತದಿಂದ ತೆಗೆದುಹಾಕುವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಖಂಡಿತವಾಗಿ ಮಾನ್ಯ ಸದಸ್ಯರು ಆ ರೀತಿ ಮಾತನಾಡಬಾರದು. ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು.

★★ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಾನು ತಮ್ಮ ಹತ್ತಿರ ಮಾತನಾಡುತ್ತಿಲ್ಲ.

ಶ್ರೀ ಜಿ.ಬಿ.ಶಿವಕುಮಾರ್:- ಮಾನ್ಯ ಸದಸ್ಯರು ಕಡೆಯಲ್ಲಿ ಮಾತನಾಡಿದಂತಹ ಪದವನ್ನು ಕಡತದಿಂದ ತೆಗೆದುಹಾಕಬೇಕು ಮಾನ್ಯ ಅಧ್ಯಕ್ಷರೇ. ಶ್ರೀರಾಮರೆಡ್ಡಿಯವರು ಹೇಳಿದತಕ್ಕಂಥ ಕೊನೆಯ ಶಬ್ಧ ಏನು ಇದೆ ಅದನ್ನು ಕಡತದಿಂದ ತೆಗೆದುಹಾಕಬೇಕು.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಮಾನ್ಯ ಅಧ್ಯಕ್ಷರೇ, ಶಾಸಕರ ಗೌರವ ಮತ್ತು ಘನತೆ ಬಗ್ಗೆ ಈ ಮನೆಯಿಂದ ಹೊರಗಡೆ ನಡೆಯುತ್ತದೆ ಎನ್ನುವುದರ ಬಗ್ಗೆ ಅವರಿಗೂ ಮಾಹಿತಿ ಇದೆ. ಇವತ್ತು ಶಾಸಕರಿಗೆ ಹಕ್ಕುಚ್ಯುತಿಯಾಗಿರತಕ್ಕಂಥ ವಿಚಾರದಲ್ಲಿ ಪತ್ರಿಕೆಗಳ ಮುಖಾಂತರವಾಗಿ ದಿನನಿತ್ಯ ಹೇಳುತ್ತಿದ್ದಾರೆ. ಸಾರ್ವಜನಿಕವೇದಿಕೆಗಳ ಮೇಲೆ ಹೇಳುತ್ತಿದ್ದಾರೆ. ಇವರು ಅದರ ಬಗ್ಗೆ ಚಿಂತನೆ ಮಾಡುತ್ತಿಲ್ಲ.

ಶ್ರೀ ಜಿ.ಬಿ.ಶಿವಕುಮಾರ್:- ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ ಮಾನ್ಯ ಶ್ರೀರಾಮರೆಡ್ಡಿಯವರು ಆಡಿದ ಕೊನೆಯ ಶಬ್ಧವನ್ನು ಕಡತದಿಂದ ತೆಗೆದುಹಾಕಬೇಕು ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಇದು ಗೌರವ ತರುವ ಶಬ್ಧ ಅಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ಇದು ಅನ್‌ಪಾರ್ಲಿಮೆಂಟರಿ ಎಂದು ನಿಮ್ಮ ಗಮನಕ್ಕೆ ಬಂದಿದ್ದರೆ ನೀವು ಕಡತದಿಂದ ತೆಗೆದುಹಾಕಬಹುದು. ನನ್ನದೇನೂ ಅಭ್ಯಂತರ ಇಲ್ಲ. ನಾನು ನಮ್ಮ ಹಳ್ಳಿ ಭಾಷೆಯಲ್ಲಿ ನಾನು ಮಾತನಾಡಿದ್ದೇನೆ. ಇದು ಅನ್‌ಪಾರ್ಲಿಮೆಂಟರಿ ಪದ ಅಲ್ಲ ಎಂಬುದು ನನ್ನ ಸ್ವಂತ ಅಭಿಪ್ರಾಯ ಇದೆ. ತಮಗೆ ಅನ್ ಪಾರ್ಲಿಮೆಂಟರಿ ಪದ ಎಂದು ಬಂದರೆ ನನ್ನದೇನೂ ಅಭ್ಯಂತರ ಇಲ್ಲ. ನನ್ನದೇನೂ ತಕರಾರು ಇಲ್ಲ.

ಉಪಾಧ್ಯಕ್ಷರು:- ಆಗಬಹುದು ತಾವು ಮುಗಿಸಿ.

ಶ್ರೀಮತಿ ಬಿ.ಟಿ.ಲಲಿತಾನಾಯಕ್:- ಮಾನ್ಯ ಅಧ್ಯಕ್ಷರೇ, ಹಳ್ಳಿ ಭಾಷೆ ಡೆಲ್ಲಿ ಭಾಷೆ ಎಂದು ಏನೂ ಇಲ್ಲ. ಎಲ್ಲಾ ಭಾಷೆಗಳನ್ನು ಬಳಸುತ್ತಾರೆ. ಆದರೆ ಈ ಸದನದಲ್ಲಿ ಬಳಸಬೇಡಿ ದಯವಿಟ್ಟು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಆಯಿತು ನಿಮಗೆ ನೋವಾಗಿದ್ದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನೀವು ಯಾವಾಗ ದುಶ್ಯಾಸನ ಆದಿರಿ ಎನ್ನುವುದೊಂದು ಪ್ರಶ್ನೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನೀವು ಯಾವಾಗ ದ್ರೌಪದಿ ಆದರೋ ಆಗ ನಾವು ದುಶ್ಯಾಸನ ಆಗಿರುತ್ತೇವೆ. ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ಈ ರೀತಿಯ ಮಾತುಕತೆಗಳಿಗೆ ಈ ರೀತಿಯ ಚರ್ಚೆಗೆ ತಾವು ಅವಕಾಶ ಕೊಡುವುದಾದರೆ ನಮಗೆ ನಿಜವಾಗಿಯೂ ಗೌರವ ತರತಕ್ಕಂಥ ಮಾತು ಅಲ್ಲ.

ಶ್ರೀ ಸಿದ್ಧರಾಮಯ್ಯ:- ಶ್ರೀಮತಿ ಪ್ರಮೀಳಾ ನೇಸರ್ಗಿಯವರು ದ್ರೌಪದಿಯಾಗತಕ್ಕ ಪ್ರಶ್ನೇ ಇಲ್ಲ. ತಾವು ದುಶ್ಯಾಸನ ಆಗತಕ್ಕ ಪ್ರಶ್ನೆನೇ ಇಲ್ಲ. ಆದ್ದರಿಂದ ಆ ಪ್ರಶ್ನೆ ಉದ್ಭವವಾಗುವುದಿಲ್ಲ ಬಿಡಿ.

ಉಪಾಧ್ಯಕ್ಷರು:- ಈಗಾಗಲೇ ಅವರು ವಾಪಸ್ಸು ತೆಗೆದುಕೊಂಡಿದ್ದೇನೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಈಗ ದುಶ್ಯಾಸನ ಮತ್ತು ದ್ರೌಪದಿ ನಿಜವಾಗಿಯೂ ಆಗುವುದಾದರೆ ನಾನು ಕೃಷ್ಣ ಆಗುವುದಕ್ಕೆ ತಯಾರು.

ಉಪಾಧ್ಯಕ್ಷರು:- ಯಾರು ಕೃಷ್ಣ ಆಗವುದೂ ಬೇಡ ದ್ರೌಪದಿ ಆಗುವುದೂ ಬೇಡ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ಆದ್ದರಿಂದ ಇದರಲ್ಲಿ ಸರ್ಕಾರ ಎಷ್ಟು ಬೇಜವಾಬ್ದಾರಿಯಿಂದ ವರ್ತನೆ ಮಾಡಿದೆ ಎಂದು ಹೇಳಿದರೆ 8ನೇ ತಾರೀಖು ಸಭೆ ಕರೆದರು; 9ನೇ ತಾರೀಖು ನೀವು ನೀರು ಬಿಡತಕ್ಕಂಥ ಸಂದರ್ಭದಲ್ಲಿ, ಸದನ ನಡೆಯುತ್ತಿದೆ ಈ ಸದನಕ್ಕೆ ತಿಳಿಸಬಹುದಾಗಿತ್ತು. ಸದನ ನಡೆಯುತ್ತಿದೆ ಎಲ್ಲಾ ವಿರೋಧಪಕ್ಷದ ಮುಖಂಡರು ಇಲ್ಲಿ ಇದ್ದಾರೆ. ಅವರೆಲ್ಲರನ್ನು ಕರೆದು ಪರಿಸ್ಥಿತಿ ಹೀಗಿದೆ. ನಮ್ಮ ರಾಜ್ಯದ ಭವಿಷ್ಯದ ದೃಷ್ಟಿಯಿಂದ ತಮಿಳುನಾಡಿಗೆ ನಾವು ಇವತ್ತು ನೀರು ಬಿಡತಕ್ಕಂಥ ಅವಶ್ಯಕತೆ ಇದೆ ಎಂದು ಹೇಳಿ ಕನಿಷ್ಠ ಮಾತನಾಡತಕ್ಕಂಥ ಒಂದು ಸೌಜನ್ಯ ಕೂಡ ಇಲ್ಲದೇ ಏಕಾಏಕಿ ನೀರು ಬಿಟ್ಟಿರತಕ್ಕಂಥಾದ್ದು ಸರ್ವಥಾ ಇದು ಖಂಡನಾರ್ಹವಾದಂತಹ ವಿಷಯ. ಇದು ಅವರ ಬೇಜವಾಬ್ದಾರಿ ಮತ್ತು ಉದ್ಧಟತನದ ಪ್ರಶ್ನೆ ಕೂಡ ಆಗಿದೆ. ಇದರಿಂದ ಇವತ್ತು ಈ ಸಮಸ್ಯೆ ಉದ್ಭವವಾಗಿರತಕ್ಕಂಥಾದ್ದು ಇಲ್ಲದಿದ್ದರೆ ಈ ಸದನದಲ್ಲಿ ಎರಡು ದಿವಸಗಳಿಂದ ಈ ವಿಷಯವನ್ನು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮಲ್ಲಿ ಹೇಳುತ್ತಿದ್ದೇನೆ ಸರ್ಕಾರ ಏನು ಬೇಜವಾಬ್ದಾರಿತನ ಮಾಡಿದೆ ಎಂದು. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ವಿರೋಧಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಅವರು ಏಕಾಏಕಿ ನೀರು ಬಿಟ್ಟಿರತಕ್ಕಂಥಾದ್ದನ್ನು ಸರ್ಕಾರ ಒಪ್ಪಬೇಕು. ಎಲ್ಲದ್ದಕ್ಕೂ ಸೌಹಾರ್ದಯುತವಾಗಿ ಪರಿಹಾರ ಒದಗಿಸಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ ಈಗ ನಾವು ನಿರ್ಣಯದ ಮೂಲಕ ಚರ್ಚೆ ಮಾಡುತ್ತಿದ್ದೇವೆ. ಚರ್ಚೆ ಅಂತೂ ನಾವು ಪ್ರಾರಂಭ ಮಾಡಿಬಿಟ್ಟಿದ್ದೇವೆ. ನಿರ್ಣಯವನ್ನು ನಾನೂ ಸಹ ಕಳುಹಿಸಿ ಕೊಟ್ಟಿದ್ದೇನೆ. ಆದರೆ ಈ

ಚರ್ಚೆಯಿಂದ ಪ್ರತಿಫಲ ಏನು ಎನ್ನತಕ್ಕಂಥಾದ್ದು ಒಂದು ದೊಡ್ಡ ಪ್ರಶ್ನೆ. ಮಾನ್ಯ ಯಡಿಯೂರಪ್ಪನವರು ಮಾತನಾಡಿದ್ದಾರೆ. ಮಾನ್ಯ ಖರ್ಗೆಯವರು ಮಾತನಾಡಿದ್ದಾರೆ. ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡಿದ್ದಾರೆ. ಅವರು ಬಹಳ ಅಂಕಿಅಂಶಗಳ ಬಗ್ಗೆ ಮಾತನಾಡಿದ್ದಾರೆ. ವಿಧಾನಪರಿಷತ್ತಿನಲ್ಲಿ ಚರ್ಚೆ ಆಗಿದೆ. ಮಾನ್ಯ ನೀರಾವರಿ ಸಚಿವರು ಸ್ಪಷ್ಟವಾಗಿ ಧಾರಾಳವಾಗಿ ನಾವು ನೀರು ಇದೆ, ನೀರು ಕೊಟ್ಟಿದ್ದೇವೆ ಅದನ್ನು ಸುಮ್ಮನೇ ಏನು ಹೇಳುತ್ತೀರಿ ಎನ್ನುವ ಅರ್ಥದಲ್ಲಿ ದಿನಬೆಳಿಗ್ಗೆ ಆದರೆ ಏನು ಇದು. ನೀರು ಬರುತ್ತಿದೆ ನೀರು ಕೊಟ್ಟಿದ್ದೇವೆ. ಅವರು ಅಂಕಿಅಂಶಗಳನ್ನು ತೆಗೆದುಕೊಂಡರು. ಅವರ ಬಣ್ಣವನ್ನು ಬಿಚ್ಚಿ ಬಯಲು ಮಾಡಿದ್ದಾರೆ. ಅವರು ನಿನ್ನೆ ಎಷ್ಟು ತರಾತುರಿಯಿಂದ ಹೊರಗಡೆ ಓಡುತ್ತಿದ್ದರು ಅಂದರೆ ವಿಧಾನಸೌಧ ಸುತ್ತ ಮಳೆ ಬೀಳುತ್ತಿತ್ತು, ವಾಟಾಳರೇ, ನೋಡಿ ಮಳೆ ಮಳೆ ಎಂದರು. ಆಗ ನಾನು ಹೇಳಿದೆ, ಮಳೆ ಬರೀ ವಿದಾನಸೌಧ ಸುತ್ತ ಬೀಳುತ್ತಿದೆ. ಅಲ್ಲಿ ಎಲ್ಲೂ ಕೂಡ ಮಳೆ ಬರುತ್ತಿಲ್ಲ. ನೀವು ಇಲ್ಲೇ ಕುಳಿತುಕೊಂಡು ನಮಗೆ ಮಳೆ ಬೀಳುತ್ತಿದೆ ಮಳೆ ಬೀಳುತ್ತಿದೆ ಎಂದು ಹೇಳುತ್ತಿದ್ದೀರಿ ಎಂದು. ಇದು ಪ್ರಶ್ನೆ. ನನಗೆ ವಸ್ತುಸ್ಥಿತಿಯನ್ನು ಶಾಸನ ಸಭೆಗಳಲ್ಲಿ ಮುಕ್ತವಾಗಿ ಚರ್ಚೆ ಮಾಡುವಂತಾದ್ದಕ್ಕೆ ನಮಗೆಲ್ಲರಿಗೂ ಅವಕಾಶ ಇದೆ. ಅವರೂ ಸಹ ಬಹಳ ಪ್ರಾಮಾಣಿಕವಾಗಿ ಮುಕ್ತವಾಗಿ ಉತ್ತರ ಕೊಡಬೇಕು ಎಲ್ಲಿಗೆ ಹೋಗುತ್ತಿದ್ದೇವೆ ನಾವು ಅಂದರೆ ಇವತ್ತು ಚರ್ಚೆ ಮತ್ತು ಸರ್ಕಾರದ ಉತ್ತರ. ಕರ್ನಾಟಕ ರಾಜ್ಯಕ್ಕೆ ಒಟ್ಟಾರೆ ಆಗಿರತಕ್ಕಂಥ ಅನ್ಯಾಯದ ಬಗ್ಗೆ ನಾವು ಮಾತನಾಡವುದಕ್ಕೆ ಹೋದಾಗ ಸತ್ತ ಕುದುರೆಯನ್ನು ಓಡಿದು ನಾವು ಏನೋ ಮಾಡುತ್ತಿದ್ದೇವೆ ಎನ್ನುವಷ್ಟು ಬಹಳ ಅತ್ಯಂತ ಮನಸ್ಸಿಗೆ ನೋವಾಗುತ್ತಿದೆ. ನೀರು ಹರಿದು ಹೋಗುತ್ತಿದೆ. ಈಗಾಗಲೇ ತಮಿಳುನಾಡಿನಾದ್ಯಂತ ವಿಜಯೋತ್ಸವ ಆಚರಣೆ ನಡೆಯುತ್ತಿದೆ. ಕರುಣಾನಿಧಿಯವರು ಎಷ್ಟು ಕಠೋರವಾಗಿ ಸಂಯುಕ್ತರಂಗ ಸರ್ಕಾರದ ಮೇಲೆ ಧಾಳಿ ಮಾಡುತ್ತಾರೆ ಎನ್ನುವ ದಿಕ್ಕು ಸ್ವಲ್ಪ ಬದಲಾವಣೆ ಆಗಿದೆ. 12ನೇ ತಾರೀಖು ತಮಿಳು ನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾರವರು ತಮಿಳುನಾಡಿನ ಮುಖ್ಯಮಂತ್ರಿಯವರಿಗೂ ಮತ್ತು ಅಲ್ಲಿನ ಮನಿಲಾ ಕಾಂಗ್ರೆಸ್‌ನವರಿಗೂ ಎಚ್ಚರಿಕೆಯನ್ನು ನೀಡಿ ಸಂಯುಕ್ತ ರಂಗ ಸರ್ಕಾರದಿಂದ ನೀವು ಹೊರಗಡೆ ಬರಬೇಕು. ಅಲ್ಲಿ ಒಂದು ಕ್ಷಣ ನೀವು ಇರಕೂಡದು. ನಾನು 12ನೇ ತಾರೀಖಿನಿಂದ ಇಡೀ ರಾಜ್ಯದಲ್ಲಿ ಚಳುವಳಿಯನ್ನು ಮಾಡುತ್ತೇನೆ ಎನ್ನತಕ್ಕಂಥ ಒಂದು ಹೇಳಿಕೆಯನ್ನು ಸ್ಪಷ್ಟವಾಗಿ ನೀಡಿದ್ದಾರೆ. ಸಂಯುಕ್ತರಂಗ ಸರ್ಕಾರದವರು ತಮ್ಮ ಬೆಂಬಲವನ್ನು ಹಿಂತೆಗೆದುಕೊಂಡರೆ ಮುಂದಿನ ಪ್ರಧಾನಮಂತ್ರಿಗಳು ಯಾರು? ತಮಿಳುನಾಡಿನವರು ಅಲ್ಲ.

4.50 ಪಿ.ಎಂ.

ಮಾನ್ಯ ದೇವೇಗೌಡರ ಬಗ್ಗೆ ವಾದ ವಿವಾದ ಏನೇ ಇರಲಿ, ಕರ್ನಾಟಕದಿಂದ ಕನ್ನಡಿಗರೊಬ್ಬರು ಇತಿಹಾಸದಲ್ಲೇ ಪ್ರಪ್ರಥಮವಾಗಿ ಪ್ರಧಾನಿಯಾಗಿದ್ದಾರೆ, ಅದು ನಮಗೆ, ನಮ್ಮ ಭಾಷೆಗೆ, ನಮ್ಮ ನಾಡಿಗೆ ಸಂದ ಅಭಿಮಾನ. ಆದರೆ, ಮಾನ್ಯ ದೇವೇಗೌಡರು ಪ್ರಧಾನಿಯಾದ ಮೇಲೆ ನಮ್ಮ ಕರ್ನಾಟಕ ರಾಜ್ಯಕ್ಕೆ ಹೊಸ ರೈಲ್ವೆ

ಲೈನುಗಳನ್ನು ಕೊಟ್ಟಿಲ್ಲ, ವಿದ್ಯುಚ್ಛಕ್ತಿ ಯೋಜನೆಗಳನ್ನು ಕೊಟ್ಟಿಲ್ಲ, ನಮ್ಮ ರಾಜ್ಯಕ್ಕೆ ಸೇರಿದ ಮೂವರನ್ನು ಮಾತ್ರ, ಮಂತ್ರಿಗಳನ್ನು ಮಾಡಿರುವುದನ್ನು ಬಿಟ್ಟರೆ ಅವರು ಕರ್ನಾಟಕ ಜನತೆಗೆ ಕೊಟ್ಟ ಕೊಡುಗೆ ಎಂದರೆ 'ಕಣ್ಣೀರು'! ಇದು ಕರ್ನಾಟಕದ ಜನತೆಗೆ ಮಾಡಿರುವಂಥ ಮಹಾ ಅಪರಾಧ ಹಾಗೂ ತೋರಿಸಿರುವಂಥ ಅಗೌರವ. ಇದನ್ನು ನಾನು ಏಕೆ ಹೇಳುತ್ತೇನೆಂದರೆ, ಶ್ರೀಮಾನ್ ದೇವೇಗೌಡರು ಕರ್ನಾಟಕದ ಮುಖ್ಯಮಂತ್ರಿಯಾಗುವುದಕ್ಕೆ ಮುಂಚೆ ಇಡೀ ರಾಜ್ಯದ ಉದ್ದಗಲಕ್ಕೆ ಓಡಾಡಿ ಕಾವೇರಿ ನೀರಿನ ಬಗ್ಗೆ ತೆಗೆದುಕೊಂಡಂಥ ಗಂಡು ನಿರ್ಧಾರ ಮತ್ತು ಧಿಟ್ಟ ನಿರ್ಧಾರ ಹಾಗೂ ಅವರು ಮಾಡಿದಂಥ ಭಾಷಣ, ಅವುಗಳನ್ನೆಲ್ಲಾ ಮಾನ್ಯ ಭಾರಿ ನೀರಾವರಿ ಸಚಿವರು ಕೇಳಿರಬಹುದು ಅಥವಾ ಪತ್ರಿಕೆಗಳಲ್ಲಿ ಓದಿರಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರ ಭಾಷಣವನ್ನು ಕೇಳಿದ್ದಾರೆ ಮತ್ತು ಓದಿದ್ದಾರೆ ಹಾಗೂ ಅದನ್ನು ವಿರೋಧಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಹಾಗೆಯೇ ಅದನ್ನು ವಿರೋಧಿಸಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ:- ನಾನು ಹೇಗೆ ವಿರೋಧಿಸಿದೆ? ನಾನು ಹೇಗೆ ಬೆಂಬಲ ಮಾಡಿದ್ದೇನೆ? ಹಾಗೆಯೇ ಇವರು ಕೇಂದ್ರದಲ್ಲಿ 144 ಎಂಪಿಗಳು ನಾನು ಮಾಡಿದ ಕೆಲಸವನ್ನೇ ಅವರು ಮಾಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಮಾಡಿದ್ದೇ ಬೇರೆ. ಕಾವೇರಿ ನೀರಿನ ಬಗ್ಗೆ ಮಾನ್ಯ ದೇವೇಗೌಡರ ನಿಲುವು ಏನಿತ್ತು? ಅವರ ಭಾಷಣ ಏನಿತ್ತು? ಅವರ ಹೋರಾಟ ಏನಿತ್ತು? ಅದರ ವಿರುದ್ಧವಾಗಿ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಶ್ರೀಮಾನ್ ನಾಗೇಗೌಡರು ಬುದ್ಧಿವಂತರು, ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಅವರ ಆತ್ಮತಲ್ಲಿರತಕ್ಕಂಥ ವಿಚಾರವನ್ನು, ಅವರ ಮನಸ್ಸಿನಲ್ಲಿರತಕ್ಕಂಥ ಸ್ಪಷ್ಟವಾದ ನಿಲುವನ್ನು ಅವರು ಹೇಳುತ್ತಿಲ್ಲ. ಅವರು ಮಂತ್ರಿಗಳಾಗಿದ್ದಾರೆ, ಅವರ ಬಾಸ್ ಅಲ್ಲಿ ಮಂತ್ರಿಗಳಾಗಿದ್ದಾರೆ, ಅವರಿಗೆ ಇವರು ಸ್ವಾಮಿ ನಿಷ್ಠರಾಗಿದ್ದಾರೆ. ನನಗನಿಸಿದ ಮಟ್ಟಿಗೆ ಆಂಜನೇಯನೂ ಶ್ರೀರಾಮನಿಗೆ ಅಷ್ಟರಮಟ್ಟಿಗೆ ಸ್ವಾಮಿನಿಷ್ಠನಾಗಿರಲಿಲ್ಲವೇನೋ; ಅಷ್ಟು ಸ್ವಾಮಿ ನಿಷ್ಠೆಯನ್ನು ಇವರು ತೋರಿಸುತ್ತಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಶ್ರೀರಾಮ ಮನುಷ್ಯ, ಆಂಜನೇಯ ಪ್ರಾಣಿ ನಿಷ್ಠೆ ತೋರಿಸುವುದು ಯಾರಿಗೆ? ಹಾಗಾದರೆ ನಾಗೇಗೌಡರು ಪ್ರಾಣಿಯೇ?

ಶ್ರೀ ವಾಟಾಳ್ ನಾಗರಾಜ್:- ನಾನು ಆ ಅರ್ಥದಲ್ಲಿ ಹೇಳುವುದಕ್ಕೆ ಹೋಗುವುದೇ ಇಲ್ಲ; ಮಾನ್ಯ ನಾಗೇಗೌಡರ ಮೇಲೆ ನನಗೆ ಅಪಾರವಾದ ಗೌರವ ಇದೆ. ಆಂಜನೇಯ ಪ್ರಾಣಿಯಾಗಿದ್ದರೂ ಅದರ ಕರ್ತವ್ಯ ದೃಷ್ಟಿ, ಪ್ರಾರ್ಥನೆ ಮತ್ತು ಸತ್ಯ ಇದೆಯಲ್ಲಾ ಅದರ ಬಗ್ಗೆ ನನ್ನ ವಾದ ಇದೆ. ಶ್ರೀರಾಮನ ಎದುರಿಗೆ ಆಂಜನೇಯ ಕೈ ಮುಗಿದು ಕುಳಿತಿರುವ ದೃಶ್ಯ ನನಗೆ ನೆನಪಾಗುತ್ತಿದೆ. ಅಂಥಹ ಭಕ್ತಿಯ ಉತ್ತುಂಗಕ್ಕೆ ಹೋಗತಕ್ಕಂಥ ವಿಚಾರದಲ್ಲಿ

ಈ ರಾಜ್ಯದ ಜನತೆಯನ್ನು ಕರ್ಮ ಕೂಪಕ್ಕೆ ತಳ್ಳುತ್ತಿದ್ದಾರಲ್ಲಾ ಪಾಪ ಯಾವ ಪಾಪ ನೋಡೇ ಬಿಡೋಣ ಎಂದು ಅವರು ಹೇಳಿರಬಹುದು. ಯಾವ ಪಾಪ ಬರುತ್ತಿದೆ ಎನ್ನುವ ದೃಷ್ಟಿಯಿಂದ ಅವರು ಹೇಳಬಹುದು. ಆದರೆ ಕರ್ನಾಟಕದ ಜನತೆ ಸರ್ಕಾರವನ್ನು ಶಪಿಸುತ್ತಾರೆ. ಅಧ್ಯಕ್ಷರು ಸಭೆಗೆ ಬಂದರೆ ನಮಗೆ ಸಂತೋಷ. ಅವರು

(ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್‌ರವರು ಪೀಠವನ್ನು ಅಲಂಕರಿಸಿದರು)

ಸಭೆಗೆ ಬಂದರೆ ನಮಗೆ ಮಾತನಾಡುವುದಕ್ಕೆ ಸ್ಫೂರ್ತಿ ಬರುತ್ತದೆ. ಆಂಜನೇಯ ಪ್ರಾಣಿಯಾಗಿದ್ದರೂ ಮನುಷ್ಯ ಸ್ವರೂಪಿ. ಮನುಷ್ಯನ ಸ್ವರೂಪದಲ್ಲಿ ಎಷ್ಟು ಭಕ್ತಿ ಭಾವನೆಯಿಂದ ಮಾಡಬೇಕಾದ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿದಂಥ ವ್ಯಕ್ತಿಯಾಗಿ, ಒಂದು ಪರಮ ಪೂಜ್ಯವಾದ ಸ್ಥಾನವನ್ನು ನಾನು ಶ್ರೀಮಾನ್ ನಾಗೇಗೌಡರಿಗೆ ಕೊಡುತ್ತಿದ್ದೇನೆ. ಇದೇ ನಾಗೇಗೌಡರು ಕಾಂಗ್ರೆಸ್ ಪಕ್ಷದ ವಿಧಾನಪರಿಷತ್ತಿನ ಸದಸ್ಯರಾಗಿದ್ದಾಗ ಮಾಡಿದ್ದ ಭಾಷಣವನ್ನು ಕೇಳಿದ್ದೇನೆ. ಅದಾದ ನಂತರ ಈಗ ಪ್ರಧಾನಮಂತ್ರಿಯಾಗಿದ್ದವರು ಆಗ ಮುಖ್ಯ ಮಂತ್ರಿಯಾಗಿದ್ದಾಗ 6 ಟಿಎಂಸಿಎಫ್‌ಟಿ ನೀರನ್ನು ತಮಿಳುನಾಡಿಗೆ ಬಿಟ್ಟಾಗ ಮಾನ್ಯ ನಾಗೇಗೌಡರು ದೆಹಲಿಯಲ್ಲೇ, ಏನು ಅನ್ಯಾಯ, ನಮ್ಮ ಪರಿಸ್ಥಿತಿ ಹೀಗಾಯಿತು ಎಂದು ನಾನು ಏಕೆ ಸದಸ್ಯನಾಗಿರಬೇಕೆಂದು ಹೇಳುವವರೆಗೂ ಹೋಗಿದ್ದರು. ಇವತ್ತು ಅವರಿಗೆ ಏನಾಯಿತು? ನಾನು ಇರುವವರೆಗೂ ಕನ್ನಂಬಾಡಿ ಬಾಗಿಲು ಎತ್ತುವುದಿಲ್ಲ, ಕಪಿಲಾ ಬಾಗಿಲು ಎತ್ತುವುದಿಲ್ಲ, ಹಾರಂಗಿ ಬಾಗಿಲು ಎತ್ತುವುದಿಲ್ಲ, ಹೇಮಾವತಿ ಬಾಗಿಲು ಎತ್ತುವುದಿಲ್ಲ, ಕನ್ನಡ ಜನಕ್ಕೆ ಅನ್ಯಾಯ ಮಾಡುವುದಿಲ್ಲವೆಂದು ಅವರು ಹೇಳಿದ್ದಿದ್ದರೆ ನನಗೆ ನಿಜವಾಗಿ ಅತ್ಯಂತ ಸಂತೋಷವಾಗಿ ಸುಧೀರ್ಘವಾದ ಒಂದು ಕೋಟಿ ಅಭಿನಂದನೆಯನ್ನು ಅವರಿಗೆ ಸಲ್ಲಿಸುತ್ತಿದ್ದೆ. ಇವತ್ತು ಸ್ವಾಮಿ ನಿಷ್ಠೆಗೋಸ್ಕರವಾಗಿ ಈ ನಾಡನ್ನು ಅವರು ಬಲಿ ಕೊಟ್ಟರು. ನಾಡಿನ ಜನತೆಯನ್ನು ಬಲಿ ಕೊಟ್ಟರು. ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ಸಂತೋಷಪಡುತ್ತಿದ್ದಾರೆ. ನಮ್ಮ ರಾಜ್ಯದ ಉದ್ದಗಲಕ್ಕೂ ಜನರು ಧ್ವನಿ ಇಲ್ಲದೆ ಮೂಕ ವೇದನೆಯನ್ನು ಅನುಭವಿಸುತ್ತಿರುವಂಥ ಪರಿಸ್ಥಿತಿ ಬಂದಿದೆ. ಕೃಷ್ಣರಾಜ ಸಾಗರದಿಂದ ನೀರು ಬಿಡಲಾಗಿದೆಯೆಂದರೆ ಮಂಡ್ಯ ಜನರು ಮೇಲೆ ಬೀಳುತ್ತಾರೆ; ಕಪಿಲಾ ಜಲಾಶಯದಿಂದ ನೀರು ಬಿಡಲಾಗಿದೆಯೆಂದರೆ ಮೈಸೂರು ಜನರು ಧ್ವನಿ ಎತ್ತುವುದಿಲ್ಲವೆಂದು ಮೊದಲು ಹಾರಂಗಿಯಿಂದ ನಂತರ ಹೇಮಾವತಿಯಿಂದ ನೀರು ಬಿಟ್ಟಿದ್ದೇವೆಂದು ಹೇಳಿ ಕೊನೆಗೆ ಕೆ.ಆರ್.ಎಸ್.ನಿಂದಲೇ ನೀರು ಬಿಟ್ಟಿರುತ್ತಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಕಾವೇರಿ ಮತ್ತು ಕೃಷ್ಣ ನೀರಿನ ವಿಷಯದಲ್ಲಿ ಕರ್ನಾಟಕಕ್ಕೆ ಮೊದಲಿನಿಂದಲೂ ಅನ್ಯಾಯವಾಗಿದೆ. ಇದುವರೆಗೂ ನಮ್ಮ ಮುಖ್ಯಮಂತ್ರಿಗಳು ನದಿಯಲ್ಲಿ ನೀರು ಇದೆ ಎಂದು ಹೇಳಿಯೇ ಇಲ್ಲ. ಮಾನ್ಯ ಮೊಯಿಲಿಯವರ ಕಾಲದಲ್ಲೂ ನೋಡಿದ್ದೇನೆ, ನಮ್ಮಲ್ಲಿ ಒಂದು ಹನಿ ನೀರಿಲ್ಲವೆಂದು ಹೇಳಿದ್ದಾರೆ. ಆಗ ಅರ್ಧ ರಾತ್ರಿಯಲ್ಲಿ ವಿ.ಸಿ ಶುಕ್ಲಾ ಅವರು ಕರ್ನಾಟಕಕ್ಕೆ ಬಂದು ಒಂದು ಗಂಟೆ, ಎರಡು ಗಂಟೆ ಚರ್ಚೆ ಮಾಡಿದರೂ ಒಂದು ಹನಿ ನೀರು ಇಲ್ಲವೆಂದು

ಹೇಳಿದ್ದರು.

ಮಾನ್ಯ ಬಂಗಾರಪ್ಪನವರ ಬಗ್ಗೆ ವಾದ ವಿವಾದಗಳು ಬೇರೆ. ನಾವು ಇವೊತ್ತು ಅವರನ್ನು ನೆನಪಿಸಿಕೊಳ್ಳಬೇಕು. ಅವರದ್ದು ದಿಟ್ಟ ಹಾಗೂ ಘಟ್ಟಿಯಾದ ನಿರ್ಧಾರ. ಸರಕಾರದ ಕಡೆಯಿಂದಲೇ ಕರ್ನಾಟಕ ಬಂದ್ ಮಾಡಿಸಿದರು. ಸರಕಾರವೇ ನೇರವಾಗಿ ತಮಿಳುನಾಡು ಬಂದ್ ವಿರುದ್ಧವಾಗಿ ಕರ್ನಾಟಕ ಬಂದ್ ಮಾಡಿತು. ಅದರ ಪರಿಣಾಮ ಏನಾಯಿತು ಎಂಬುದು ಬೇರೆ ಮಾತು. ಆದರೆ ನಿಮ್ಮಲ್ಲಿ ಶಕ್ತಿ ಇಲ್ಲವಲ್ಲಾ? ಅದು ದಿಲ್ಲಿಗೆ ಹೋಯಿತು? ತನ್ನ ರಾಜ್ಯದ ನಿಲುವನ್ನು ಅವರು ಹೇಗೆ ಸಮರ್ಥಿಸಿಕೊಂಡರು ಎಂಬುದು ಮುಖ್ಯ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪರಿಣಾಮ ಏನೆಂದರೆ ಅವರ ಪ್ರಕಾರ ಮಗು ಹುಟ್ಟಿದ ಮೇಲೆ ಸತ್ತಿರಬಹುದು.... ಈಗ ನೀವು ಕೊಲ್ಲುತ್ತಾ ಇದ್ದೀರಲ್ಲಾ? ಅಂದರೆ ಎರಡೂ ಪರಿಣಾಮ ಒಂದೇ...

ಶ್ರೀ ವಾಟಾಳ್ ನಾಗರಾಜ್:- ಒಬ್ಬ ಮುಖ್ಯಮಂತ್ರಿಯಾಗಿ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಮಾನ್ಯ ಬಂಗಾರಪ್ಪನವರು ತೆಗೆದುಕೊಂಡಂಥ ನಿರ್ಧಾರಗಳು ಬಹುಮುಖ್ಯ. ಅಂಥಹ ನಿರ್ಧಾರಗಳು ಯಾವುದೋ ಒಂದು ಸಂದರ್ಭದಲ್ಲಿ ನಿಂತಿರಬಹುದು, ಜಾರಿಯಾಗದೇ ಉಳಿದಿರಬಹುದು, ಆದರೆ ಅವರ ನಿರ್ಧಾರ ಮುಖ್ಯ. ಬೇಕಾದಾಗ ಸುಗ್ರೀವಾಜ್ಞೆಯನ್ನು ತಂದರು. ಸರ್ವಪಕ್ಷಗಳ ಜೊತೆಗೆ ಕರ್ನಾಟಕ ಬಂದ್ ಮಾಡಿದರು. ತಮಿಳುನಾಡು ಮುಖ್ಯಮಂತ್ರಿಯವರ ಜೊತೆಗೆ ಮಾತನಾಡುವುದಿಲ್ಲ ಎಂದು ಹೇಳಿದರು. ಪ್ರಧಾನಿ ಜೊತೆಗೆ ಹೋಗುವುದಿಲ್ಲವೆಂದು ಹೇಳಿದರು. ಇದೆಲ್ಲಾ ಅವರು ನಾಡಿನ ಜನತೆಗೋಸ್ಕರವಾಗಿ ಮಾಡಿದಂಥ ಕಾರ್ಯ. ಒಂದು ವಿಚಾರವನ್ನು ನಾನು ಪ್ರಾರಂಭದ ಹಂತದಲ್ಲಿ ಹೇಳಿದೆ. ಮಾನ್ಯ ದೇವೇಗೌಡರೂ ಕೂಡ ಅಷ್ಟೇ ಭದ್ರವಾಗಿ, ಶಕ್ತಿಯುತವಾಗಿ ಈ ರಾಜ್ಯದ ನೀರಾವರಿ ಬಗ್ಗೆ ಅವರು ತೆಗೆದುಕೊಂಡಂಥ ನಿರ್ಧಾರಗಳು ಏನಿತ್ತು? ಅವರು ಮೈಸೂರಿನ ಸಭೆಯಲ್ಲಿ ಮಾತನಾಡಿದಾಗ ಒಂದು ಲಕ್ಷ ಜನರು ಸೇರಿದ್ದರು. ಈ ರಾಜ್ಯ ಹಿರಿಯ ಮುಖಂಡರಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಅಧ್ಯಕ್ಷತೆಯಲ್ಲಿ ಕುಳ್ಳಿರಿಸಿ ಕೆಳಗಡೆ ನೆಲದಲ್ಲಿ ಇವರು ಕುಳಿತು ಒಂದು ಹನಿ ನೀರನ್ನು ತಮಿಳುನಾಡಿಗೆ ಬಿಡುವುದಿಲ್ಲ, ನ್ಯಾಯಮಂಡಳಿಯು ನಮಗೆ ಮರಣಶಾಸನವನ್ನು ಕೊಡತಕ್ಕಂಥಾದ್ದಾಗಿದೆ ಎಂದು ಹೇಳಿದರು. ಈ ಮಾತುಗಳನ್ನು ಒತ್ತಿ ಒತ್ತಿ ಲಕ್ಷಜನರ ಎದುರಿಗೆ ಹೇಳಿದರು. ನ್ಯಾಯಮಂಡಳಿಯ ಬಗ್ಗೆ, ಅದರ ಸದಸ್ಯರ ಬಗ್ಗೆ, ಅವರ ಚಾರಿತ್ರ್ಯದ ಬಗ್ಗೆ, ತಮಿಳುನಾಡಿಗೆ ಅವರು ಹೋದಾಗ ಅವರು ಸ್ವೀಕರಿಸಿದ ಕೊಡುಗೆಗಳ ಬಗ್ಗೆ, ಎಳೆಎಳೆಯಾಗಿ ಹೇಳಿದರು. ಅದನ್ನು ಸಂಪೂರ್ಣ ಟೇಪ್ ಮಾಡಿದರು. ಆ ಟೇಪ್‌ಗಳನ್ನು ಹೈಕೋರ್ಟ್‌ಗೆ ಕೊಟ್ಟರು, ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಇವೊತ್ತು ಪ್ರಧಾನಿಗಳಾದ ನಂತರ ಹೀಗೆ ಮಾಡಿದ್ದಾರೆ. ಒಂದು ದಿವಸ ನಾನು ಅವರನ್ನು ಕೇಳಿದಾಗ ಒಂದು ಮಾತನ್ನು ಹೇಳಿದ್ದಾರೆ. ''ನೀವೂ ಇಲ್ಲಿ ಬಂದು ಕುಳಿತುಕೊಳ್ಳಿ ಆಗ ಗೊತ್ತಾಗುತ್ತದೆ'' ಎಂದು ಹೇಳಿದರು. ಅಂದರೆ ನಾನು ಹಿಂದೆ

ಹೇಳಿದ್ದೆಲ್ಲಾ ಬರೇ ಮಾತು. ಅಧಿಕಾರಕ್ಕೆ ಬಂದಮೇಲೆ ಎಲ್ಲವೂ ಬೇರೆ ಎಂಬ ಅರ್ಥದಲ್ಲಿ ಮಾತನಾಡಿದರು. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಶ್ರೀಮಾನ್ ನಾಗೇಗೌಡರಿಗೂ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರಿಗೂ ಹೇಳುತ್ತೇನೆ. ಈ ಸದನದಲ್ಲಿ ಮುಖ್ಯಮಂತ್ರಿಗಳು ಹೇಳುತ್ತಾರೆ ನಮ್ಮಲ್ಲಿ ನೀರು ಇದೆ ಎಂದುದು ತಪ್ಪಾಗಿದೆ ಅದನ್ನು ನಾನು ಏಕೆ ಹೇಳಿಬಿಟ್ಟೆ ಎಂದು ಹೇಳುತ್ತಾರೆ. ಅದನ್ನು ಕಡತದಿಂದ ತೆಗೆಸಿರಿ ಎಂದು ಹೇಳುತ್ತಾ ಇದ್ದರು. ಆದರೆ ಇಲ್ಲಿ ಕಡತದಲ್ಲಿ ತೆಗೆಸುತ್ತಾ ಇರುವಾಗ ವಿಧಾನಸಪರಿಷತ್‌ನಲ್ಲಿ ನಾಗೇಗೌಡರು ಬಹಿರಂಗವಾಗಿ ನೀರು ಇದೆ, ನೀರು ಭದ್ರವಾಗಿ ಇದೆ, ನೀರು ಬರುತ್ತಾ ಇದೆ ಎಂದು ಹೇಳುತ್ತಿದ್ದರು. ನಾವು ಇದುವರೆಗೂ ನಮ್ಮ ಸರಕಾರದ ನಿರ್ಧಾರಗಳು, ನೀತಿಗಳು ನೋಡಿದಾಗ ನಮ್ಮ ಹಿಂದಿನ ಎಲ್ಲಾ ಸರಕಾರಗಳ ನೀತಿ ನಿರ್ಧಾರಗಳನ್ನು ನೋಡಿದಾಗ ಕರ್ನಾಟಕದಲ್ಲಿ ನೀರು ಇಲ್ಲ. ಕರ್ನಾಟಕದ ರೈತ ಸಮುದಾಯಕ್ಕೆ ನೀರು ಇಲ್ಲದಿರುವಾಗ ತಮಿಳುನಾಡಿಗೆ ನೀರು ಬಿಡತಕ್ಕಂಥ ಪ್ರಶ್ನೆ ಏನು ಎಂಬ ವಿಚಾರವನ್ನು ಎಲ್ಲರೂ ಸ್ಪಷ್ಟಪಡಿಸಿದ್ದಾರೆ. ನನಗನ್ನಿಸಿದ ಪ್ರಕಾರ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಈ ರೀತಿಯಾಗಿ ಹೇಳಲಿಲ್ಲ. ನೀರು ಇಲ್ಲ, ಖಂಡಿತವಾಗಿಯೂ ನೀರು ಇಲ್ಲ. ಆದರೂ ಕೂಡ ಪ್ರಧಾನಮಂತ್ರಿಗಳ ಒತ್ತಡಕ್ಕೆ ನಾವು ನೀರು ಬಿಡುತ್ತೇವೆ ಎಂದು ಹೇಳಿ ಎಲ್ಲಾ ವಿರೋಧ ಪಕ್ಷಗಳನ್ನು ಕರೆದು ೬ಟಿಎಂಸಿ ನೀರು ಬಿಡುವ ವಿಚಾರಕ್ಕೆ ಎಲ್ಲಿಯವರೆಗೆ ಹೋದರು? ಒಂದೆರಡು ದಿನಗಳ ಚರ್ಚೆಯಲ್ಲ, ಡೆಲ್ಲಿಯಲ್ಲಿ ಒಂದು ಸಭೆ, ಬೆಂಗಳೂರಿನಲ್ಲಿ ಎರಡು ಸಭೆ, ಅದರ ಜೊತೆಗೆ ಈ ರಾಜ್ಯದ ಎಲ್ಲಾ ಕನ್ನಡ ಸಂಘಸಂಸ್ಥೆಗಳು, ಸಾಹಿತಿಗಳು, ಪ್ರಜ್ಞಾವಂತರು, ಇಂಥ ಪ್ರಮುಖರೆಲ್ಲರನ್ನೂ ಕರೆಸಿ ಒಂದಲ್ಲ, ಎರಡಲ್ಲ, ಹತ್ತು ಬಾರಿ ಕೊನೆಗೊಂದು ದಿನ ಆರು ಟಿಎಂಸಿ ನೀರನ್ನು ನಾವು ಬಿಡುತ್ತೇವೆಂದು ಹೇಳಿದರು. ಆದರೆ ತಾವು ಅಂಥ ಯಾವ ಸಭೆ ಸೇರಿಸಲಿಲ್ಲ. ಬೆಳಿಗ್ಗೆ ನಮ್ಮೆಲ್ಲರನ್ನೂ ತರಾತುರಿಯಿಂದ ಸಭೆಗೆ ಕರೆದಿರಿ. ಕರೆದಾಗ ಸದನದಲ್ಲಿ, ಈ ಸಭೆಯಲ್ಲಿ ನಾವು ಏನೂ ಹೇಳುವ ಮಟ್ಟದಲ್ಲಿಲ್ಲ, ಗೋಪ್ಯವಾದ ವಿಚಾರವನ್ನು ನಿಮಗೆ ಆ ಮೇಲೆ ತಿಳಿಸುತ್ತೇನೆ ಮಾತನಾಡಬೇಕು ಎಂದು ಹೇಳಿದರು. ಆದರೆ ಅವರು ಹೇಳಿದ ಗೋಪ್ಯವಾದ ವಿಚಾರಕ್ಕೂ ನಮ್ಮನ್ನು ಕರೆಯಲಿಲ್ಲ. ಅಷ್ಟೊತ್ತೇ ಬೆಳಿಗ್ಗೆ ೮ಗಂಟೆಗೆ ನೀವೇ ನೀರು ಬಿಡುವುದಕ್ಕೆ ಶುರು ಮಾಡಿದ್ದೀರಿ. ನೀವು ಹೀಗೆ ಬೆಳಿಗ್ಗೆ ೮ಗಂಟೆಗೆ ನೀರು ಬಿಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ನಾನು ತಮಿಳುನಾಡಿಗೆ ನೀರು ಬಿಡಬಾರದು ಎನ್ನತಕ್ಕಂಥ ಸ್ಪಷ್ಟ ನಿರ್ಧಾರವನ್ನು ಹೊಂದಿರುವವನು. ನ್ಯಾಯಮಂಡಳಿಯನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ಹೇಳತಕ್ಕಂಥವನು. ಈ ನಿರ್ಧಾರಗಳಲ್ಲಿ ಭಿನ್ನಾಭಿಪ್ರಾಯವಿಲ್ಲ. ತಾವು ನೀರು ಬಿಡುವ ನಿರ್ಧಾರ ಯಾವರೀತಿಯಾಗಿ ಆಯಿತು ಅಂದರೆ, ಕರುಣಾನಿಧಿಯವರೇ ಫೋನ್ ಮಾಡಿ ಸ್ವಲ್ಪ ತಡೆಯಿರಿ ಇನ್ನೆರಡು ದಿವಸಗಳ ನಂತರ ನಮಗೆ ನೀರು ಬಿಡಿ ಎಂದು ಹೇಳಿದರೆ, ಇಲ್ಲ ಇಲ್ಲ ಆಗುವುದಿಲ್ಲ ನಿಮಗೆ ನೀರು ಬಿಡುವುದಕ್ಕೆ ನಾವು ರೆಡಿ ಇದ್ದೇವೆ.... ನೀವು ಹಾಗೆಲ್ಲಾ ಸಧ್ಯಕ್ಕೆ ನೀರು ಬಿಡಬೇಡಿ ಎಂದು ದಯಮಾಡಿ ಹೇಳಬೇಡಿ. ನಾವು ನಮ್ಮ ಮುಖ್ಯಮಂತ್ರಿ ನಮ್ಮ ರಾಜ್ಯ ಎಲ್ಲವೂ ತಯಾರಿಗಿದ್ದೇವೆ. ಕರುಣಾನಿಧಿಯವರು

ಪ್ರಧಾನಿಯವರ ಜೊತೆಗೆ ಮಾತುಕತೆ ಮಾಡಿ ರಾಜ್ಯದ ಜನತೆಗೆ ತಿಳಿಸಿ ಹೇಳುವವರೆಗೂ ನೀವು ತಡೆಯಲ್ಲಿಲ್ಲ. ನೀವು ತರಾತುರಿ ಇಂದ ಒಂಟಿಕಾಲಿನ ಮೇಲೆ ನೀವು ನೀರು ಕೊಡುವುದಕ್ಕೆ ನಿಂತಿದ್ದೀರಿ. ಅಂದಮೇಲೆ ನಿಮಗೆ ಅಷ್ಟು ಅತುರವಾದರೂ ಏನಿತ್ತು? ಒಂದು ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಯವರು ನೀರು ಬಿಡಲು ನಮಗೆ ಪ್ರಧಾನಿಯವರು ಹೇಳಲಿಲ್ಲ ಎಂದು ಹೇಳುತ್ತಾರೆ. ಯಾರೋ ಒಬ್ಬರು ಹೇಳಿದ್ದಾರೆ ಎಂದು ಹೇಳುತ್ತಾರೆ. ಪ್ರಧಾನಿಯವರು ಹೇಳಿದಾಕ್ಷಣ ನೀರು ಬಿಟ್ಟಿದ್ದೀರಿ ಎಂಬುದಕ್ಕೆ ಅವರು ಹೇಳಿಲ್ಲ ಇನ್ನೊಬ್ಬರು ಹೇಳಿರುವುದು ನಿಜ ಎಂದು ಹೇಳಿದ್ದಾರೆ. ಅಂದರೆ ಇನ್ನೊಬ್ಬ ವ್ಯಕ್ತಿ ಯಾರು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಅದರಲ್ಲಿ ಬೇರೆ ಮಾತಿಲ್ಲ. ಹಿಂದೆ ಒಂದು ಮಾತನ್ನು ಹೇಳಿದ್ದೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು, ಅವರು ತಮಿಳುನಾಡಿಗೆ 5-6ಟಿಎಂಸಿ ನೀರು ಬಿಟ್ಟು ಜಯಿಸಿಕೊಂಡರು. ಇನ್ನು ಯಾರಾದರೂ ಮುಖ್ಯಮಂತ್ರಿಯಾಗಿ ನೀರು ಬಿಟ್ಟದ್ದರೆ ಅವರ ಚರ್ಮ ಸುಲಿದು ಪಾದರಕ್ಷೆ ಮಾಡಿಕೊಳ್ಳುತ್ತಿದ್ದರು ಎಂದು ಹೇಳಿದ್ದೆ. ಹೆಣಹಾಕಿ ಬಿಟ್ಟುಬಿಡುತ್ತಿದ್ದರು. ಆದರೆ ಆಗ ಧಾರಾಳವಾಗಿ ಜನರು ಸುಮ್ಮನೆ ಇದ್ದರು. ತದನಂತರ ಜನರು ನಿಮಗೆ ಓಟುಕೊಟ್ಟರು, ನೀವು ಗೆದ್ದಿದ್ದೀರಿ ಎಂಬ ಮಾತೆಲ್ಲವೂ ನಿಜವೇ. ನಿಮಗೆ 16ಜನ ಜನತಾದಳದ ಶಾಸಕರು ಇದ್ದಾರೆ ಸಂತೋಷವೇ. ಆಮೇಲೆ ಪ್ರಧಾನಿಯಾಗಿ ಮಾನ್ಯ ದೇವೇಗೌಡರು ಆದರು. ಅದನ್ನು ನೋಡಿದಾಗ ಜನರು ಈಗ ಯಾರೂ ನಿಮ್ಮನ್ನು ಕೇಳುತ್ತಿಲ್ಲವೇ? ನಾನು ಬೆಳಿಗ್ಗೆ ಯಾರ ಹತ್ತಿರವೋ ಮಾತನಾಡುತ್ತಿದ್ದೆ. ನಾನು ಮಹಾಲಕ್ಷ್ಮಿಪುರಂನಿಂದ ಇಲ್ಲಿಗೆ ಬರುವುದು. ದಾರಿಯಲ್ಲಿ ಒಬ್ಬರಾದರೂ ನನ್ನನ್ನು ನಿಲ್ಲಿಸಿ ನೀವು ಶಾಸನಸಭೆಗೆ ಹೋದರೆ ನಿಮ್ಮ ಕಾರಿಗೆ ಬೆಂಕಿ ಇಡುತ್ತೇವೆಂದು ಯಾರಾದರೂ ಹೇಳಿದ್ದರೆ ಜನರಲ್ಲಿ ಪ್ರಜ್ಞೆ ಬಂದಿದೆ ಎಂದು ಹೇಳಬಹುದಾಗಿತ್ತು. ನಾವೆಲ್ಲರೂ ಕಾರಿನಲ್ಲಿ ಸಲೀಸಾಗಿ ಓಡಾಡುತ್ತಲೇ ಇದ್ದೇವೆ. ನೀವು ಗೆದ್ದು ಕೂಡ ಬಂದಿದ್ದೀರಿ. ಅಂದರೆ ರಾಜ್ಯಕ್ಕೆ ಮಾಯ, ಮಾಟ, ಮಂತ್ರ ಏನಾದರೂ ಮಾಡಿಸಿದ್ದೀರೋ? ಅಥವಾ ಜನರಲ್ಲಿ ಅಂಥಹ ಒಂದು ಪ್ರಜ್ಞೆ ಇಲ್ಲವೇ? ನೀವು ಎಷ್ಟು ನೀರು ಬಿಟ್ಟರೂ ಯಾರೂ ಮಾತನಾಡುವುದಿಲ್ಲವೇ? ಇಲ್ಲಿ ನಾನು ರಾಜಕೀಯ ಮಾಡಲು ಹೋಗುತ್ತಿಲ್ಲ. ಮಂಡ್ಯವನ್ನು ತೆಗೆದುಕೊಳ್ಳೋಣ. ಅಲ್ಲಿಂದ ಗೆದ್ದು ಬಂದಿದ್ದೀರಿ ನೀವು. ಗೆದ್ದಿರುವವರ ಬಗ್ಗೆ ನನ್ನ ವಿರೋಧವೇ ಇಲ್ಲ. ಆದರೆ ಹಗಲೂ ರಾತ್ರಿ ನೀರು ಬಿಟ್ಟಿದ್ದೀರಿ, ನೀರು ಬಿಟ್ಟಿದ್ದೀರಿ ಎಂದು ಹೋರಾಟ ಮಾಡಿದಂಥ ಮಾದೇಗೌಡರು ಸೋತರು. ಅಲ್ಲಿ ಪರಿಸ್ಥಿತಿ ಏನಾಗಿದೆ? ನೀರು ಬಿಟ್ಟು ಅನ್ಯಾಯ ಮಾಡಿದ್ದೀರಿ ನಿಮ್ಮ ದೃಷ್ಟಿಯಲ್ಲಿ ನಾವು ನೀರು ಬಿಟ್ಟಿದ್ದಕ್ಕೆ ಜನರು ನಮಗೆ ಮುದ್ರೆ ಕೊಟ್ಟಿದ್ದಾರೆ ಎಂದು ಅರ್ಥವೇ? ವೀರಪ್ಪನ್ ಕೂಡ ನನ್ನನ್ನು ಬಿಡುಗಡೆ ಮಾಡಿದರೆ ತಮಿಳುನಾಡಿನಲ್ಲಿ ನಾನು ಮುಖ್ಯಮಂತ್ರಿಯಾಗುತ್ತೇನೆ ಎಂದು ಹೇಳಿದ್ದಾನಂತೆ. ಜನರು ಅವನಿಗೂ ಓಟು ಕೊಡುತ್ತಾರೆ. ಪೂಲನ್‌ದೇವಿಗೂ ಜನರು ಓಟು ಕೊಟ್ಟಿದ್ದಾರೆ. ಜನರ ತೀರ್ಪನ್ನು ನಾವು ಪ್ರಶ್ನೆ ಮಾಡಲು ಆಗುತ್ತದೆಯೇ? ನಾಳೆ ವೀರಪ್ಪನ್ ನಿಂತುಕೊಂಡರೂ ಓಟು ಕೊಡಬಹುದು. ಒಬ್ಬ ರೌಡಿ ಜಯರಾಜ್ ನಿಂತಾಗ 10 ಸಾವಿರ ಓಟು ಕೊಟ್ಟರು

ಕರ್ನಾಟಕದಲ್ಲಿ. ಅಂದರೆ ಓಟ್ ತೆಗೆದುಕೊಳ್ಳುವ ತಂತ್ರಗಾರಿಕೆ ಚುನಾವಣೆ ವ್ಯವಸ್ಥೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ ಅದು ಬೇರೆ ರೂಪ ತಾಳುತ್ತದೆ. ನೀವು ಹೇಳುವುದೇನು, ನಮ್ಮ ದೃಷ್ಟಿಯಲ್ಲಿ ನೀರು ಬಿಟ್ಟಿದ್ದೇವೆ, ನಮಗೆ ಓಟ್ ಕೊಟ್ಟಿದ್ದಾರೆ, ಇನ್ನೂ ನೀರು ಬಿಡುತ್ತೇವೆ ನಮ್ಮ ಸರ್ಕಾರ ಉಳಿಸುತ್ತಾರೆ. ನಾನು ಈ ಸಭೆಯ ಮೂಲಕ ಕರ್ನಾಟಕದ ಜನತೆಯ ಪಾದಗಳಲ್ಲಿ ನಮಸ್ಕಾರ ಮಾಡಿ ಹೇಳುತ್ತೇನೆ, ತಮಗೆ ಶಕ್ತಿ ಬರಲಿ ಶೌರ್ಯ ಬರಲಿ, ರಾಜ್ಯಕ್ಕೆ ದ್ರೋಹ ಮಾಡುವಂಥ ಪರಿಸ್ಥಿತಿ ಬಂದಾಗ ತಾವು ಸೆಟೆದು ನಿಂತು ಪ್ರತಿಭಟನೆ ತೋರಿಸುವಂತಹ ಶಕ್ತಿ ತಮಗೆ ಕೊಡಲಿ ಎಂದು ಈ ಸಭೆ ಮೂಲಕ ಈ ನಾಡಿನ ಪರಮಪವಿತ್ರವಾಗಿ ಅತ್ಯುನ್ನತವಾದ ಸಭೆಯ ಮೂಲಕ ಈ ನಾಡಿನ ಜನತೆಯನ್ನು ನಾನು ಹೇಳುತ್ತೇನೆ. ಜನತೆ ನಿಮಗೆ ಯಾವರೀತಿ ಮತ ಕೊಡುತ್ತಾರೋ ಬೆಂಬಲ ಕೊಡುತ್ತಾರೋ ಆದರೆ ನಮ್ಮ ಆತ್ಮ ಒಂದಿದೆಯಲ್ಲಾ, ಜನ ಬಿಟ್ಟುಬಿಡೋಣ, ಮತ ಬಿಟ್ಟುಬಿಡೋಣ, ಸತ್ಯಪ್ರಮಾಣವಾಗಿ ನಾನೂ ನೀವೂ ಮಹಾದೇಶ್ವರನ ಭಕ್ತರಾಗಿದ್ದೇವೆ. ಒಂದು ದೇವಸ್ಥಾನಕ್ಕೆ ಹೋಗೋಣ ನಾನು ನಡೆದುಕೊಂಡಿರುವ ರೀತಿನೀತಿ ಸರಿಯೆಂದು ಹೇಳಿಬಿಟ್ಟರೆ ನಾನು ನಿಮಗೆ ದೀರ್ಘದಂಡ ನಮಸ್ಕಾರ ಮಾಡಿಬಿಡುತ್ತೇನೆ. ಮೊದಲಿನಿಂದಲೂ ಕರ್ನಾಟಕಕ್ಕೆ ಕೇಂದ್ರ ಅನ್ಯಾಯ ಮಾಡುತ್ತಿದೆ, ತಮಿಳುನಾಡಿಗೆ ಕೇಂದ್ರ ಹೆದರುತ್ತಿದೆ. ತಮಿಳುನಾಡು ಧ್ವನಿಯೆತ್ತಿದರೆ ಕೇಂದ್ರ ನಡುಗುತ್ತದೆ. ಸಂಯುಕ್ತರಂಗ ಸರ್ಕಾರ ಬಂದರೂ ಅಷ್ಟೆ, ಕಾಂಗ್ರೆಸ್ ಸರ್ಕಾರ ಇದ್ದರೂ ಅಷ್ಟೆ. ಯಾರೇ ಪ್ರಧಾನಮಂತ್ರಿ ಇದ್ದರೂ ಕೇಂದ್ರ ಸರ್ಕಾರ ತಮಿಳುನಾಡಿಗೆ ಹೆದರುತ್ತದೆ. ಇವತ್ತು ಅವತ್ತೂ ಜಯಲಲಿತಾರಿಗೆ ಹೆದರಿ ಅಂದಿನ ಪ್ರಧಾನಿಗಳಾಗಿದ್ದ ಶ್ರೀ ನರಸಿಂಹರಾಯರು ಮುಖ್ಯಮಂತ್ರಿ ದೇವೇಗೌಡರಿಗೆ ಹೇಳಿ 6ಟಿಎಂಸಿ ನೀರು ಬಿಡಿಸಿದರು. ಮೊದಲು ಕರುಣಾನಿಧಿಯವರನ್ನು ಓಲೈಸುವುದಕ್ಕಾಗಿ ವಿ.ಪಿ.ಸಿಂಗ್‌ರವರು ಕರ್ನಾಟಕದ ಜನತೆಯ ಮರಣಶಾಸನದ ನ್ಯಾಯಮಂಡಲಿ ರಚನೆ ಮಾಡಿದರು. ಇಲ್ಲಿನವರೆಗೂ ಒಂದಲ್ಲ ಒಂದು ರೀತಿಯಲ್ಲಿ ಹೆಜ್ಜೆ ಹೆಜ್ಜೆಗೂ ಮೋಸ ಮಾಡುತ್ತಿದ್ದಾರೆ. ನನಗನ್ನಿಸುತ್ತದೆ, ಇಷ್ಟೆಲ್ಲಾ ನಾವು ಚರ್ಚೆ ಮಾಡಿದ್ದೇವೆ, ಯಡಿಯೂರಪ್ಪನವರು ಮಾತನಾಡಿದ್ದಾರೆ, ಖರ್ಗೆ ಮಾತನಾಡಿದ್ದಾರೆ, ನಂಜೇಗೌಡರು ಮಾತನಾಡುವವರಿದ್ದಾರೆ. ಉದ್ದಗಲಕ್ಕೂ ಎಲ್ಲಾ ವಿಚಾರ ಹೇಳಿದಾಗ ವಿರೋಧ ಪಕ್ಷದವರು ಮಾತನಾಡುತ್ತಾರೆ ನಾವು ಅದಕ್ಕೊಂದು ಉತ್ತರ ಕೊಟ್ಟುಬಿಡೋಣ ಅನ್ನುವ ರೀತಿ ಆಗುವುದಾದರೆ ಈ ಸಮಸ್ಯೆ ಸಂಪೂರ್ಣ ಬಗೆಹರಿಯುವುದಿಲ್ಲ. ಈ ಮಾತನ್ನು ಅತ್ಯಂತ ಕಳಕಳಿಯಿಂದ ಹೇಳುತ್ತಾ ಅಧ್ಯಕ್ಷರೇ, ಇವತ್ತು ಸುಪ್ರೀಂಕೋರ್ಟಿಗೆ ಅವರು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಸಿ ಹತ್ತು ನಿಮಿಷವಾಗಿಲ್ಲ ತಕ್ಷಣ ದೆಹಲಿಯಿಂದ ಫೋನ್ ಬರುತ್ತದೆ. ನೀರನ್ನು ಬಿಡುಗಡೆ ಮಾಡಿ ಎಂದು ತರಾತುರಿಯಿಂದ ನೀರು ಬಿಡುವುದಕ್ಕೆ ನೀವು ಪ್ರಯತ್ನಪಡುತ್ತಿದ್ದೀರಿ, ಆಯಿತು, ಸರ್ವೋಚ್ಚ ನ್ಯಾಯಾಲಯ ಏನು ತೀರ್ಪು ಕೊಡುತ್ತಿತ್ತು? ಕಾಯಬಹುದಿತ್ತಲ್ಲಾ, ಅವರು ಅರ್ಜಿ ಹಾಕಿದ್ದಾರೆ, ನೀವು ಪ್ರತಿ ಅರ್ಜಿ ಹಾಕಬೇಕಾಗಿತ್ತು, ನಮ್ಮಲ್ಲಿ ನೀರಿಲ್ಲ, ಅವರು ಹಾಕಿರುವ ಅರ್ಜಿಯಲ್ಲಿ ಈ ತರಹ ಇದೆ, ಅಂತಹ ಅರ್ಜಿ ಹಾಕಿಸುವ ವ್ಯವಸ್ಥೆ ಮಾಡಿದಿರೋ ನೀವು? ಅವೆಲ್ಲಾ ಬಿಟ್ಟು ನ್ಯಾಯಾಲಯದ ಮುಂದೆ ಹೋಗುವುದನ್ನೂ

ಬಿಟ್ಟು ತರಾತುರಿಯಿಂದ ನಮ್ಮ ಜಲಾಶಯಗಳ ಬಾಗಿಲುಗಳನ್ನು ಎತ್ತಿನೀರು ಬಿಡುವ ವ್ಯವಸ್ಥೆ ಮಾಡಿದಿರಿ. ಇತಿಹಾಸದಲ್ಲಿ ಚರಿತ್ರೆಯಲ್ಲಿ ನೀವೆಲ್ಲಾ ಹೋಗುತ್ತೀರಿ, ನಿಮ್ಮ ಬಗ್ಗೆ ವೈಯಕ್ತಿಕವಾಗಿ ಕೆಟ್ಟಭಾವನೆ ಖಂಡಿತ ಇಲ್ಲ. ಚರಿತ್ರೆಯಲ್ಲಿ ನಿಮ್ಮಂಥವರು ಹೋಗಬಾರದು ಇಂಥವರ ಕಾಲದಲ್ಲಿ ಹೀಗೆ ನಡೆಯಿತು ಎಂದು ಕೆಟ್ಟಪಂಕ್ತಿಯಲ್ಲಿ ಸೇರಬಾರದು. ಬಹಳ ಮನನೊಂದು ಈ ಮಾತು ಹೇಳುತ್ತಿದ್ದೇನೆ, ಕರ್ನಾಟಕದ ಜನತೆಗೆ ಪರಮ ಅನ್ಯಾಯ ಮಾಡುತ್ತಿದ್ದೀರಿ, ಈ ಸದನದಲ್ಲಿ ಮಾಡಿದ ಎಲ್ಲಾ ನಿರ್ಣಯಗಳನ್ನೂ ನೀವು ಗಾಳಿಗೆ ತೂರಿದಿರಿ? ಶ್ರೀ ಬಂಗಾರಪ್ಪನವರ ಮೊಯಿಲಿಯವರ ಮತ್ತು ಈಗ ಮಾಡಿದ ನಿರ್ಣಯಗಳೆಲ್ಲಾ ಏನಾದುವು? ಅವಕ್ಕೆ ಏನು ಬೆಲೆ ಕೊಟ್ಟಿದ್ದೀರಿ? ಈ ಸದನಕ್ಕೆ ಏನು ಬೆಲೆ ಕೊಟ್ಟಿದ್ದೀರಿ? ಎಲ್ಲಾ ನಿರ್ಣಯವನ್ನೂ ಗಾಳಿಗೆ ತೂರಿ ನಿಮ್ಮದೇ ಆದ ನಿರ್ಧಾರಕ್ಕೆ ಬರಬೇಕಾದರೆ ಕಾರಣವೇನು? ಬೆಳಗ್ಗೆ 8 ಗಂಟೆಗೆ ನೀರು ಬಿಡಬೇಕಾದರೆ, ನಾವೆಲ್ಲಾ ಮನೆಯಲ್ಲಿದ್ದೆವು, ಕರೆದು ಪರಿಸ್ಥಿತಿ ಏನು ಎಂದು ವಿವರಣೆ ನೀಡಿದಿರಾ? ಅಂದರೆ ವಿರೋಧ ಪಕ್ಷ ಏಕೆ ಬೇಕು? ಶಾಸನಸಭೆ ಏಕೆ ಬೇಕು? ನಿಜವಾಗಿಯೂ ಈ ರಾಜ್ಯದ ಜನತೆಗೆ ಮಾಡಿದ ಮೋಸ ಇದು, ಇದೇ ಸಂದರ್ಭದಲ್ಲಿ ವಿರೋಧಪಕ್ಷದ ನನ್ನ ಎಲ್ಲಾ ಸ್ನೇಹಿತರಿಗೂ ಕೈಮುಗಿದು ಹೇಳುತ್ತಿದ್ದೇನೆ, ನಾವು ಒಟ್ಟಾರೆ ಈ ಸರ್ಕಾರ ಮಾಡಿರುವ ಘೋರ ಅನ್ಯಾಯಕ್ಕೆ ವಿರುದ್ಧ ತೀವ್ರವಾದ ಹೋರಾಟ ಆರಂಭ ಮಾಡುವುದಕ್ಕೆ ಸಿದ್ಧರಾಗಬೇಕು. ನಿಮ್ಮ ಜೊತೆಯಲ್ಲಿ ನಾನು ಭುಜಕ್ಕೆ ಭುಜ ಕೊಟ್ಟು ನಿಲ್ಲುತ್ತೇನೆ. ಈ ನಾಡಿನ ಜನ ನಿಲ್ಲುತ್ತಾರೆ. ಎಲ್ಲಾ ವಿರೋಧಪಕ್ಷಗಳೂ ಒಂದೇ ವೇದಿಕೆಯಲ್ಲಿ ಈ ಅನ್ಯಾಯವನ್ನು ಪ್ರತಿಭಟಿಸಲು ಈ ಸದನದ ಹೊರಗಡೆ ಸೇರಿ ಒಂದು ವೇದಿಕೆ ಮಾಡಿ ಈ ಸರ್ಕಾರ ರಾಜ್ಯದ ಜನತೆಗೆ ಮಾಡಿದ ಮೋಸದ ಬಗ್ಗೆ ರಸ್ತೆ ಬೀದಿಗಳಲ್ಲಿ ಚಳುವಳಿ ಮಾಡಿ ಈ ಸರ್ಕಾರಕ್ಕೆ ನಾವು ಚುನಾವಣೆಯಲ್ಲಿ ಗೆದ್ದಿದ್ದೇವೆ, ಜನ ಮತ ಕೊಟ್ಟಿದ್ದಾರೆ ಅನ್ನುವ ಅಹಂಭಾವ ಹಮ್ಮು ಏನಿದೆ ಅದನ್ನು ಇಳಿಸಬೇಕಾದರೆ ಈ ನಾಡಿನ ಜನತೆಗೆ ನಾವು ಪ್ರೀತಿಗೌರವಗಳಿಂದ ಸೇವೆ ಮಾಡಬೇಕಾದರೆ ನಾವೆಲ್ಲರೂ ಜೈಲಿಗೆ ಹೋದರೂ ಚಿಂತೆಯಿಲ್ಲ, ಜೈಲಿಗೆ ಹೋಗೋಣ ರಸ್ತೆಯಲ್ಲಿ ನಿಲ್ಲೋಣ, ಏನಾಗುತ್ತದೆ ಅಂತಿಮ ಎಲ್ಲಿಗೆ ತಲುಪುತ್ತದೆಯೋ ತಲುಪಲಿ, ರಾಜ್ಯದ ಜನತೆಗಾಗಿ ನಿಲ್ಲೋಣ ಎಂಬ ಎಚ್ಚರಿಕೆ ನೀಡಿ ತಮಗೂ ನಾನು ಕೈಮುಗಿದು ನಿಮ್ಮಲ್ಲೇನೇ ಭೇದಭಾವನೆ ಇದ್ದರೂ ಚಿಂತೆಯಿಲ್ಲ ಈ ನಿರ್ಧಾರಕ್ಕೆ ತಾವು ಬರಬೇಕೆಂದು ಕಳಕಳಿಯಿಂದ ತಮಗೆ ನಾನು ಹೇಳಿ, ನಾನಂತೂ, ನನ್ನ ಜೊತೆ ಒಬ್ಬರು ಬರಬಹುದು ಇಬ್ಬರು ಬರಬಹುದು ಐವರು ಬರಬಹುದು, ನನ್ನ ಕೊನೆ ರಕ್ತ ಇರುವರೆಗೂ ಈ ನಾಡಿನ ಜನತೆಗಾಗಿ ನನ್ನ ಹೋರಾಟ ಸಿದ್ಧ, ಆ ಹೋರಾಟಕ್ಕೆ ನನ್ನ ಬೆಂಬಲ, ಇಲ್ಲ ನಿಮ್ಮ ಹೋರಾಟಕ್ಕೆ ನನ್ನ ಬೆಂಬಲ. ನಾನು ಸಿದ್ಧನಿದ್ದೇನೆ. ಒಂದೇ ವೇದಿಕೆಯಲ್ಲಿ ಬಿಜೆಪಿ ಕಾಂಗ್ರೆಸ್ ಕನ್ನಡ ಚಳುವಳಿ ಕಮ್ಯುನಿಸ್ಟ್ ಎಲ್ಲಾ ಮರೆಯೋಣ, ಈ ರಾಜ್ಯದ ಜನತೆಯ ಕಲ್ಯಾಣಕ್ಕಾಗಿ ಹಿತಕ್ಕಾಗಿ ನಾವೆಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕೆಂದು ಹೇಳಿ ಜನತೆಯಲ್ಲಿ ನಾನು ಕಳಕಳಿಯಿಂದ ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇನೆ. ನೀವು ಸುಮ್ಮನೆ ಕೂತುಕೊಂಡರೆ ಆಗುವುದಿಲ್ಲ ಸುಮ್ಮನೆ ಕುಳಿತರೆ ನಾವು ಚುನಾವಣೆ ಗೆದ್ದಿದ್ದೇವೆ, ನಮಗೆ

ಮತ ಕೊಟ್ಟಿದ್ದಾರೆ ಆದ್ದರಿಂದ ನೀರು ಬಿಡುತ್ತೇವೆ, ನಾಳೆ ವಿಧಾನಸೌಧನೂ ಮಾರಿಕೊಳ್ಳುತ್ತೀರಿ, ಏಕೆ, ಜನ ಓಟ್ ಕೊಟ್ಟಿದ್ದಾರೆ. ಅದರಲ್ಲಿ ತಪ್ಪೇನೂ ಇಲ್ಲ. ಆ ಪರಿಸ್ಥಿತಿಗೆ ತಾವು ಇಳಿಯುತ್ತೀರಿ ಎಂಬ ಮಾತು ಹೇಳಿ, ಕೊನೆಯದಾಗಿ ಅನುಕಂಪ ಕರುಣೆ ನಿಮ್ಮ ಮೇಲೆ, ಒಬ್ಬ ಒಳ್ಳೆಯ ಜೀವ ಸ್ನೇಹಿತರು ಅತ್ಯಂತ ಸ್ನೇಹಜೀವಿ ಆದರೆ ಈ ಪಾಪದ ಕೆಲಸಕ್ಕೆ ಬಿದ್ದರಲ್ಲಾ ಎಂದು ಬಹಳ ನೋವಿನಿಂದ ಹೇಳಿ ನನ್ನ ಮಾತನ್ನೂ ಮುಗಿಸುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೆ, ಈ ದಿವಸ ತಾವು ಇಂತಹ ಮಹತ್ವದ ಚರ್ಚೆಗೆ ವಿಶೇಷವಾದಂತಹ ತಮ್ಮ ಅಧಿಕಾರವನ್ನು ಮಾನ್ಯ ಸಭಾ-ನಾಯಕರ ಒಪ್ಪಿಗೆ ಪಡೆದು 159ನೇ ನಿಯಮಗಳಲ್ಲಿ ತಾವು ಉಪಯೋಗ ಮಾಡಿದ್ದೀರಿ ಇದಕ್ಕೆ ವಿಶೇಷವಾಗಿ ಕೃತಜ್ಞತೆಗಳನ್ನು ತಮಗೆ ಸಮರ್ಪಿಸಬಯಸುತ್ತೇನೆ.

ಅಧ್ಯಕ್ಷರು:- ನೀವು ಮಾತನಾಡುವುದರಲ್ಲಿ it amounts to the admission of th Motion itself.

SRI M.VEERAPPA MOILY:- Yes, we are at the stage of 164. According to this, there is no preliminary submission. 159 ರಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಇಲ್ಲ. Conditions for admissibility - all that is over. ಅದನ್ನು ತಾವು ಅಡ್ಮಿಟ್ ಮಾಡುವಾಗಲೇ ಕನ್‌ಸಿಡರ್ ಮಾಡಬೇಕು.

ಅಧ್ಯಕ್ಷರು:- ಬೆಳಿಗ್ಗೆ ನಾನು ಪ್ರಾರಂಭ ಮಾಡಿದ ತಕ್ಷಣವೇ ಹೇಳಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಇರಬಹುದು But there is no provision for preliminaery submission. ತಾವು ಪುನಃ ಎಕ್ಸಾಮಿನ್ ಮಾಡಿ. I do not mind. We are now at the stage of 164.

MR.SPEAKER:- Let me also examine.

SRI M.VEERAPPA MOILY:- We have gone through it. Yesterday, we have discussed all these matters.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಬೆಳಿಗ್ಗೆ ಮಾತನಾಡುವಾಗ ಬಹುಶಃ ತಾವು ಇರಲಿಲ್ಲ. ಮಾನ್ಯ ಉಪಾಧ್ಯಕ್ಷರು ಇದ್ದರು. ಆಗ ಬಿಡಿಸಿ ಬಿಡಿಸಿ ಹೇಳಿದೆ 159 ಅನ್ನು ನಾನು ಓದುವಾಗಲೇ ಹೇಳಿದೆ. ಏಕೆಂದರೆ ಅಡ್ಮಿಸಿಬಿಲಿಟಿ ಮುಗಿದಿದೆ ರೂಲ್ 165ರ ಕೆಳಗೆ ಕೊನೆಗೆ ಈ ಸದನದ ಸಮ್ಮತಿಯನ್ನು ಕೇಳಬೇಕಾಗುತ್ತದೆ. ಅದಕ್ಕಾಗಿ ತಮ್ಮ ಮನವನ್ನು ಒಲಿಸುವುದಕ್ಕೋಸ್ಕರ......

ಅಧ್ಯಕ್ಷರು:- 163 ಅನ್ನು ಕ್ರಾಸ್ ಮಾಡಿ 164ಕ್ಕೆ ಹೋಗುತ್ತಿದ್ದಿರಿ ತಾವು ? 163 ಏನು

ಹೇಳುತ್ತದೆ ಎಂಬುದು ನನಗೆ ಗೊತ್ತಿಲ್ಲ. ದಯಮಾಡಿ 163 ಏನು ಹೇಳುತ್ತದೆ ಎಂದು; ಹಾಗಾದರೆ ಅಡ್ಮಿಷನ್ ಆಗುತ್ತದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ಆರ್ಗ್ಯುಮೆಂಟ್ ಬಂದ ಮೇಲೆ ಅದಕ್ಕೆ ನಾನು ಕೇಳಿದೆ. ಕೇಳಿದಾಗ ಸದನ ಪ್ರಸ್ತಾಪ ಮಾಡಿದ......

ಅಧ್ಯಕ್ಷರು:- ಅದಕ್ಕೆ ನಾನು ಬೆಳಿಗ್ಗೆ ಪ್ರಾರಂಭ ಮಾಡಿದ ತಕ್ಷಣ ಹೇಳಿದೆ.

5.20 ಪಿ.ಎಂ.

SRI K.N.NAGE GOWDA:- Under Rule 163, still it is not admitted ಎಂದು ತಾವು ಪ್ರಾರಂಭದಲ್ಲೇ ತಾವು ಹೇಳಿದ್ದೀರಿ.

ಅಧ್ಯಕ್ಷರು:- ನಿನ್ನೆ ನಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದೀರಿ, ಹೌಸ್‌ನಲ್ಲಿ ಕ್ರೈಸಿಸ್ ಆಯಿತು we could not take up the disussion. To provide an alternative. ಅದಕ್ಕೆ ಸಬ್ ಸ್ಟ್ಯಾನ್‌ಟೀವ್ ಮೋಷನ್ ನೋಟೀಸ್ ಕೊಡುತ್ತೇವೆಂದು ಹೇಳಿದಿರಿ. ಆಯಿತು ಕೊಡಿ ಅದನ್ನೇ ತಗೆದುಕೊಳ್ಳೋಣವೆಂದು ಹೇಳಿದ್ದೆವು. It has come almost as an alternative to Adjournment Motion. At the stage of admission, ತಾವು ಏನು ಬೇಕಾದರೂ ಹೇಳಿ ವ್ಯಾಪಕವಾಗಿ ಚರ್ಚೆಯಾಗಲಿ, ಆಮೇಲೆ ನೋಡೋಣವೆಂದು ಹೇಳಿದರೆ you have started putting your words into my mouth you cannot go to 164 crossing 163.

SRI.Y.RAMAKRISHNA:- The discretionery power lies in you and you were kind enough to permit a descussion.

MR.SPEAKER:- I am definitely very kind, not to certain matters. I am prepaerd take all of you into confidence once again, if need be, after the Session is over and if there is any kind of misgivings, in my mind, I am prepared to correct myself.

SRI M.VEERAPPA MOILY:- When we resort to Rule 162, ther is a provision and the Speaker should decide the admissibility of the motion.

MR.SPEAKER:- You are a very senior member and the discussion is on. You are on your legs and I want you to continue. Please go ahead. This is a small

technical problem. If we have to arrive at some inference, I an willing to take all of you into confidence and let us arrive at a proper inference. But on records it should not be shown as a Presiding offecer having been a party to a wrong action.

+ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ):- ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರಾದಂತಹ ಶ್ರೀ ನಾಗೇಗೌಡರು ನೀರಾವರಿ ಸಚಿವರಾದಾಗ ನಾನು ಹೆಚ್ಚು ಸಂತೋಷ ಪಟ್ಟವನು. ಈ ಖಾತೆಯನ್ನು ನನ್ನ ಮಂತ್ರಿಮಂಡಲದಲ್ಲೇ ಅವರಿಗೆ ಕೊಡಬೇಕೆಂಬ ಆಸೆ ನನ್ನ ಮನಸ್ಸಿನಲ್ಲಿ ಇತ್ತು ಆದರೆ ಬೇರೆ ಬೇರೆ ಕಾರಣಗಳಿಂದಾಗಲಿಲ್ಲ. ಬಹಳ ದಕ್ಷತೆ ಮತ್ತು ಇದರ ಬಗ್ಗೆ ಕಳಕಳಿ ಅವರಿಗೆ ಇದೆ. ಮತ್ತು ಪ್ರಾಮಾಣಿಕವಾಗಿ ಸತತವಾಗಿ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡತಕ್ಕಂತಹ ಚಾಕಚಕ್ಯತೆ ಇರತಕ್ಕಂತಹವರು ಇವತ್ತು ನೀರಾವರಿ ಸಚಿವಾರಗಿದ್ದಾರೆ. ಆದ್ದರಿಂದ ತಾವು ನೀರಾವರಿ ಸಚಿವರಾದ ಮೇಲೆ ಮುಖ್ಯ ವಾಗಿ ಕಾವೇರಿ ವಿಚಾರದಲ್ಲಿ ಕೆಲವು ವಿಚಾರಗಳನ್ನು ತಾವೇನು ಇಲ್ಲಿ ನಿನ್ನೆ ವ್ಯಕ್ತಪಡಿಸಿದ್ದೀರಿ ಮತ್ತು ಇದಕ್ಕೆ ಸಂಬಂಧಪಟ್ಟಂತಹ ನಡವಳಿಕೆಗಳನ್ನು ಪರಿಶೀಲನೆ ಮಾಡಿದಾಗ ನೇರವಾಗಿ ತಮಗೆ ವೈಯುಕ್ತಿಕವಾಗಿ ಟೀಕೆ ಮಾಡಲಿಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ಇದೊಂದು ವ್ಯವಸ್ಥೆಯ ಪ್ರಶ್ನೆ. ಈ ವಿಚಾರ ಇವತ್ತಿನದಲ್ಲ 1992 ನೇ ಇಸವಿಗಿಂತಲೂ ಅದಕ್ಕಿಂತಲೂ ಹಿಂದಿನಿಂದಲೂ ಕೂಡ ಕರ್ನಾಟಕಕ್ಕೆ ವಿಶೇಷವಾದಂತಹ ಅನ್ಯಾಯವಾಗಿದೆ. ಅದನ್ನು ಸರಿಪಡಿಸತಕ್ಕಂತಹ ಕೆಲಸ ಸಣ್ಣ ವಿಚಾರ ಅಲ್ಲ. ಕೆಲವು ಸದಸ್ಯರು ಹೇಳಿದ್ದರು ಬಹುಶಃ ಅವರಿಗೆ ಪೂರ್ತಿ ಅದರ ಹಿನ್ನೆಲೆ ಗೊತ್ತಿದೆಯೋ ಇಲ್ಲವೋ ಏಕೆಂದರೆ ಯಾರು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದಾರೋ ಇಲ್ಲವೋ ಏಕೆ ಮಾಡಲಿಲ್ಲ ಎಂದು. ಕೇಳುವುದು ಬಹಳ ಸುಲಭ. ಆದರೆ ನೂರಾರು ವರ್ಷಗಳ ಒಂದು ಹಿಮಾಲಯದಂತೆ ಆದಂತಹ ಒಂದು ಅನ್ಯಾಯವನ್ನು ಇವತ್ತು ಒಂದೇ ಸಲ ಸರಿಪಡಿಸುವುದಕ್ಕೆ ಯಾರಿಗೂ ಆಗುವುದಿಲ್ಲ. ಅದು ಅಷ್ಟು ಸುಲಭ ಕೂಡ ಇಲ್ಲ. ಅದಕ್ಕೆ ಸಾಕಷ್ಟು ಇತಿಮಿತಿಗಳು ಇವೆ. ಆದರೆ ಇದನ್ನು ಟ್ರಿಬ್ಯುನಲ್‌ನಲ್ಲಿ ಬಂದ ಮೇಲೆ ಒಂದೊಂದು ಶಬ್ದಕ್ಕೂ ಕೂಡ ಬಹಳ ಮಹತ್ವ ಇರುತ್ತದೆ. ನಾನು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವ ಮೊದಲು ಒಂದು ಸೂಚನೆಯನ್ನು ಸರಕಾರಕ್ಕೆ ಕೊಡಬಯಸುತ್ತೇನೆ. ಏನೇ ವಿಚಾರ ಇದರಲ್ಲಿ ಬರಲಿ ನಾವು ಒಂದು ವ್ಯವಸ್ಥೆ ಮಾಡಿದ್ದೇವೆ ಆ ವ್ಯವಸ್ಥೆ ಸರಿ ಇದೆಯೋ ಇಲ್ಲೋ ಅದನ್ನು ಪುನರ್ ವಿಮರ್ಶೆ ಮಾಡುವುದು ಪುನರ್ ರಚನೆ ಮಾಡತಕ್ಕಂಥಾದ್ದು ತಮಗೆ ಬಿಟ್ಟಿದ್ದು. ರಾಜ್ಯ ಮಟ್ಟದಲ್ಲಿ ಲೀಗಲ್ ಸೆಲ್ ಮಾಡಿದ್ದೇವೆ. ಆಮೇಲೆ ಟೆಕ್ನಿಕಲ್ ಸೆಲ್ ಮಾಡಿದ್ದೇವೆ. ಲೀಗಲ್ ಸೆಲ್ ಟೆಕ್ನಿಕಲ್ ಸೆಲ್‌ಗೆ ಕೊಟ್ಟಂತಹ ಅಭಿಪ್ರಾಯಗಳನ್ನು ಟೆಕ್ನಿಕಲ್ ಸೆಲ್, ಟೆಕ್ನಿಕಲ್ ಸೆಲ್ ಲೀಗಲ್ ಸೆಲ್‌ಗೆ ಕೊಟ್ಟ ಅಭಿಪ್ರಾಯಗಳನ್ನು ಲೀಗಲ್‌ಸೆಲ್, ಈ ಎರಡೂ ಅಭಿಪ್ರಾಯಗಳನ್ನು ಈ ಕಾವೇರಿ ವಿಚಾರಕ್ಕೆ ಸಂಬಂಧಪಟ್ಟಂತಹ ಮುಖ್ಯ ಮಂತ್ರಿಯವರ

ಅಧ್ಯಕ್ಷತೆಯಲ್ಲಿರತಕ್ಕಂತಹ ಸಚಿವ ಸಂಪುಟದ ಉಪಸಮಿತಿಯವರು ವಿಚಾರ ಮಾಡಿದ ಮೇಲೆ ಸಚಿವ ಸಂಪುಟದ ಸಮಿತಿಗೆ ಹೋಗುತ್ತದೆ. ಯಾವುದೇ ಸಣ್ಣ ವಿಚಾರವೇ ಇರಬಹುದು. ಇದಕ್ಕೆ ಹೈಪವರ್ ಸಮಿತಿ ಇದೆ. ಇದರಲ್ಲಿ ವಿರೋಧ ಪಕ್ಷದ ನಾಯಕರಗಳು ಇರುತ್ತಾರೆ. ಆ ಬೇಸಿನ್‌ನಲ್ಲಿರತಕ್ಕಂತಹ ಶಾಸಕರು ಮತ್ತು ಸಂಸತ್ ಸದಸ್ಯರ ಸಮಿತಿ ಇಷ್ಟು ವ್ಯಾಪಕವಾದಂತಹ ಸ್ಥೂಲವಾದಂತಹ ವಿಮರ್ಶೆ, ಚರ್ಚೆಯಾಗಿ ಅದರ ಮೇಲೆ ಯಾವುದೇ ಒಂದು ವಿಚಾರ ಟ್ರಿಬ್ಯುನಲ್‌ನಲ್ಲಾಗಲೀ ಸುಪ್ರೀಂ ಕೋರ್ಟ್‌ನಲ್ಲಾಗಲೀ ಈ ಸದನದಲ್ಲಾಗಲೀ ಅದು ಒಡಮೂಡತಕ್ಕಂತಹ ಒಂದು ಅಚ್ಚುಕಟ್ಟಾದಂತಹ ವ್ಯವಸ್ಥೆಯ ಪರಿಸ್ಥಿತಿ ತಾವು ಮಾಡುತ್ತಿದ್ದರೆ ಬಹುಶಃ ನಿನ್ನೆ ಈ ತಪ್ಪನ್ನು ತಾವು ಮಾಡುತ್ತಿರಲಿಲ್ಲ. ವೈಯಕ್ತಿವಾಗಿ ನಾನು ತಮ್ಮನ್ನು ದೂರುವುದಿಲ್ಲ. ಇದನ್ನು ದಯಮಾಡಿ ಮಾಡಿ. ಎಲ್ಲಾ ಪ್ರೋಸೆಸ್ ಆಗಲಿ. we used to do every thing, not even a word used to come out unless all these things are processed properly plus our Advocates appearing before the Tribunal and Supreme Court at Delhi. ಇಂತಹ ವ್ಯಾಪಕವಾದಂತಹ ವ್ಯವಸ್ಥೆಯನ್ನು ದಯಮಾಡಿ ಶಿಥಿಲಗೊಳಿಸಿ, ಆಗತಕ್ಕಂತಹ ಅಘಾತ ಇವತ್ತು ಏನೇನು ಮಾಡಿದ್ದೇವೆ ಬರತಕ್ಕಂತಹ ಆಘಾತಗಳನ್ನು ಸಹಿಸತಕ್ಕಂತಹ ಒಂದು ಮಹಾನ್ ಶಕ್ತಿ ಚೈತನ್ಯ ಇವತ್ತು ನಮ್ಮ ಈ ಸರಕಾರದ ವ್ಯವಸ್ಥೆಯಲ್ಲಿ ಆಗಬೇಕು ಎಂಬ ಕಳಕಳಿಯ ಮಾತನ್ನು ಆಡುತ್ತಿದ್ದೇನೆ. ಕಾವೇರಿ ವಿಷಯದಲ್ಲಿ 20 ಗಂಟೆ ಒಂದು ದಿವಸದಲ್ಲಿ ಕಳೆದಿದ್ದು ಇದೆ. ನಾನು ಮತ್ತು ನನ್ನ ಅನೇಕ ಸಂಗಡಿಗರು ನಾವು ಕಳೆದದ್ದು ಇದೆ. ರಾತ್ರಿ ನಿದ್ದೆ ಬಿಟ್ಟಿದ್ದು ಇದೆ, ಅನ್ನವನ್ನು ಬಿಟ್ಟಿದ್ದು ಇದೆ. ಏಕೆಂದರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ಒಂದು ದೊಡ್ಡ ಹಕ್ಕು ಮತ್ತು ಒಂದು ಶತಮಾನದಿಂದ ಆಗಿರತಕ್ಕಂತಹ ಅನ್ಯಾಯವನ್ನು ಸರಿಪಡಿಸತಕ್ಕಂತಹ ಒಂದು ದೊಡ್ಡ ಶಸ್ತ್ರಚಿಕಿತ್ಸೆ ಇವತ್ತು ಆಗಬೇಕಾದಂತಹ ಅವಶ್ಯಕತೆ ಇದೆ. ಇದು ಕಾನೂನು ಇರಬಹುದು ತಾಂತ್ರಿಕ ವಿಚಾರ ಇರಬಹುದು ರಾಜಕೀಯದ ಪ್ರಶ್ನೆ ಇಲ್ಲಿ ಅಲ್ಲ. ನಮ್ಮ ಒಬ್ಬ ಸದಸ್ಯರು ರಾಜಕೀಯವಾಗಿ ತೆಗೆದುಕೊಳ್ಳುತ್ತಾರೆಂದು ಹೇಳಿದರು. ಇದನ್ನು ಯಾರೂ ರಾಜಕೀಯವಾಗಿ ತೆಗೆದುಕೊಳ್ಳಲಿಲ್ಲ. ಇಲ್ಲಿಯವರೆಗೂ ತೆಗೆದುಕೊಂಡಿಲ್ಲ. ವಿರೋಧ ಪಕ್ಷದವರು ನಾವು ಎಲ್ಲೇ ಇರಲಿ ಎಂದೂ ಕೂಡ ಮುಂದೆಯೂ ಕೂಡ ತೆಗೆದುಕೊಳ್ಳಬಾರದು. ಇದು ರಾಜಕೀಯದ ಪ್ರಶ್ನೆ ಅಲ್ಲ. ಆರ್ಥಿಕವಾಗಿ ರಾಜಕೀಯವಾಗಿ ಸಾಮಾಜಿಕವಾಗಿ ನಾಡಿನ ಜನ ಬದುಕತಕ್ಕಂತಹ ಒಂದು ಜ್ವಲಂತವಾದಂಥ ಪ್ರಶ್ನೆ ಇಲ್ಲಿ ಇದೆ. ಯಾರಾದರೂ ರಾಜಕೀಯ ಮೈಲೇಜ್ ತೆಗೆದುಕೊಳ್ಳುತ್ತೇವೆ ನಾವು ಇದರಿಂದ ಓಟು ಕಳೆದುಕೊಳ್ಳುತ್ತೇವೆ ಇದರಿಂದ ಓಟು ಗಳಿಸುತ್ತೇವೆಂದು ಇವತ್ತು ನಾನು ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ನಿಮಗೆ ಓಟು ಬರುವುದೂ ಇಲ್ಲ. ಓಟು ಕಳೆದುಕೊಳ್ಳುವುದೂ ಇಲ್ಲ. ಏಕೆಂದರೆ ನಾವೆಲ್ಲರೂ ಇವತ್ತು ಜವಾಬ್ದಾರರು. ನಾವು ಇವತ್ತು ಸರ್ಕಾರದ ಪರವಾಗಿ ನಿರ್ಣಯ ತೆಗೆದುಕೊಂಡರೂ ಕೂಡ ನಾವು ಜವಾಬ್ದಾರರು. ಈ ಜವಾಬ್ದಾರಿ ತಪ್ಪಿಸಲಿಕ್ಕೆ ಇವತ್ತು ಇಡೀ ರಾಜ್ಯದ

ವ್ಯವಸ್ಥೆಯಲ್ಲಿ ಯಾರೂ ಕೂಡ ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಿಕ್ಕೆ ಖಂಡಿತವಾಗಿ ಕೂಡ ಸಾಧ್ಯ ಆಗುವುದಿಲ್ಲ. ಪ್ರಶ್ನೆ ಇವತ್ತು 5 ಟಿಎಂಸಿ ವಿಚಾರ ಅಲ್ಲ. ಮಾನ್ಯ ನಂಜೇಗೌಡರಿಗೆ ಕೂಡ ಗೊತ್ತಿದೆ. ಐದು ಟಿಎಂಸಿ, ಎರಡು ಟಿಎಂಸಿ, ಒಂದು ಟಿಎಂಸಿ. 15 ಟಿಎಂಸಿ ಈ ಪ್ರಶ್ನೆ ಅಲ್ಲ. ಇದನ್ನು ತಾವು ವ್ಯಾಪಕ ದೃಷ್ಟಿಯಿಂದ ನೋಡಬೇಕಾಗುತ್ತದೆ. ನೀವು ಐದು ಟಿಎಂಸಿ ಆಗಲೀ ಒಂದು ಬಿಡುಗಡೆ ಮಾಡುವಾಗ ಸ್ಥೂಲವಾದಂತಹ ಈ ವಿವಾದಕ್ಕೆ ಸಂಬಂಧಪಟ್ಟಂತಹ ಒಂದು ಸಂಪೂರ್ಣವಾದಂತಹ ಪ್ಯಾರಾಮೀಟರ್ಸ್ ತಮ್ಮ ಮುಂದೆ ಇರಬೇಕಾದರೆ ಬರೇ ಒಂದು ಐದು ಟಿಎಂಸಿ ಎಂದು ಇಲ್ಲ. ಇದರ ಪರಿಣಾಮ ಏನಾಗುತ್ತದೆ. ಈಗ ಇಂಟಿರಿಂ ಆರ್ಡರ್ ಏನುದು? ಈ ಇಂಟೀರಿಂ ಆರ್ಡರೇ ಬಹುಶಃ ಇಂಟೀರಿಂ ಆರ್ಡರ್ ಅಲ್ಲ, ಇದೇ ಪರ್ಮನೆಂಟ್ ಆರ್ಡರ್ ಆಗಬಹುದು, ಶಾಶ್ವತವಾದಂತಹ ಆರ್ಡರ್ ಆಗಬಹುದು. ಇವತ್ತು ಇಂಟೀರಿಂ ಆರ್ಡರ್‌ನಿಂದ ತಮಿಳುನಾಡಿನ ಗುರಿ ಏನು? ಇಂಟೀರಿಂ ಆರ್ಡರನ್ನು ಇವತ್ತು ಸಕ್ರಮಗೊಳಿಸತಕ್ಕ ದೊಡ್ಡ ಪ್ರಯತ್ನ ತಮಿಳುನಾಡಿನಿಂದ ಆಗುತ್ತಾ ಇದೆ. We should not forget about it. ಆ ಕಾನ್‌ಸೆಪ್ಟ್‌ನಲ್ಲಿ ಒಂದು ಟಿಎಂಸಿ ಬಿಟ್ಟರೂ ಕೂಡ to that exent, you have lost the case. ತಾವು ದಯಮಾಡಿ ಇವತ್ತು ವಿಚಾರ ಮಾಡಬೇಕಾಗುತ್ತದೆ. ಕರ್ನಾಟಕದ ಎಲ್ಲಾ ವಿವರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕರ್ನಾಟಕದಲ್ಲಿ ಕಾವೇರಿ ಬೇಸಿನ್‌ನ ಕಾವೇರಿ ಜಲಾನಯನದ ಸುಮಾರು 28 ತಾಲ್ಲೂಕುಗಳು ಬರಗಾಲ ಪೀಡಿತ ಆಗಿದ್ದರೆ ತಮಿಳುನಾಡಿನಲ್ಲಿ ಬರೇ 14 ತಾಲ್ಲೂಕುಗಳು ಬರಪೀಡಿತ ಆಗಿವೆ. ವಿಶೇಷವಾದ ಬರಗಾಲದಿಂದ ಇವತ್ತು ನರಳುತ್ತಿರತಕ್ಕಂಥ ರಾಜ್ಯ ಇವತ್ತು ಕರ್ನಾಟಕ ರಾಜ್ಯ ತಮಿಳುನಾಡು ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆದರೆ ಇವತ್ತು ತಮಿಳುನಾಡಿನಲ್ಲಿ 39 ಪರ್ಸೆಂಟ್ ಕ್ರಾಪ್ಡ್ ಏರಿಯಾ ಇದ್ದರೆ ನಮ್ಮದು 11ಪರ್ಸೆಂಟ್ ಮಾತ್ರ ಕ್ರಾಫ್ಡ್ ಏರಿಯಾ ಇದೆ. ಆದರೂ ಇವತ್ತು ಹೆಚ್ಚು ಆಯಕಟ್ಟು ನಮ್ಮದು ಇದ್ದರೂ ಕೂಡ ಇರಿಗೇಷನ್‌ನಲ್ಲಿ ಅತಿ ಕಡಿಮೆ ಮೊತ್ತ ಕರ್ನಾಟಕದಲ್ಲಿ ಇರತಕ್ಕ ಸಂದರ್ಭದಲ್ಲಿ ನಾವು ಇವತ್ತು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. 205 ಟಿಎಂಸಿ ಇಂಟೀರಿಂ ಆರ್ಡರ್‌ನ್ನು ಇವತ್ತು ಪಾಸ್ ಮಾಡಿದಮೇಲೆ ತಮಿಳುನಾಡಿನಲ್ಲಿ ಏನು ಅದಕ್ಕೆ ಫಾಲೋ ಅಪ್ ತೆಗೆದುಕೊಂಡರು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿ ಅವರು 205 ಆರ್ಡರನ್ನು ಉಪಯೋಗ ಮಾಡಿಕೊಳ್ಳಲಿಲ್ಲ. ಇದರಿಂದ ಅವರಿಗೆ ಏನು ಧೈರ್ಯ ಬಂತು ಎಂದು ಹೇಳಿದರೆ ಕುರವೈ ಕ್ರಾಪ್ ವಿಚಾರ. ಕುರವೈ ಕ್ರಾಪ್‌ನಲ್ಲಿ 1993ನೇ ಇಸವಿಯಲ್ಲಿ ಅವರ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ರಿಪೋರ್ಟ್, ಅದರ ಬಗ್ಗೆ ಸದನದಲ್ಲಿ ಸಾಕಷ್ಟು ಬಾರಿ ಚರ್ಚೆ ಆಗಿದೆ. 1993ನೆ ಇಸವಿಯಲ್ಲಿ ಕುರವೈ ಕ್ರಾಪನ್ನು ಒಂದು ಲಕ್ಷ ಹೆಕ್ಟೇರ್, ಎಕರೆ ಅಲ್ಲ. ಒಂದು ಲಕ್ಷ ಹೆಕ್ಟೇರ್ ಹೆಚ್ಚುರಿ ವಿಸ್ತೀರ್ಣವನ್ನು ಅವರು ಕುರುವೈ ಕ್ರಾಫಿಗೆ ಸೇರಿಸಿದರು as aginst 1.67 lakh hactares; ಅಲ್ಲಿಯವರೆಗೆ 93ರವರೆಗೆ ಅವರು ಕುರುವೈ ಕ್ರಾಫ್ ಎಷ್ಟು ಮಾಡಿದ್ದರು ಎಂದರೆ 1.67

ಲಕ್ಷ ಹೆಕ್ಟೇರ್‌ನಲ್ಲಿ, ಕುರವೈ ಕ್ರಾಪ್ ಅವರು ಮಾಡುತ್ತಿದ್ದರೆ, 1993ರಲ್ಲಿ ಅವರು ಒಂದು ಲಕ್ಷ ಹೆಕ್ಟೇರ್ ಹೆಚ್ಚು ಕುರವೈ ಕ್ರಾಪ್‌ನ್ನು ಮಾಡಿದರು. ಈಗ ದಯಮಾಡಿ ವರದಿ ಸಾಧ್ಯವಿದ್ದರೆ ಕೊಡಿ. ಇಲ್ಲದಿದ್ದರೆ you must send your officers 1994ರಲ್ಲಿ ಇನ್ನೂ ಹೆಚ್ಚು ಕುರವೈ ಕ್ರಾಪ್ ಸೇರಿಸಿದ್ದಾರೆ. 1995ರಲ್ಲಿ ಇನ್ನೂ ಹೆಚ್ಚು ಕುರವೈ ಕ್ರಾಫ್‌ಗೆ ಸೇರಿಸುತ್ತಾರೆ. May be this year they must have further added. ಇವತ್ತು ಈ ಧೈರ್ಯ ಹೇಗೆ ಬಂತು? ಏಕೆ ಬಂತು ಅಂದರೆ the Tribunal has guaranteed 205 TMC ft of water. It is not Interim order. It is a guarantee. ಯಾವಾಗ ಈ ಗ್ಯಾರಂಟಿ ಸಿಕ್ಕಿತು. ಆದ್ದರಿಂದ ಧೈರ್ಯ ಆಯಿತು. ಆ ಧೈರ್ಯದಿಂದ ಅವರು ಮಾಡಿದರು. ಐದು ಟಿಎಂಸಿ ಎಂದು ಹೇಳಿ ಬಹಳ ಸದರದಿಂದ, ಸರಳವಾಗಿ ನಾವು ಬಿಡುಗಡೆ ಮಾಡುವುದು. ಅವರು ತೆಗೆದುಕೊಳ್ಳುವುದು. ಅವರು ಸ್ವಾಗತ ಮಾಡುವುದು, ನಾವು ತಿರಸ್ಕರಿಸುವುದು. ಇಷ್ಟಕ್ಕೆ ಸೀಮಿತ ಈ ಪ್ರಶ್ನೆ ಆಗಿದ್ದರೆ ನಾವು ಇಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಾ ಇರಲಿಲ್ಲ. ನಾಡಿನ ಜನತೆ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ ಅಥವಾ ತಾವು ಇವತ್ತು ಗಂಭೀರವಾಗಿ ತೆಗೆದುಕೊಳ್ಳತಕ್ಕ ಪ್ರಶ್ನೆ ಅಲ್ಲ. ಇವತ್ತು ಒಂದು ಲಕ್ಷ ಹೆಕ್ಟೇರ್ ಜಾಸ್ತಿ ಜಾಗವನ್ನು ಅವರು ಕುರವೈನಲ್ಲಿ ತೆಗೆದುಕೊಂಡಿದ್ದಾರೆ. ಅದಕ್ಕಿಂತಲೂ ಇನ್ನೂ ಹೆಚ್ಚು ಒಂದು ಲಕ್ಷ ಹೆಚ್ಚು ಮಾಡಿದರೋ ಅಥವಾ ಐವತ್ತು ಸಾವಿರ ಹೆಚ್ಚಿಗೆ ಮಾಡಿದರೋ it is a matter which has to be verified. ಇದು ವಿಚಾರ ನೀವು ಟ್ರಿಬ್ಯುನಲ್‌ಗೆ ಕೊಡಬೇಕಾಗುತ್ತದೆ, ಸುಪ್ರೀಂಕೋರ್ಟಿಗೆ ತೆಗೆದುಕೊಂಡು ಹೋಗಬೇಕಾಗುತ್ತದೆ. ನಾವು ತೆಗೆದುಕೊಂಡಿದ್ದೇವೆ. ಆದಕ್ಕಾಗಿ ತಮಗೆ ಗೊತ್ತಿರಬಹುದು. ಮಾನ್ಯ ಶುಕ್ಲಾ ಅವರು ಇಲ್ಲಿಗೆ ಬಂದರು, ಮಾನ್ಯ ಪ್ರಧಾನಿಯವರು ನಮಗೆ ಕಾಗದ ಬರೆದರು. ತಾವು ಒಪ್ಪಲಿಲ್ಲ, ತಾವು ಪಾಪ ಅದಕ್ಕೆ ಬಲಿ ಪಶು ಆಗಿದ್ದಿರಿ. ಶುಕ್ಲಾ ಅವರಿಗೆ ಟೀಕೆ ಮಾಡಿದ್ದರಿಂದ ತಾವು ಬಲಿ ಪಶು ಆಗದ್ದಿರಿ, ಅದು ವರವಾಗಿ ತಾವು ಈಗ ಈ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ ಅಷ್ಟೇ. This is the result, you opposed the intervention by Mr Shukla on this matter.

ಅಧ್ಯಕ್ಷರು:- ಮೊಯಿಲಿಯವರೇ, ನನಗೆ ಗೊತ್ತಾಗಲಿಲ್ಲ. ನೀವು ಅಲ್ಲಿ ಹೇಳುತ್ತಿದ್ದೀರಿ. It is something very interesting.

SRI M.VEERAPPA MOILY:- The golden words cannot be repeated.

MR.SPEAKER: Please be kind to me.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಶುಕ್ಲಾ ಅವರು ಇಲ್ಲಿಗೆ ಬಂದು ರೆಗ್ಯುಲೇಟಿಂಗ ಕಮಿಟಿ ಮಾಡಲಿಕ್ಕೆ ನೀವು ಒಪ್ಪಿಗೆ ಕೊಡಬೇಕು, ನೀರನ್ನು ಬಿಟ್ಟುಕೊಡಬೇಕೆಂದು ಇಲ್ಲಿ ಪಟ್ಟು ಹಿಡಿದಾಗ ಮಧ್ಯ ರಾತ್ರಿ ನಾವು ಕ್ಯಾಬಿನೆಟ್

ಮೀಟಿಂಗ್ ಮಾಡಿದೆವು. ಒತ್ತಾಯ ಮಾಡಿದರೂ ನಾವು ಬಗ್ಗಲಿಲ್ಲ. ಮಾನ್ಯ ನಾಗೇಗೌಡರು ನಮ್ಮ ಪಕ್ಷದಲ್ಲಿ ಮಾನ್ಯ ಸಚಿವರು ಆಗಿದ್ದರು. ಶುಕ್ಲಾ ಅವರ ಹಸ್ತಕ್ಷೇಪವನ್ನು ವಿರೋಧ ಮಾಡಿದರು. The Congress ticket was denied to him in the Assembly and he became a scapegoat. ಅದು ವರವಾಗಿ ಇವತ್ತು ಪರಿಣಮಿಸಿದೆ ಎಂದು ಹೇಳಿದೆ ಅಷ್ಟೇ. We must frankly admit what has happened.

ಶ್ರೀ ಬಿ.ಎಸ್.ಯಡಿಯೂರಪ್ಪ:- ಆ ಪಾಠದಿಂದಲೇ ಈಗ ಅಲ್ಲಿಯ ಆದೇಶ ಡಿನೈ ಮಾಡಿದರೆ ಮತ್ತೆ ಅಲ್ಲೂ ಇಲ್ಲ ಪಂಗನಾಮ ಆಗುತ್ತದೆ ಎಂದು ಒಪ್ಪಿಕೊಂಡಿದ್ದಾರೆ. ನೀವು ಏಕೆ ಅದನ್ನು ಕಂಟಿನ್ಯೂ ಮಾಡುವುದಿಲ್ಲ? ನೀವು ಇವತ್ತು ಆ ತೀರ್ಮಾನಕ್ಕೆ ನಾಡಿನ ಜನರ ಪರವಾಗಿ ಒಂದು ತೀರ್ಮಾನ ತೆಗೆದುಕೊಂಡಾಗ ಪಕ್ಷದಲ್ಲೂ ಮಾನ್ಯತೆ ಸಿಗಲಿಲ್ಲ, ಅಸೆಂಬ್ಲಿಗೆ ಸೀಟು ಸಿಗಲಿಲ್ಲ. ನಾನು ಪ್ರಧಾನಿಯವರು ಮಾತು ಕೇಳಿದರೆ ಈಗ ಸೀಟೂ ಖಾಯಂ ಆಗುತ್ತದೆ ಎಲ್ಲವೂ ಅನುಕೂಲ ಆಗುತ್ತದೆ ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಗಾಯದ ಮೇಲೆ ಬರೆ ಎಳೆದಹಾಗೆ ಆಗುತ್ತದೆ ಎಂದು ಬಹಳ ಎಚ್ಚರದಿಂದ ಇದ್ದಾರೆ.

ಅಧ್ಯಕ್ಷರು:- ಈ ತರಹ ವರಗಳೆಲ್ಲಾ ಇವರಿಗೇ ಸಿಗುತ್ತವೇನೋ, ನಮಗೆ ಯಾರಿಗೂ ಸಿಗುವುದಿಲ್ಲ.

ಶ್ರೀ ಎ.ರಾಮದಾಸ್:- ಈ ಸಾರಿ ಮಾತ್ರ ಕಾವೇರಿ ಶಾಪಕ್ಕೆ ಒಳಗಾಗುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈಗ ಕರೆಕ್ಟಾಗಿ ಗೊತ್ತಾಯಿತು.

ಅಧ್ಯಕ್ಷರು:- ಏನೋ ಹೇಳಿದರು. ನನಗೂ ವರ ಸಿಕ್ಕಿದೆ ಎಂದು. ನನಗೆ ಏನೂ ಸಿಕ್ಕಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನೀವು ಈಗ ಇದಕ್ಕಿಂತ ಬೇರೆ ಕಡೆಗೆ ಹೋಗಬೇಡಿ ಈ ಸುಳ್ಳು ಬಿಟ್ಟು ಬೇರೆ ಕಡೆಗೆ ಖಂಡಿತ ಹೋಗುವುದಕ್ಕೆ ಹೋಗಬೇಡಿ.

ಅಧ್ಯಕ್ಷರು:- ಅದು ಗೊತ್ತಿದೆಯಲ್ಲಾ, ನಾನು ಸಾವಿರ ಸಲ ಹೇಳಿದ್ದೇನೆ. ಅದನ್ನು ಏಕೆ ಮತ್ತೆ ಕೆಣಕುತ್ತೀರಿ? ಇಲ್ಲಿಂದಲೂ ಮತ್ತೆ ಒಂದು ಸಲ ಹೇಳಲಿ ಎಂತಲೋ, ಇಲ್ಲಿಂದಲೂ ಹೇಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಯಡಿಯೂರಪ್ಪನವರು ಹೇಳಿದ್ದನ್ನೇ ನಾನೂ ಉದಾಹರಿಸಬೇಕು ಎಂದು ಕೇಳಿದ್ದೆ. ತಾವೇ ನಮಗೆ ಹೇಳಿ ಉಪಕಾರ ಮಾಡಿದಿರಿ. Once bitten twice wise ಎಂದು ಆಗಬೇಡಿ. ಕಾವೇರಿಗಾಗಿ, ನಾಡಿನ ಹಕ್ಕಿನ ರಕ್ಷಣೆಗಾಗಿ ಎಷ್ಟು ಸಾರಿ ಕೂಡ ಕಷ್ಟಪಡತಕ್ಕ ಪ್ರಯತ್ನ ಆ ಧೀಮಂತಿಕೆಯಿಂದ ತಾವು ಈ

ಸ್ಥಾನಕ್ಕೆ ಬಂದಿದ್ದೀರಿ. ಅದನ್ನು ಕಳೆದುಕೊಳ್ಳಬೇಡಿ. That should not be anti-climax.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕಂಗ್ರಾಜುಲೇಟ್ ಮಾಡುತ್ತೇನೆ ಆ ಸಮಯದಲ್ಲಿ ನಿಮ್ಮ ನಿಲುವನ್ನು. ಶುಕ್ಲಾ ಅವರ ಒಂದು ಒತ್ತಾಯಕ್ಕೆ ಮಣೆಯದೇ ಎಲ್ಲವನ್ನೂ ಎದುರಿಸಿ ತಾವೇನು ತೀರ್ಮಾನ ತೆಗೆದುಕೊಂಡಿರಿ, ನಾವು ಸದನದ ಒಳಗೂ ಹೇಳಿದ್ದೇನೆ. ಮತ್ತೊಮ್ಮೆ ನಿಜವಾಗಿ ತಾವು ಆ ಸಂದರ್ಭದಲ್ಲಿ ತೆಗೆದುಕೊಂಡ ನಿಲುವು ಮುಂಚೆ ರಾಜಕಾರಣದಲ್ಲಿ ಈ ತರಹ ಸ್ಥಾನಮಾನಗಳು ಸಿಕ್ಕಾಗ ಹೇಗೆ ನಡೆದುಕೊಳ್ಳಬೇಕು ಎಂದು ಆ ಸಂದರ್ಭದಲ್ಲಿ ಮಾರ್ಗದರ್ಶನ ಹಾಕಿಕೊಟ್ಟಿದ್ದೀರಿ. ರಾಜ್ಯದ ಜನರ ಪರವಾಗಿ ನಾನು ಅಭಿನಂದನೆಗಳನ್ನೂ ಸಲ್ಲಿಸುತ್ತೇನೆ.

ಅಧ್ಯಕ್ಷರು:- ಈಗ ಮಾಡಿದರೆ ಏನು ಪ್ರಯೋಜನ? ಪಾಪ ಅಧಿಕಾರದಲ್ಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ಹೌಸ್‌ನಲ್ಲೂ ಹೇಳಿದ್ದೇನೆ. ಮುಖ್ಯ ಮಂತ್ರಿಯಾಗಿ ಅವರು ತೆಗೆದುಕೊಂಡಂತಹ ನಿಲುವಿನ ಬಗ್ಗೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹೌಸೇ ಯುನಾನಿಮಸ್ ಇತ್ತಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಆ ಸಮಯದಲ್ಲಿ ಸದನದ ಒಳಗೂ ಪ್ರಸ್ತಾಪ ಬಂದಾಗ ಅವರ ಒಂದು ಸ್ಟ್ಯಾಂಡನ್ನು ಅಪ್ರೀಷಿಯೇಟ್ ಮಾಡಿದ್ದೇನೆ. ಅವರಿಗೆ ಒಳ್ಳೆಯದಾಯಿತು ಇವರು ಅಧಿಕಾರ ಕಳೆದುಕೊಂಡರು.

ಶ್ರೀ ಎಂ.ವೀರಪ್ಪ ಮೊಯಿಲಿ:- ಪರವಾಗಿಲ್ಲ, ಈ ಸ್ಥಾನಮಾನ ಬರುವುದೆಲ್ಲಾ ಆಕಸ್ಮಿಕ. ಆದರೆ ವ್ಯಕ್ತಿತ್ವ ಏನು ಉಳಿಸಿಕೊಳ್ಳುತ್ತೇವೆ, ಅದು ಶಾಶ್ವತ. ಆದ್ದರಿಂದ ಅದು ಬಹಳ ಪ್ರಾಮುಖ್ಯತೆ ಇಲ್ಲ. ನಾನು ತಾವು ಆ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:- ನನಗೆ ಏನು ಅನುಮಾನ ಅಂದರೆ ನಾಗೇಗೌಡರನ್ನು I know him for the last 27-28 years. Definitely ಅವರು ಬುದ್ಧಿವಂತರು. ಆದರೆ ಅಷ್ಟು ಬುದ್ಧಿವಂತರಲ್ಲ. ಅವರು ಇಷ್ಟೆಲ್ಲಾ ಮಾಡಬೇಕಾದರೆ ನಿಮ್ಮದೇ ಸೂಚನೆ ಅವರಿಗೆ ಇತ್ತಾ ಎಂದು ಡೌಟ್ ನನಗೆ ಅಷ್ಟೇ. ನೀವೇ ಕ್ಲೂ ಕೊಟ್ಟು ಮುಂದಕ್ಕೆ ಏನೇನಾಗುತ್ತದೆ ಎಂದು ನೀವು ಹೀಗೆ ಮಾಡಿ ಎಂದು ಹೇಳಿಕೊಟ್ಟಿರಾ ಎಂಬ ಅನುಮಾನ.

ಶ್ರೀ ಎಂ.ವೀರಪ್ಪ ಮೊಯಿಲಿ:- ನಮ್ಮ ಜೊತೆ ಇರುವಾಗ ಅತ್ಯಂತ ಪ್ರಾಮಾಣಿಕರಾಗಿ, ಅತ್ಯಂತ ವಿಶೇಷವಾದಂತಹ ನಿಷ್ಠೆಯಿಂದ ಇದ್ದರು. ಅದನ್ನು ಮೆಚ್ಚಬೇಕಾಗುತ್ತದೆ. ಆ ನಿಷ್ಠೆ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈಗ ಅವರದ್ದು ಸ್ಪಷ್ಟ ಸ್ವಭಾವ. ಎಲ್ಲಿರುತ್ತಾರೆ ಅಲ್ಲಿ

ನಿಷ್ಠೆ ತೋರಿಸತಕ್ಕದ್ದು ಸ್ಪಷ್ಟ.

ಶ್ರೀ ಕೆ.ಎನ್.ನಾಗೇಗೌಡ:- ಸಾರ್, ಒಬ್ಬ ರಾಜಕಾರಣಿಗೆ ಒಬ್ಬ ಮನುಷ್ಯ ಅನಿಸಿಕೊಂಡವನಿಗೆ ಜೀವನದಲ್ಲಿ ಒಂದು ಕಲ್ಪನೆ ಇಟ್ಟುಕೊಂಡು ಕೆಲಸ ಮಾಡಬೇಕು ಎನ್ನುವವರಿಗೆ ವಿರೋಧ ಪಕ್ಷದಲ್ಲಿದ್ದರೂ ನಿಷ್ಠೆ ಇರಬೇಕು. ಯಾರು ನಾಯಕರು ಇರುತ್ತಾರೆ ಅವರಿಗೆ ನಿಷ್ಠೆ ಇರಬೇಕು. ಹಾಗೆಯೇ ನಾವು ನಮ್ಮ ಹೆಂಡತಿ ಮಕ್ಕಳಿಗೂ ನಿಷ್ಠೆಯಾಗಿ ಇರುವವರೇ.

ಶ್ರೀ ವಾಟಾಳ್ ನಾಗರಾಜ್:- ಇದು ಬೇರೆ ದಿಕ್ಕಿಗೆ ತಲುಪಿತು. ನಾವೇನಾದರೂ ಇವರ ಬೇರೆ ವಿಚಾರ ಮಾತನಾಡಿದೆವೇ? ನಮ್ಮಿಬ್ಬರಿಗೇ ಗೊತ್ತು. ಮಾನ್ಯ ನಂಜೇಗೌಡರಿಗೆ ಗೊತ್ತು. ನಾವು ಏಕೆ ಸುಮ್ಮನೆ ಹೇಳಬೇಕು.

(ನಗು)

ಅಧ್ಯಕ್ಷರು:- ಮಧ್ಯಾಹ್ನವಾಗಿದ್ದರೆ ಪರವಾಗಿರಲಿಲ್ಲ, ಈಗ ಸಂಜೆಯಾಗುತ್ತಿರುವಾಗ ಇಂತಹ ವಿಚಾರಗಳನ್ನು ಪ್ರಸ್ತಾಪಿಸಿ ನಂಜೇಗೌಡರನ್ನು ಸಾಕ್ಷಿ ಮಾಡುವುದಕ್ಕೆ ಹೋಗಬೇಡಿ. ಅವರು ನೆಮ್ಮದಿಯಿಂದ ಇಲ್ಲಿ ಕುಳಿತಿದ್ದಾರೆ. ಅವರು ಇಲ್ಲಿಂದ ಅರ್ಜೆಂಟಾಗಿ ಹೊರಟು ಬಿಡಬೇಕೆಂದು ಹೇಳುತ್ತಿದ್ದೀರಾ?

ಶ್ರೀ ಹೆಚ್.ಎನ್.ನಂಜೇಗೌಡ:- ವಯಸ್ಸಿನಲ್ಲಿ ಬಹಳ ಚಿಕ್ಕವರು ನಾಗೇಗೌಡರು. ನಮ್ಮ ವಯಸ್ಸಿನವರಿಗಾದರೂ ಹೋಲಿಸಿ ಸಾಕ್ಷಿ ಹೇಳಿದರೆ ಹೇಳಿಸಬಹುದು. ಸಮಕಾಲೀನರೂ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಇಂತಹ ವಿಚಾರದಲ್ಲಿ ಸಾಕ್ಷಿ ಹೇಳಲು ವಯಸ್ಸೇನೂ ಬೇಕಾಗಿಲ್ಲ ನಂಜೇಗೌಡರಿಗೆ.

ಅಧ್ಯಕ್ಷರು:- ಇದು ನಿಮಗೂ, ಅವರಿಗೂ ಗೊತ್ತು.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ತಾವು ಸುಳ್ಳು ಹೇಳಬಾರದು. ಇದು ತಮಗೂ ಗೊತ್ತಿದೆ.

(ನಗು)

ಅಧ್ಯಕ್ಷರು:- ಸ್ವಲ್ಪ, ಸ್ವಲ್ಪ ಗೊತ್ತಿದೆಯಷ್ಟೆ.

ಶ್ರೀ ವೀರಪ್ಪ ಮೊಯಲಿ:- ಮಾನ್ಯ ಅಧ್ಯಕ್ಷರೆ, ಇವೊತ್ತು ನಾನು ಈ ಕುರಿತ ಎಲ್ಲಾ ವಿವರಗಳನ್ನು ಇಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ, ಅವಕಾಶವನ್ನು ನಾನು ಕೇಳುತ್ತಲೂ ಇಲ್ಲ. ಆದರೆ, ಒಂದು ವಿಚಾರ ಮಾಡಬೇಕಾಗುತ್ತದೆ. ಈಗ 11.2ಲಕ್ಷ ಎಕರೆಗಳಷ್ಟು ಸರಾಸರಿ ಲೆಕ್ಕ ಹಾಕಿ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಮಾಡುತ್ತೇನೆಂದು ಇಟ್ಟುಕೊಂಡರೂ ನಾವು 312 ಟಿ.ಎಂ.ಸಿ.ಯಷ್ಟು ನೀರನ್ನು

ಉಪಯೋಗಿಸಿಕೊಳ್ಳಬಹುದು. ಆದರೆ, ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ತೀರ್ಪಿನ ಪ್ರಕಾರ ಇವೊತ್ತು ತಮಿಳುನಾಡಿಗೆ 205 ಟಿ.ಎಂ.ಸಿಯಷ್ಟು ನೀರನ್ನು ಬಿಡುವುದಾಗಿದ್ದರೆ ಪರಿಸ್ಥಿತಿ ಏನಾಗುತ್ತಿದೆ? 121.7 ಟಿಎಂಸಿ ಅಂದರೆ, 303.5 ಟಿಎಂಸಿ ಮೈನಸ್ 211.8, ಅಂದರೆ 1/3 of the present requirement of 312 TMC ಇದು ಮಾತ್ರ ನಿಮಗೆ ಉಳಿಯುತ್ತದೆ. ಇದರಿಂದ ಏನಾಗುತ್ತದೆಂದರೆ ನಮ್ಮ ಖಾರಿಫ್ ಬೆಳೆ ಹೊರಟುಹೋಗುತ್ತದೆ, ರಾಬಿ ಬೆಳೆಯನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೆಳೆಯತಕ್ಕಂಥ ಪ್ರಶ್ನೆಯೇ ಉಳಿಯುವುದಿಲ್ಲ. ಅಲ್ಲದೆ ಆ್ಯವರೇಜ್ ಇಯರ್ ತೆಗೆದುಕೊಂಡರೂ, the total flow upto Mettur comes to about 503 TMC. ಈಗ ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ತೀರ್ಪಿನಂತೆ 205 ಟಿ.ಎಂ.ಸಿ.ಯಷ್ಟು ನೀರನ್ನು ಕೊಟ್ಟರೆ ನಮಗೆ 298 ಟಿ.ಎಂ.ಸಿಯಷ್ಟು ನೀರು ಮಾತ್ರ ಉಳಿಯುತ್ತದೆ. ಇದರಿಂದಾಗಿ ಆ್ಯವರೇಜ್ ನಾರ್ಮಲ್ ಇಯರ್‌ನಲ್ಲಿ 312ಟಿಎಂಸಿಯಷ್ಟು ನೀರನ್ನು ಖಂಡಿತವಾಗಿಯೂ ಉಳಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಆದುದರಿಂದ, ಈ ಎಲ್ಲಾ ವಿಚಾರಗಳನ್ನು ಗಮನಿಸಿ, ಮಧ್ಯಂತರ ತೀರ್ಪಿನ ಪ್ರಕಾರ ತಮಿಳುನಾಡಿಗೆ 205 ಟಿಎಂಸಿ ನೀರನ್ನು ಏನು ಬಿಡುಗಡೆ ಮಾಡಬೇಕಾಗಿದೆ. Interim order is not capable of implementation in relation to the availability, in relation protecting the crops. ಎರಡೂ ದೃಷ್ಟಿಯಿಂದ ಲೀನ್ ಇಯರ್ ಅನ್ನೂ ತೆಗೆದುಕೊಳ್ಳೋಣ, ಆ್ಯವರೇಜ್ ಇಯರ್ ಅನ್ನೂ ಕೂಡ ತೆಗೆದುಕೊಳ್ಳೋಣ. ಈ ರೀತಿ ತೆಗೆದುಕೊಂಡಾಗ ಯಾವುದೇ ಸಂದರ್ಭದಲ್ಲಿ ಪ್ರಸ್ತುತ ನಮಗೆ ಬೇಡಿಕೆಯಿರುವಷ್ಟು ನೀರನ್ನು ನಾವು ಕೂಡ ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ. ಈ ಕುರಿತು ನಿಮ್ಮ ವಿಚಾರವನ್ನು ನಾವು ವಿರೋಧಿಸಿದ್ದೇವೆ. ಇವೊತ್ತು ನಮಗೆ ನೀರಿನ ಅಗತ್ಯತೆ ಎಷ್ಟಿದೆ? ಅವ್ಯರೇಜ್ ಪ್ರಾಜೆಕ್ಟ್ 407.7 ಟಿಎಂಸಿ. ಅನಂತರ ಪ್ರಸ್ತಾವನೆಗೊಳಿಸಿದಂಥ ಪ್ರಾಜೆಕ್ಟ್ ಎಷ್ಟೆಂದರೆ 57.3 ಟಿಎಂಸಿಯಷ್ಟು. ನಮ್ಮ ರಾಜ್ಯದ ವಾಸ್ತವಿಕ ನೀರಿನ ಅಗತ್ಯತೆ ಬಗ್ಗೆ ನಾನು ಈಗಾಗಲೇ ಹೇಳಿದಂತೆ 312 ಟಿಎಂಸಿಯಲ್ಲಿ, 1977ನೇ ಇಸವಿಯಲ್ಲಿ ಮಾಡಿದಂಥ

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಮಾಮನಿ)ರವರು ಪೀಠವನ್ನಲಂಕರಿಸಿದರು)

ಲೆಕ್ಕಚಾರದ ಪ್ರಕಾರ ನಮಗೆ ಅಷ್ಟೂ ಪ್ರಮಾಣದ ನೀರು ಬರುವುದಿದ್ದರೆ 465 ಟಿಎಂಸಿಯಷ್ಟು ಅಗತ್ಯತೆಯನ್ನು ನೀವು ಪ್ರೊಜೆಕ್ಟ್ ಮಾಡಿದರೆ, ನಮಗೆ ಲೀನ್ ಇಯರ್‌ನಲ್ಲಿ 121 ಟಿಎಂಸಿಯಷ್ಟು ನೀರೂ ಕೂಡ ಬರುವುದಿಲ್ಲ. ರಾಜ್ಯದಲ್ಲಿ ಇಂತಹ ಭೀಕರವಾದ ಪರಿಸ್ಥಿತಿಯಿರುವಾಗ ತಮಿಳುನಾಡಿಗೆ ನೀವು 5ಟಿಎಂಸಿಯಷ್ಟು ನೀರನ್ನು ಬಿಡುಗಡೆ ಮಾಡಲು ಅವಕಾಶ ಕೊಟ್ಟಿರಿ. ನೀರನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಈ ಚಿತ್ರಣ ತಮ್ಮ ಮುಂದಿರಬೇಕಾಗಿತ್ತು. ಕೊನೆಗೆ as it is, 205 TMC is

regularised even in the final award. Tamil Nadu has a great future. ಇಷ್ಟೇ ಮಾಡಿದರೂ ಕೂಡ we will be less with 121 TMC at the lean period. ಅದಕ್ಕೋಸ್ಕರ ಮಾನ್ಯ ಸದಸ್ಯರು ಹೇಳಿದರು. ಪ್ರತಿ ವರ್ಷವೂ ನೀವು ನೀರನ್ನು ಕೊಡುತ್ತಲೇ ಬಂದಿದ್ದೀರಿ. ಪ್ರಶ್ನೆಯೇನೆಂದರೆ, ನೀರು ಕೊಡುತ್ತಾ ಬಂದಿದ್ದು ಕಾವೇರಿ ನ್ಯಾಯಮಂಡಳಿ ರಚನೆಯಾದ ನಂತರದಿಂದ. ಮಾನ್ಯ ದೇವೇಗೌಡರು ಒಮ್ಮೆ 5ಟಿಎಂಸಿಯಷ್ಟು ನೀರನ್ನು ಮತ್ತೊಮ್ಮೆ 6 ಟಿಎಂಸಿಯಷ್ಟು ನೀರನ್ನು ಪ್ರಧಾನಿಯವರ ಇಂಟರ್‌ವೆನ್‌ಷನ್‌ನಲ್ಲಿ ನ್ಯಾಚುರಲ್ ಫ್ಲೋ ಆಗಿ ಬಿಟ್ಟರಿ. ಹೀಗಿದ್ದರೂ ಹೆಚ್ಚುವರಿಯಾಗಿ ಒಂದು ಹನಿ ನೀರನ್ನೂ ಕೂಡ ನಾವು ಕೊಟ್ಟಿಲ್ಲವೆಂದು ಹೇಳಿರುವುದು ದಾಖಲೆಯಲ್ಲಿದೆ. ದಯಮಾಡಿ ಇದನ್ನು ತಿರುಚುವುದಕ್ಕೆ ಹೋಗಬೇಡಿ. ನಾವು ಹಿಂದೆ ಅಧಿಕಾರದಲ್ಲಿದ್ದಂಥ ಸಮಯದಲ್ಲಿ 1993ರಲ್ಲಿ ಮತ್ತು 1994ರಲ್ಲಿ ನೀರು ಬಿಡಬೇಕೆಂದು ನಮ್ಮ ಮೇಲೆ ಒತ್ತಡ ಬಂದಿತ್ತು. ಆದರೆ, ನಾವು ನೀರನ್ನು ಬಿಡುಗಡೆ ಮಾಡಲಿಲ್ಲ, ಹೆಚ್ಚುವರಿಯಾಗಿ ಒಂದು ಹನಿ ನೀರನ್ನೂ ಬಿಡುಗಡೆ ಮಾಡಲಿಲ್ಲ. ಏಕೆಂದರೆ ಈಗಾಗಲೇ ಹೊಟ್ಟೆ ತುಂಬಿದವನಿಗೆ ಮತ್ತಷ್ಟು ತುಂಬಿಸತಕ್ಕಂಥ ಪ್ರಯತ್ನಕ್ಕೆ ನಮ್ಮ ನಾಡಿನ ಸರ್ಕಾರ ಹೋಗಬಾರದು. ನಿಮ್ಮ ಒಂದು ಸೂತ್ರವೇನಿದೆ, ಇದು ಬದುಕುವ ಸೂತ್ರವೇ ಹೊರತು ಇದೊಂದು ರಾಜಕೀಯ ಸೂತ್ರವಲ್ಲ. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಇವೊತ್ತು ನಾವು ದೃಢ ಹೆಜ್ಜೆ ಇಡಬೇಕಾದಂಥ ಅವಶ್ಯಕತೆಯಿದೆ. ಆದುದರಿಂದ, ಈಗ ರಾಜ್ಯಕ್ಕೆ 465 ಟಿಎಂಸಿಯಷ್ಟು ನೀರಿನ ಅವಶ್ಯಕತೆಯಿರುವಾಗ ತಮಿಳುನಾಡಿಗೆ ನೀರು ಕೊಟ್ಟು ಕರ್ನಾಟಕ ರಾಜ್ಯವನ್ನು ಅಧೋಗತಿಗೆ ಇಳಿಸತಕ್ಕಂಥ ಯಾವುದೇ ಪ್ರಯತ್ನ, ಒಂದು ಸಣ್ಣ ಹೆಜ್ಜೆಯನ್ನೂ ತಾವು ಇಡಬಾರದು. ಅದರ ಬಗ್ಗೆ ನಮಗೆ ನೋವಿದೆ. ರಾಜಕೀಯ ಸ್ಥಿತ್ಯಂತರಗಳಿಂದ ಇವೊತ್ತು ನೀವು ಆ ಕಡೆ ಇದ್ದೀರಿ, ನಾವು ಈ ಕಡೆ ಇದ್ದೇವೆ. ಅಲ್ಲದೆ, ಇದನ್ನೊಂದು ರಾಜಕೀಯ ವಿಚಾರವೆಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು. ಇದು ನಿಮ್ಮ ಜವಾಬ್ದಾರಿಯಾಗಿರುವುದರಿಂದ ನಾನು ಪ್ರಧಾನಮಂತ್ರಿಯವರನ್ನು ದೂರುವುದಿಲ್ಲ. Why we should bring in the name of Mr.DeveGowda? ಸನ್ಮಾನ್ಯ ನಾಗೇಗೌಡರು ಹೇಳುತ್ತಿದ್ದರು: ಕಾಂಗ್ರೆಸ್ಸಿನವರೆಲ್ಲಾ ಯಾವಾಗಲೂ ದೆಹಲಿಯತ್ತ ನೋಡುತ್ತಿದ್ದಾರೆಂದು. ಕರ್ನಾಟಕ ರಾಜ್ಯದ ಹಿತಾಸಕ್ತಿ ಬಂದಾಗ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಬಂಗಾರಪ್ಪನವರಾಗಲಿ, ನಾನಾಗಲೀ ದೆಹಲಿ ಮುಖ ನೋಡಲಿಲ್ಲ, ದೆಹಲಿಯಲ್ಲಿದ್ದವರ ಆದೇಶಕ್ಕಾಗಿ ಬೇಡಲಿಲ್ಲ. We acted on our own, because it is a question of protecting our interests. Yes, we may incur displeasure. ಆದರೆ, ಕರ್ನಾಟಕ ರಾಜ್ಯದ ಹಿತವನ್ನು ರಾಜಕೀಯ ದಾಳಕ್ಕೆ ಬಲಿಗೊಡತಕ್ಕಂಥ ಕೆಲಸವನ್ನು ನೀವೂ ಮಾಡಬಾರದು, ನಾನೂ ಮಾಡಬಾರದು. Yes, sitting at Delhi ಬೊಮ್ಮಾಯಿಯವರಾಗಲಿ, ದೇವೇಗೌಡರಾಗಲಿ they may give some suggestions. Nothing wrong about it. But, it is for you

to act. ಇದರ ಪೂರ್ತಿ ಜವಾಬ್ದಾರಿಯನ್ನು ಇವೊತ್ತು ನಿಮ್ಮ ಸರ್ಕಾರ ಹೊರಬೇಕಾಗುತ್ತದೆ. Have you discussed in the Cabinet, atleast forget about the legal cell or the technical cell or the Cabinet Sub-Committee or at least in the Cabinet? ಸಂಪುಟ ಸಭೆಯನ್ನಾದರೂ ರಾತ್ರಿ ಕರೆಯಬಹುದಿತ್ತು. ನಾವು ಅಧಿಕಾರದಲ್ಲಿದ್ದಂಥ ಸಮಯದಲ್ಲಿ ತುರ್ತಾಗಿ ಯಾವುದಾದರೊಂದು ಮಹತ್ವದ ವಿಷಯವಾಗಿ ನಿರ್ಣಯ ಕೈಗೊಳ್ಳಲು ಮಧ್ಯರಾತ್ರಿಯಲ್ಲೂ ಸಚಿವ ಸಂಪುಟದ ಸಭೆ ಕರೆಯುತ್ತಿದ್ದೆವು. ಆ ರೀತಿ ಸಭೆ ನಡೆಸಿ ನಿರ್ಣಯಗಳನ್ನು ತೆಗೆದುಕೊಂಡಂಥ ಅನೇಕ ಪ್ರಸಂಗಗಳಿವೆ. ತಾವು ಈ ರೀತಿ ಮಾಡುವುದಕ್ಕೆ ಹೋಗದೆ, ರಾತ್ರಿ ತಮ್ಮ ಪಕ್ಷದ ಶಾಸಕಾಂಗ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು ಮರುದಿನ ಬೆಳಿಗ್ಗೆ 8.00 ಗಂಟೆಗೆ ತಮಿಳುನಾಡಿಗೆ ನೀರು ಬಿಟ್ಟಿರಿ. We have got actual position. Preparation started in the night. Actual release started at 8.AM.

5-50 ಪಿ.ಎಂ.

ಅದರ ಬಗ್ಗೆಯೂ ಸರಿಯಾದಂಥ ಮಾಹಿತಿಯನ್ನು ತಾವು ಕೊಡುತ್ತಿಲ್ಲ. ತಾವು ಒಂಭತ್ತು ಗಂಟೆಯೆಂದು ಹೇಳುತ್ತೀರಿ, ತಮ್ಮ ವಿಧಾನಮಂಡಲದ ಕಾರ್ಯದರ್ಶಿಯವರು ಹತ್ತೂವರೆ ಗಂಟೆಯಂದು ಹೇಳಿದ್ದಾರೆ. ಇನ್ನು ಕೆಲವರು ಏನು ಹೇಳುತ್ತಾರೋ ಗೊತ್ತಿಲ್ಲ. ಆದರೆ ಇಂಥಹ ಪ್ರಮುಖವಾದ ಪ್ರಶ್ನೆಬಂದಾಗ ಸಂಪೂರ್ಣವಾದ ಜವಾಬ್ದಾರಿಯಿಂದ ಸರ್ಕಾರ ನೋಡಿಕೊಳ್ಳಲಿಲ್ಲ ಎನ್ನತಕ್ಕ ವೇದನೆ ನಮಗೆ ಇದೆ. ಸರ್ಕಾರದ ಮೇಲೆ ಆರೋಪಣೆಯಲ್ಲ. ನಮಗೆ ಇದು ಒಂದು ರೀತಿಯಾದ ನೋವಾಗಿದೆ, ಆ ನೋವನ್ನು ತೋಡಿಕೊಳ್ಳತಕ್ಕ ಕೆಲಸವನ್ನು ನಾವು ಇಲ್ಲಿ ಮಾಡುತ್ತಿದ್ದೇವೆಯೇ ಹೊರತು ರಾಜಕೀಯದಾಗಿ ನಿಮ್ಮನ್ನು ಬಲಿಕೊಡಬೇಕು ಎನ್ನತಕ್ಕ ಉದ್ದೇಶ ನಮಗೆ ಖಂಡಿತವಾಗಿ ಇಲ್ಲ. ನಾನು ಈಗಾಗಲೇ ಹೇಳಿದ ಪ್ರಕಾರ even in the total flow in the bad year is 333.5 TMC. ಆದ್ದರಿಂದ 205 ಟಿ.ಎಂ.ಸಿ ನೀರು ಮಾತ್ರವಲ್ಲ ಕೇರಳ ಇನ್ನೊಂದು 3.3 ಅಪ್ರೋಪ್ರಿಯೇಟ್ ಮಾಡಿದರೆ plus 3.5 TMC in th upstream of Mettur dam ಉಪಯೋಗ ಮಾಡಿದರೆ it is not mere 205 TMC, but it comes to 211.8 TMC. ಆದ್ದರಿಂದ ಇವತ್ತು ತೊಂದರೆ ಇರುವ, ಬರಗಾಲವಿರುವ ವರ್ಷದಲ್ಲಿ ತಮಿಳುನಾಡು ಕೇವಲ 25 ಟಿ.ಎಂ.ಸಿ ನೀರಿನಷ್ಟು ಮಾತ್ರ ಸಫರ್ ಆಗುತ್ತದೆ. ಆದರೆ ನಾವು ಕಷ್ಟಕಾಲದಲ್ಲಿ 80ಪರ್‌ಸೆಂಟ್ ಸಫರ್ ಆಗುತ್ತೇವೆ. ತಮಿಳುನಾಡಿನವರು 25 ಪರ್‌ಸೆಂಟ್ ಸಹ ಸಫರ್ ಆಗಲಿಕ್ಕೆ ತಯಾರಿಲ್ಲ. ಕಷ್ಟಕಾಲದಲ್ಲಿ ನಮಗೆ 80 ಪರ್‌ಸೆಂಟ್ ನೀರು ಇರುವುದಿಲ್ಲ, 20 ಪರ್‌ಸೆಂಟ್ ಮಾತ್ರ ನೀರನ್ನು ಉಪಯೋಗ ಮಾಡಬೇಕು. ಇದು ಯಾವ ರೀತಿಯಾದ ನ್ಯಾಯ. ಈ ಅನ್ಯಾಯದ ವಿರುದ್ಧ ನಾಡಿನ ಜನತೆಯ ಪರವಾಗಿ ಸರ್ಕಾರದ ಪರವಾಗಿ ತಾವು ಹೋರಾಟ ಮಾಡಬೇಡವೇ? ಪೊಲಿಟಿಕಲ್

ಎಕ್ಸ್‌ಪೀಡಿಯನ್ಸಿಗಾಗಿ, ರಾಜಕಾರಣದ ಒಂದು ಸಮಯಾವಕಾಶವಾದಿಗಳಾಗಿ ರಾಜ್ಯದ ಹಿತಾಸಕ್ತಿಯನ್ನು ತಾವು ಯಾವ ಹಕ್ಕಿನಿಂದ ಬಲಿಕೊಡುತ್ತಿದ್ದೀರಿ? ಕಳೆದ ವರ್ಷ ಮೊದಲು 5 ಟಿಎಂಸಿ ಅನಂತರ 6 ಟಿಎಂಸಿ ಒಟ್ಟು 11 ಟಿಎಂಸಿ ನೀರನ್ನು ಬಿಟ್ಟಿರಿ. ಈ ಸಾರಿ 5 ಟಿಎಂಸಿ ನೀರು ಬಿಟ್ಟಿದ್ದೀರಿ. ಇನ್ನೂ ಸುಪ್ರೀಮ್‌ಕೋರ್ಟ್, ಟ್ರಿಬ್ಯೂನಲ್‌ರವರ, ಪ್ರಧಾನಿಯವರ ವರ ಇನ್ನೊಂದು ಇರಬಹುದು, ಆದರಿಂದ ಸ್ವಲ್ಪ ನೀರು ಬಿಡುವುದಾಗಿ ಬರಬಹುದು, ಹೀಗಾದರೆ ನಮ್ಮ ಕರ್ನಾಟಕ ರಾಜ್ಯದ ಗತಿಯೇನಾಗಬೇಕು? ತಾವು ನಮ್ಮಲ್ಲಿ ಸಾಕಷ್ಟು ನೀರಿದೆಯೆಂದು ಹೇಳಿದ್ದೀರಿ. ಅದು ರೆಕಾರ್ಡ್‌ನಲ್ಲಿದೆ. ಇಲ್ಲದೇ ಇದ್ದ ನೀರನ್ನು ಇದೆಯೆಂದು ಹೇಳಿದ್ದೀರಿ. ನಲವತ್ತು ವರ್ಷಗಳ ಕಾವೇರಿ ನೀರಿನ ಇತಿಹಾಸದಲ್ಲಿ ಬಹುಶಃ ಯಾವ ಮುಖ್ಯಮಂತ್ರಿಗಳಾಗಿರಲಿ ನೀರಾವರಿ ಮಂತ್ರಿಗಳಾಗಿರಲಿ ಈ ರೀತಿಯಾದ ಮಾತನ್ನು ಹೇಳಿರಲಿಲ್ಲ. ಇದರ ಬಗ್ಗೆ ತಾವು ಗ್ರಹಿಸಿ ಅನಂತರ ಉತ್ತರವನ್ನು ಕೊಡಿ. ಅವಸರ ಮಾಡಬೇಡಿ. Please ponder over this matter and discuss with your people.

SRI K.N.NAGE GOWDA:- I agree with you. I know your efforts. Before making any statement I have consulted all my techincal sell. still they are all here. For the last two days we are continuously discussing. Without discussing I am not going to inform anything to this House.

ಶ್ರೀ ಎಂ.ವೀರಪ್ಪ ಮೊಯಿಲಿ:- ಯಾವ ತಾಂತ್ರಿಕ ಸಮಿತಿ? ನೀರಾವರಿ ಕಾಯಿದರ್ಶಿಯವರೊಬ್ಬರು, ಮುಖ್ಯ ಕಾರ್ಯದರ್ಶಿಯವರೊಬ್ಬರಿದ್ದರೆ ಅದು ತಾಂತ್ರಿಕ ಕೋಶವಾಗುತ್ತದೆಯೇ? ಬೆಳಗ್ಗೆ 9 ರಿಂದ 10-45ರವರೆಗೆ ಸಭೆಯಾಯಿತು. ಅನಂತರ ಇಲ್ಲಿ ವಿಧಾನಸಭೆ ನಡೆಯಿತು. ನೀವೇನು ಒಂದೇ ದಿವಸದಲ್ಲಿ ಲೀಗಲ್ ಸೆಲ್, ಟೆಕ್ನಿಕಲ್ ಸೆಲ್, ಕ್ಯಾಬಿನೇಟ್ ಸಭೆ, ಕ್ಯಾಬಿನೇಟ್ ಸಬ್‌ಕಮಿಟಿ ಎಲ್ಲದರಲ್ಲೂ ಚರ್ಚೆ ಮಾಡಿದ್ದೀರೋ? I have not heard cabinet meeting being held. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ್ದೀರಾ? ಯಾವ ಸೆಲ್‌ನಲ್ಲಿ ಚರ್ಚೆ ಮಾಡಿದ್ದೀರಿ? ಆದ್ದರಿಂದ ಇದರ ಬಗ್ಗೆ ಮೊದಲು ಗ್ರಹಿಸಿ ಅನಂತರ ಉತ್ತರವನ್ನು ಕೊಡಿ. ಅವಸರದಲ್ಲಿ ಉತ್ತರವನ್ನು ಕೊಡಬೇಡಿ. ಹಾಗಾದರೆ your technical cell, legal cell did they say there is surplus water, you release water? ಅಂಥಹ ವರದಿಯನ್ನು ಟೆಕ್ನಿಕಲ್ ಸೆಲ್, ಲೀಗಲ್ ಸೆಲ್ ಕೊಟ್ಟಿದ್ದರೆ ದಯಮಾಡಿ ಆ ವರದಿಯನ್ನು ವಿಧಾನಸಭೆಯಲ್ಲಿ ಇಡಬೇಕು

(Interruption)

SRI K.N.NAGE GOWDA:- They never said "surplus".

SRI M.VEERAPPA MOILY:- Please place that record on the floor of the House. We want a tangible report. We would like to hold that technical cell responsible.

SRI K.N.NAGE GOWDA:- I have never said suplus. I said ಜುಲೈ 1996ರವರೆಗೆ ನಮಗೆ ಮತ್ತು ರಾಜ್ಯಕ್ಕೆ ಎಷ್ಟು ನೀರು ಬೇಕೋ ಅಷ್ಟು ಇದೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ನಮ್ಮಲ್ಲಿ ಸಾಕಷ್ಟು ನೀರಿಲ್ಲವೆಂದು ಮೇಲ್ಮನೆಯಲ್ಲಿ ಮತ್ತು ಕೆಳಮನೆಯಲ್ಲಿ ಕ್ಲಾರಿಫೈ ಮಾಡಿದ್ದೇನೆ. ನಮ್ಮಲ್ಲಿರತಕ್ಕ ನಾಲ್ಕು ಪ್ರಮುಖವಾದ ನೀರಾವರಿ ಅಚ್ಚುಕಟ್ಟು ಪ್ರದೇಶವಾದ 6.7 ಲಕ್ಷ ಎಕರೆಗೆ ನೀರನ್ನು ಕೊಡಲು ಸಾಧ್ಯವಿದೆ. I cannot mislead my farmers. I must intimate through this House to all my farmers that we have got water for 6.7 lakh acres. I have consulted everybody. It is right.

SRI.M.VEERAPPA MOILY:- We want those legal reports to be placed before this House. All technical details, and technical opinion in writing will have to be placed before this House.

SRI K.N.NAGE GOWDA:- I will place all the technical facts.

(Interruptions)

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಉಪಾಧ್ಯಕ್ಷರೇ, ನನಗೆ ಇಲ್ಲಿನ ವಾತಾವರಣ ಅರ್ಥವಾಗುತ್ತಿಲ್ಲ. I think we are exceeding our limitations. I don't know. ನಾನು ನಿನ್ನೆಯಿಂದ ಗಮನಿಸುತ್ತಿದ್ದೇನೆ ನಾವು ಏನು ಚರ್ಚೆ ಮಾಡಬಾರದೋ ಅವೆಲ್ಲವನ್ನೂ ಚರ್ಚೆ ಮಾಡುತ್ತಿದ್ದೇವೆ. ತಮಿಳುನಾಡಿನಲ್ಲಿ ಎಷ್ಟು ಬೆಳೆದುನಿಂತ ಫಸಲು ಇದೆ, ಅದಕ್ಕೆಷ್ಟು ನೀರುಬೇಕು ಎಂಬ ಬಗ್ಗೆ ಮಾತ್ರ ಯಾವುದೇ ಮಾಹಿತಿ ತಮ್ಮ ಬಳಿ ಇಲ್ಲ. ತಮಿಳುನಾಡಿನವರ ಹತ್ತಿರ ಎಷ್ಟು ನೀರಿದೆ ಎಂದು ಹೇಳಿದ್ದೀರಿ. ಆದರೆ ಬೆಳೆ ಎಷ್ಟು ಇದೆ ಎಂಬ ಬಗ್ಗೆ ಹೇಳಲಿಲ್ಲ. ಅವರ ಬೆಳೆ ಎಷ್ಟಿದೆ ಎಷ್ಟು ನೀರು ಬೇಕು ಎಂಬ ಬಗ್ಗೆ ಲೆಕ್ಕ ಹಾಕಿಲ್ಲ. I think, it is better we put restraint on our talks.

ಶ್ರೀ ಕಾಗೋಡುತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೆ, ಕಳೆದ ನಲವತ್ತು ವರ್ಷಗಳ ಇತಿಹಾಸದಲ್ಲಿ ನಾವು ಶಾಸನಸಭೆಯಲ್ಲಿ ನಡೆದುಕೊಂಡು ಬಂದಿರುವ ನಡವಳಿಕೆಯನ್ನು ಗ್ರಹಿಸಿದರೆ, ಅದು ಅಧಿಕಾರದಲ್ಲಿದ್ದವರು ಇರಬಹುದು ವಿರೋಧ ಪಕ್ಷದವರಿರಬಹುದು, ಕಾವೇರಿ ವಿಚಾರದಲ್ಲಿ ಯಾವುದೇ ರೀತಿಯಾದ ದೀರ್ಘವಾದ

ಚರ್ಚೆ ಅನಾವಶ್ಯಕ ಎನ್ನತಕ್ಕ ತೀರ್ಮಾನಕ್ಕೆ ಬಂದಿದ್ದೆವು. ಏಕೆಂದರೆ ನಮ್ಮ ಕೇಸು ಟ್ರಿಬ್ಯೂನಲ್ ಮುಂದಿರುವಾಗ ನಮಗೆ ಆತಂಕವನ್ನು ಉಂಟುಮಾಡತಕ್ಕ ಸಂದರ್ಭವಿದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಅಂಕಿಅಂಶಗಳನ್ನು, ಮಾಹಿತಿಯನ್ನು ಸದನದಲ್ಲಿ ಪ್ರಕಟಣೆ ಮಾಡಬಾರದೆಂದು ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರೆಲ್ಲರೂ ಬದ್ಧತೆಗೆ ಒಳಗಾಗಿ ಬಂದಿದ್ದೇವೆ. ಆದರೆ ದುರ್ದೈವದ ಸಂಗತಿಯೇನೆಂದರೆ, ಈ ಎಲ್ಲಾ ಕಟ್ಟುಬದ್ಧತೆಯನ್ನು ಮುರಿದುಹಾಕುವ ರೀತಿಯಲ್ಲಿ ಸರ್ಕಾರದಿಂದಲೇ ಪ್ರಾರಂಭವಾಗಿದೆ. ಆ ರೀತಿ ಎಲ್ಲಾ ಅಂಕಿಅಂಶಗಳನ್ನು ಇಲ್ಲೇ ಇಟ್ಟುಬಿಟ್ಟರೆ ನಾಳೆ ಕೋರ್ಟ್‌ನಲ್ಲೇನು ಹೇಳುತ್ತೀರಿ? ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರ ಸ್ಥಾನದಲ್ಲಿ ಅಂದು ದೇವೇಗೌಡರು ಕುಳಿತಿದ್ದರು, ಅವರೇ ಇನ್‌ಷಿಯೇಟ್ ಮಾಡುತ್ತಿದ್ದರು. ನಂಜೇಗೌಡರು ಇದ್ದರು. ದೇವೇಗೌಡರು ಇದ್ದರು ಚನ್ನಬಸಪ್ಪನವರು ಇದ್ದರು, ಇವರುಗಳೆಲ್ಲರೂ ಕಾವೇರಿ ನದಿಯ ವಿಚಾರವಾಗಿ ಹೋರಾಟ ಮಾಡಿದ್ದಾರೆ. ದೇವರಾಜ್‌ಅರಸುರವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೂ ಸಹ ಅವತ್ತಿನಿಂದ ಈವತ್ತಿನವರೆಗೂ ಈ ವಿಚಾರವನ್ನು ಇಷ್ಟೊಂದು ಬಹಿರಂಗವಾಗಿ ಶಾಸನಸಭೆಯಲ್ಲಿ ಬಿಚ್ಚಿಡಲು ಹೋಗಲಿಲ್ಲ. ಇದು ನಮ್ಮ ಆಂತರಿಕವಾದಂಥ ವಿಷಯ. ಆದಕ್ಕೆ ಎಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು. ನೀವು ನಿನ್ನೆ ಹೇಳಿರುವ ಮಾತಿನಿಂದ ನಮಗೆ ದಂಗು ಬಡಿದಂತಾಗಿದೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾನೇನು 30 ಟಿ.ಎಂ.ಸಿ.ನೀರಿದೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಅದರ ಬಗ್ಗೆ ಈಗಾಗಲೇ ಟ್ರಿಬ್ಯೂನಲ್ ಮುಂದಾಗಲಿ, ಆ ಸೆಂಟ್ರಲ್ ವಾಟರ್ ಕಮಿಷನ್ ನವರ ಹತ್ತಿರ ನೆಟ್‌ವರ್ಕ್ ಇದೆ. ಅದರಲ್ಲಿ ಅವರಿಗೂ ಮಾಹಿತಿ ಗೊತ್ತಾಗುತ್ತದೆ. ಅಥವಾ ಸುಪ್ರೀಮ್ ಕೋರ್ಟ್‌ನವರು ಅದನ್ನು ತರಿಸಿಕೊಳ್ಳಬಹುದು, ಟ್ರಿಬ್ಯೂನಲ್‌ನವರು ಬೇಕಾದರೆ ತರಿಸಿಕೊಳ್ಳಬಹುದು, ತಮಿಳುನಾಡು ಬೇಕಾದರೂ ತರಿಸಿಕೊಳ್ಳಬಹುದು, ನಾವು ಬೇಕಾದರೂ ತರಿಸಿಕೊಳ್ಳಬಹುದು. ಅಷ್ಟು ಪರ್‌ವ್ಯೂನಲ್ಲಿ ಯಾವುದೇ ರೀತಿಯಾದ ಮುಚ್ಚುಮರೆಯಿಲ್ಲ. ಅದರ ಬಗ್ಗೆ ತಮಗೂ ಗೊತ್ತಿದೆ.

(Interruptions)

SRI H.SHIVAPPA:- We are creating evidence which can be used against us.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹಾಗಾದರೆ ಉಳಿದಿರುವ ವಿಷಯವೇನು? ನಿನ್ನೆ ಮುಖ್ಯಮಂತ್ರಿಯವರು ನಮ್ಮಲ್ಲಿ ನೀರೇ ಇಲ್ಲ, ನೀರನ್ನು ಬಿಡತಕ್ಕ ಪ್ರಶ್ನೆಯೇ ಬರುವುದಿಲ್ಲ, ನಾನೇನು ನೀರನ್ನು ಬಿಡುತ್ತೇನೆಂದು ಹೇಳಲೇ ನೀರಿದೆಯೆಂದು ಹೇಳಲೇ? ಯಾರೂ ಕೂಡ ಅದರ ಬಗ್ಗೆ ಹೇಳುವುದಿಲ್ಲವೆಂದು ಹೇಳಿದ್ದರು. ಆದರೆ ನೀರಾವರಿ ಸಚಿವರಾದ ನಾಗೇಗೌಡರು ನಮ್ಮಲ್ಲಿ ನೀರಿದೆ, ತಮಿಳುನಾಡಿಗೆ ನೀರನ್ನು

ಬಿಡುತ್ತೇವೆಂದು ಹೇಳಿದ್ದಾರೆ. ಅಂದರೆ ಮುಖ್ಯಮಂತ್ರಿಯವರದ್ದು ಒಂದು ಸ್ಟೇಟ್‌ಮೆಂಟ್ ನೀರಾವರಿ ಮಂತ್ರಿಗಳದ್ದು ಮತ್ತೊಂದು ರೀತಿಯಾದ ಸ್ಟೇಟ್‌ಮೆಂಟ್.

SRI KAGODU THIMMAPPA:- The Chief Minister is absent.

ಶ್ರೀ ಕೆ.ಎನ್.ನಾಗೇಗೌಡ:- ಅವರು ಹೊಸಕೋಟೆಯ ರ್‍ಯಾಲಿಯ ಕಾರ್ಯಕ್ರಮಕ್ಕೆ ಹೋಗಿದ್ದಾರೆ.

ಶ್ರೀ ಧರ್ಮಸಿಂಗ್:- ಇಲ್ಲಿ ವಿಧಾನಸಭೆಯ ಅಧಿವೇಶನ ನಡೆಯುತ್ತಿದೆ, ಮುಖ್ಯವಾದ ವಿಚಾರವಿರುವಾಗ ಎಲ್ಲಿಗೆ ಹೋಗುತ್ತಾರೆ? ಇದುಸರಿಯಿಲ್ಲ. ಯಾವ ರ್‍ಯಾಲಿಗೆ ಅವರು ಹೋಗಿದ್ದಾರೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಹೆಚ್ಚಾಗಿ ನೀರಿದೆ ಎಂದು ಏನಾದರೂ ಕಡತಕ್ಕೆ ಹೋಗಿದ್ದರೆ ಅದನ್ನು ತೆಗೆದುಹಾಕಬೇಕೆಂದು ಈ ಮನೆಯಲ್ಲಿ ಹೇಳಿದ್ದರು. ಕಡತದಿಂದ ಅದನ್ನು ತೆಗೆಯದಿದ್ದರೆ ತೊಂದರೆಯಾಗುತ್ತದೆಯೆಂದು ನಿನ್ನೆ ಮುಖ್ಯಮಂತ್ರಿಯವರೇ ಹೇಳಿದ್ದರು. ಆದರೆ ಆ ಮನೆಯಲ್ಲಿ ನೀವು ಧಾರಾಳವಾಗಿ ಸ್ಟೇಟ್‌ಮೆಂಟ್ ಕೊಟ್ಟು ಬಂದಿರಿ. ಮುಖ್ಯಮಂತ್ರಿಯವರು ಒಂದು ಹೇಳುತ್ತಾರೆ, ತಾವು ಮತ್ತೊಂದು ಸ್ಟೇಟ್‌ಮೆಂಟ್ ನೀಡುತ್ತೀರಿ, ಹಾಗಾದರೆ ಈ ಸದನದಲ್ಲಿ ಯಾರ ಮಾತು ಸತ್ಯ ಎಂಬುದನ್ನು ನಾವು ತಿಳಿದುಕೊಳ್ಳಬೇಕು?

ಶ್ರೀ ಕಾಗೋಡು ತಿಮ್ಮಪ್ಪ:- ತಾವು 5ಟಿಎಂಸಿ ನೀರನ್ನು ಬಿಡುವುದಕ್ಕಿಂತ ಮೊದಲು ಇಲ್ಲಿ ಒಂದು ಸರ್ಕಾರವಿದೆ, ಒಬ್ಬರು ಮುಖ್ಯಮಂತ್ರಿಯವರಿದ್ದಾರೆಂದು ನಿಮ್ಮನ್ನು ಯಾರಾದರೂ ಗುರುತು ಮಾಡಿದ್ದಾರೆಯೇ? ತಾವು 5 ಟಿಎಂಸಿ ನೀರನ್ನು ಬಿಡುವುದಕ್ಕೂ ಮೊದಲು ಒಂದು ಸರ್ಕಾರವಿದೆ, ಕ್ಯಾಬಿನೆಟ್ ಇದೆ, ಶಾಸನ ಸಭೆ ಇದೆ, ಒಬ್ಬರು ಮುಖ್ಯಮಂತ್ರಿಯವರಿದ್ದಾರೆಂದು ಯಾರಾದರೂ ನಿಮ್ಮನ್ನು ಗುರುತಿಸಿದ್ದಾರೋ? ಇದೇನು ನಿಮ್ಮ ಸ್ವಂತ ವ್ಯವಹಾರವೇ? ನಿಮಗೆ ಇದು ಆಟವಾಗಿದೆಯೇ?

ಶ್ರೀ ಎಂ.ವೀರಪ್ಪಮೊಯಿಲಿ:- ಅವರು ಹೇಳಿದ ಪ್ರಕಾರ ಒಂದು ಕ್ಯಾಬಿನೆಟ್ ಎಂದು ಇಲ್ಲವೇ? ಕೇವಲ ಒಬ್ಬರು ಮಂತ್ರಿಗಳು, ಮುಖ್ಯಮಂತ್ರಿಯವರು ಇದರಬಗ್ಗೆ ನಿರ್ಣಯ ತೆಗೆದುಕೊಳ್ಳುವುದೇ? ಇಡೀ ನಾಡಿನ ಉಳಿವು ನಾಶದ ಪ್ರಶ್ನೆಯಾಗಿರುವಾಗ ನಾವು ಒಬ್ಬರೇ ನಿರ್ಣಯ ತೆಗೆದುಕೊಳ್ಳುವುದೇ? ಪ್ರತಿವರ್ಷ ವರ್ಷದಲ್ಲಿ ಈ ಕೋಲೆರನ್ ಅಣೆಕಟ್ಟಿನ ಮೇಲೆ 240ಟಿ.ಎಂ.ಸಿ ನೀರು ಇದ್ದರೆ 442 ಟಿ.ಎಂ.ಸಿ ನೀರನ್ನು ತಮಿಳುನಾಡಿಗೆ ಕೊಟ್ಟಿದ್ದೀರಿ. ಇನ್ನೂ 5 ಟಿ.ಎಂ.ಸಿ ನೀರು ಕೊಡುತ್ತೀರಿ, ಆಗ 447 ಟಿ.ಎಂ.ಸಿ. ಆಗುತ್ತದೆ. ಇನ್ನೊಂದು 10 ಟಿ.ಎಂ.ಸಿ. ನೀರು ಕೊಟ್ಟರೆ 452 ಟಿ.ಎಂ.ಸಿ ಆಗುತ್ತದೆ. ಇನ್ನೊಂದು 15 ಟಿ.ಎಂ.ಸಿ. ಕೊಟ್ಟರೆ ತಮಿಳುನಾಡಿಗೆ 44[illegible]

ಟಿ.ಎಂ.ಸಿ.ಕೊಟ್ಟಂತೆ ಆಗುತ್ತದೆ. ಏಕೆ ಈ ಧಾರಾಳತನ? ಯಾರ ಹಣದ ಮೇಲೆ ಈ ಧಾರಾಳತನ ಮಾಡುತ್ತಿದ್ದೀರಿ? ತಾವು ದಯಮಾಡಿ ಇದರ ಬಗ್ಗೆ ಆಲೋಚನೆ ಮಾಡಬೇಕು. ಇದು ಬಹಳ ಗಂಭೀರವಾದಂತಹ ವಿಚಾರ. ಬಹಳ ಸಲುಗೆಯಿಂದ ಮಾಡತಕ್ಕ ವಿಚಾರವಲ್ಲ. ಇವತ್ತಿನ 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆ ನೋಡಿ. ತಾವೇನು ಹೇಳಿದ್ದೀರಿ, ಸರ್‌ಪ್ಲಸ್ ವಾಟರ್ ಇದೆ ಎಂದು ಹೇಳಿದ್ದೀರಿ. ರಿಲೀಜ್ ಮಾಡತಕ್ಕಂತಹ ನೀರು ಇದೆ, ನಮ್ಮ ರೈತರನ್ನು ಉಳಿಸಿಕೊಳ್ಳತಕ್ಕಂಥ... ಹಾಗಾದರೆ ನೀವು ಇವತ್ತು ಸುಪ್ರೀಂಕೋರ್ಟಿಗೆ, ಟ್ರಿಬ್ಯೂನಲ್‌ಗೆ ಸುಳ್ಳು ಹೇಳುತ್ತಿದ್ದೀರಾ? The State asks disputes tribunal to define distress forunla. ಇವತ್ತಿನ ಟೈಮ್ಸ್ ಆಫ್ ಇಂಡಿಯಾದಲ್ಲಿ Karnataka on Tuesday.... ಏನ್ನ, ಹಾಗಾದರೆ ಹಸಿ ಹಸೀ ಸುಳ್ಳು ಅಲ್ಲಿ ಹೇಳಿದ್ದೀರೋ ಇಲ್ಲಿ ಹೇಳಿದ್ದೀರಾ? ಎಂಬುದನ್ನು ತಾವು ದಯಮಾಡಿ ಹೇಳಬೇಕು. ಅದೂ ಸುಳ್ಳು, ಇದೂ ಸುಳ್ಳು, ನಿಮ್ಮನ್ನು ಯಾರು ನಂಬುತ್ತಾರೆ? ಇಲ್ಲಿ ಹೇಳಿದ್ದೀರಿ, ನೀವು ದಯಮಾಡಿ place that copy of the petition filed before the Tribunel on the table of the House. ದಯಮಾಡಿ ಏನು ಹೇಳಿದ್ದೀರಿ ಎಂಬುದು ನಮಗೂ ಗೊತ್ತಾಗಲಿ. ಪತ್ರಿಕೆಯಲ್ಲಿ ತಪ್ಪಿದ್ದರೆ ಅದನ್ನು ಹೇಳಿ. Karnataka on Tuesday (ie.july 9) sought before the cauvery Water Disputes Tribunal a definition of the formulas to determine 'distress' in a bad monsoon year and dismissed Tamil Nadu's charge of any conturnacious refusal by it to release water to Tamil Nadu in June. In an application filed before the Tribunal, Karnatka said that the non-adherence of ordered release of water in third and fourth week of june was due to a genuine and bonafide apprehension that the good inflow of that period may not be sustained in the subsequent weeks. ಏನು ಕರೆಕ್ಟ್? ಹಾಗಾದರೆ ಏಕೆ ನೀವು ಇದನ್ನು ಫೈಲ್ ಮಾಡಬೇಕು? what is the cause of action to file it? Sustained ಯಾಕೆ? ನೀರು ಇಲ್ಲ, ಆದ್ದರಿಂದ ಇವತ್ತು ಡಿಸ್ಟ್ರೆಸ್ ಫಾರ್ಮುಲಾ ಪ್ರಕಾರ ಕೂಡ ನೀರು ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ವಾದವನ್ನು ಈವತ್ತು ನೀವು ತಿರುವಿ ಹಾಕಿದ್ದೀರಿ. karnataka maintained that the dificiency in a particular week (in the instant case in the third and fourth weeks of June 1996) have to be made good later but not necessarily within the particular month in which the deficit occurs. ಇದನ್ನು ಎಲ್ಲಿ ಪ್ಲೀಡ್ ಮಾಡಲಿಕ್ಕೆ ನಿಮಗೆ ಸಾಧ್ಯವಾಗುತ್ತದೆ? Further they said:- The recorded flows during the first

week of July was just 10 percent of the recorded flows of the corresponding six years period... ಆರು ವರ್ಷದಿಂದ ಇಲ್ಲದೇ ಇರತಕ್ಕಂಥ ಒಂದು ಡೆಫಿಷಿಟ್ ಇವತ್ತು ಬೇಸಿನ್‌ನಲ್ಲಿ ಆಗಿದೆ ಎಂಬುದಕ್ಕೆ ಇದನ್ನು ಟ್ರಿಬ್ಯೂನಲ್ ಅಥವಾ ಸುಪ್ರೀಂಕೋರ್ಟ್‌ನ ಮುಂದೆ ಹೇಗೆ ಸಬ್‌ಸ್ಟ್ಯಾನ್‌ಷಿಯೇಟ್ ಮಾಡುತ್ತೀರಿ? ಆರು ವರ್ಷದಿಂದ ಇಷ್ಟು ಕಡಿಮೆ ನೀರಿರಲಿಲ್ಲ. The recorded flows during the first week of July was just 10 percent of the recorded flows of the corresponding six years period, making the shortage of recorded flows upto first week of July as 12.36 tmc ft less than the corresponding six years, the applicatin pointed out. ಇವತ್ತು ಆರು ವರ್ಷದಿಂದ ಇಲ್ಲದೇ ಇರತಕ್ಕಂತಹ ಒಂದು ಕಡಿಮೆ ಮಟ್ಟದ ನೀರಿನತಳ ಬತ್ತಿರುವಾಗ ತಾವು ಇವತ್ತು ನಾವು ನಮಗೆ ಬೇಕಾದಷ್ಟು ನೀರು ಉಪಯೋಗ ಮಾಡಿಕೊಂಡು 5ಟಿ.ಎಂ.ಸಿ. ಕೊಡತಕ್ಕ ಶಕ್ತಿ ನಮ್ಮಲ್ಲಿದೆ ಎಂಬುದನ್ನು ಇವತ್ತು ತಾವು ಹೇಳಿದ್ದೀರಲ್ಲಾ, ದಯಮಾಡಿ it you spend even a pie to the Supreme Court Advocate as against this plea we will sue you. ನಿಮ್ಮಿಂದ ಅದಕ್ಕೆ ತಗಲುವ ಹಣವನ್ನು ವಸೂಲು ಮಾಡಬೇಕಾಗುತ್ತದೆ. ಲೀಗಲ್ ಸೆಲ್ ಮಾಡತಕ್ಕಂತಹ ಖರ್ಚು, ನಿಮ್ಮ ಅಧಿಕಾರಿಗಳು ಡೆಲ್ಲಿಗೆ ಹೋಗತಕ್ಕಂತಹ ಖರ್ಚು, ಸುಪ್ರೀಂಕೋರ್ಟ್‌ನ ಅಡ್ವೋಕೇಟ್‌ರವರನ್ನು ನೇಮಕ ಮಾಡಿ ಅವರಿಗೆ ಕೊಡತಕ್ಕಂತಹ ಫೀಸು, I think one of us will file before the High Court to recover the entire amount. ಏಕೆ ಎಂದು ಹೇಳಿದರೆ, ಇವತ್ತು ಯಾವ ಅಡ್ವೋಕೇಟ್ ಕೂಡ I don't think any Advocate watching this, will argue your case before the Supreme Court. We are also practising Advocates. ಈ ವಾದ ಒಂದು ಕಡೆ ನೀವು ಸುಪ್ರೀಂಕೋರ್ಟ್‌ಗೆ ಕೊಡುತ್ತೀರಿ, ಟ್ರಿಬ್ಯೂನಲೆಗೆ ಕೊಡುತ್ತೀರಿ, ಈ ಸದನದಲ್ಲಿ ಇವತ್ತು ಒಂದು ರೀತಿಯಲ್ಲಿ ತಪ್ಪೊಪ್ಪಿಗೆಯ ಹೇಳಿಕೆ ಕೊಡುತ್ತೀರಿ You have become an Approver in an offence committed agaist the people of Karnataka, the farmers of Cauvery basin. ಇದನ್ನು ಹೇಗೆ ತಡೆದುಕೊಳ್ಳುತ್ತೀರೋ ನನಗೆ ಗೊತ್ತಿಲ್ಲ. I think we should get the complete details of the application.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ನೀರಾವರಿ ಸಚಿವರು ಯಾವುದೋ ಒತ್ತಡಕ್ಕೆ ಒಳಗಾಗಿ ನೀರು ಬಿಟ್ಟಿದ್ದಾರೆ. ನಿನ್ನೆ ಮಧ್ಯಾಹ್ನ 4 ಗಂಟೆಯವರೆವಿಗೂ ಮುಖ್ಯಮಂತ್ರಿಗಳಿಗೆ, ಈ ಸರ್ಕಾರಕ್ಕೆ ನೀರು ಬಿಡುವಂತಹ ಚಿಂತನೆ ಇರಲಿಲ್ಲ. ಅದಕ್ಕೋಸ್ಕರ ತಮಿಳುನಾಡಿನವರು ಸುಪ್ರೀಂಕೋರ್ಟ್‌ನಲ್ಲಿ ಎಸ್.ಎಲ್.ಪಿ.

ಅರ್ಜಿಯನ್ನು ಹಾಕುತ್ತಿದ್ದರು, ಅದಕ್ಕೆ ಮುಂಚೆ ನೀವು ಟ್ರಿಬ್ಯೂನಲ್ ಮುಂದೆ ಈ ಡಿಸ್ಟ್ರೆಸ್ ಫಾರ್ಮುಲಾ ಆಧಾರದ ಮೇಲೆ ನಮಗೆ ರಕ್ಷಣೆ ಬೇಕು ಎಂದು ಒಂದು ಅರ್ಜಿಯನ್ನು ಹಾಕುವುದಕ್ಕೆ ತೀರ್ಮಾನ ತೆಗೆದುಕೊಂಡು ನಿಮ್ಮ ಅಡ್ವೋಕೇಟ್ ಅಲ್ಲಿ ಅರ್ಜಿಯನ್ನು ಫೈಲ್ ಮಾಡಿದರು. ಅದಾದ ಮೇಲೆ, ಯಾವುದೋ ಮುಲಾಜಿಗೆ ನೀವು ಸಿಕ್ಕಿಹಾಕಿಕೊಂಡು, ನೀರು ಬಿಟ್ಟು ಸುಪ್ರೀಂಕೋರ್ಟ್‌ನಲ್ಲೂ ನಮ್ಮ ಕೇಸ್ ಅನ್ನು ಹಾಳು ಮಾಡಿದಿರಿ, ಜನರ ಮುಂದೆಯೂ ನಡೆಹಾಟಲಿಗೆ ಈಡು ಮಾಡಿದಿರಿ.

ಶ್ರೀ ಕೆ.ಎನ್.ನಾಗೇಗೌಡ:- ನಿನ್ನೆ ದಿವಸ ನಾನು ಬೆಳಿಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಡಿಸ್ಟ್ರೆಸ್ ಫಾರ್ಮುಲಾ ಬಗ್ಗೆ ಪಾಯಿಂಟ್ ಔಟ್ ಮಾಡಿದಾಗ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನನ್ನ ಹತ್ತಿರ ಫಿಗರ್ಸ್ ಇದೆ. ನಾನು ಬೆಳಿಗ್ಗನೇ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ. ನಾನು ಅದನ್ನು ಮಾನ್ಯ ಮೊಯ್ಲಿಯವರ ಗಮನಕ್ಕೂ ತರುತ್ತೇನೆ. ಜೂನ್ ಫಸ್ಟ್ ಅಂಡ್ ಸೆಕೆಂಡ್ ವೀಕ್, ಡಿಸ್ಟ್ರೆಸ್ ವೀಕ್, ಅದನ್ನೇ ನಾವು ಟ್ರಿಬ್ಯೂನಲ್ ಮುಂದೆ ಕೊಟ್ಟಿರತಕ್ಕದ್ದು, ಜೂನ್ ಫಸ್ಟ್ ವೀಕ್ ಮತ್ತು ಸೆಕೆಂಡ್ ವೀಕ್‌ನಲ್ಲಿ.....

(ಗೊಂದಲ)

SRI K.N.NAGE GOWDA:- You referred only....

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ನೀರಾವರಿ ಸಚಿವರಾಗಿ ಒಂದು ಕ್ಷಣವೂ ಮುಂದುವರೆಯುವುದಕ್ಕಾಗುವುದಿಲ್ಲ.....

(ಗೊಂದಲ)

SRI K.N.NAGE GOWDA:- You never referred to third and fourth week..

ಶ್ರೀ ಬಿ.ಎಸ್.ಯಡಿಯೂರಪ್ಪ:- ಈಗ ನೀವು ಮಾಡಿರುವಂತಹ ಈ ಅಪರಾಧಕ್ಕೆ ನಮ್ಮೆಲ್ಲರ ಒಕ್ಕೊರಲಿನ ಒತ್ತಾಯ ಏನೆಂದರೆ, ಈ ಅಪರಾಧ ಮಾಡಿರುವಂತಹ ನೀವು ಒಂದು ಕ್ಷಣವೂ ಕೂಡ ಸಚಿವರಾಗಿ ಮುಂದುವರೆಯುವುದಕ್ಕೆ ಸಾಧ್ಯವಿಲ್ಲ. ರಾಜೀನಾಮೆ ಕೊಟ್ಟು ಹೊರಗಡೆ ಹೋಗಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ವರದಿಯನ್ನು ಮುಂದೆ ಓದುತ್ತೇನೆ. "Besides, even comparing the rainfall in the Karnataka of the Cauvery basin received during the five week period commencing from June1, 1996, was much less than the normal rainfall of the same five weeks period or in the coresponding six years considered by the tribunal as representative years, it said. Then proceeding, the present storage in Mettur reservoir and the availability of good

rain water and ground water in the delta including new delta can sustain about one lakh acres of Kuruvi crop, which would be more than the area cultivated by Tamil Nadu while passing interim order on June 25, 1991, Karnataka contended. ಇಂಟೀರಿಯಮ್ ಆರ್ಡರ್ ಪಾಸ್ ಮಾಡುವಾಗ ದಿನಾಂಕ 23.6.91ರಂದು ಇದ್ದಂತಹ ಕುರುವೈ ಕ್ರಾಪ್‌ನಿಂದ ಒಂದು ಲಕ್ಷ ಎಕರೆಗಳಷ್ಟು ಜಾಸ್ತಿ ಕುರುವೈ ಕ್ರಾಪ್ ಅನ್ನು ಬೆಳೆಸಿದ್ದಾರೆ, ಬೆಳೆಸುತ್ತಾ ಇದ್ದಾರೆ. ಅದಕ್ಕೆ ನೀವು ಕೊಡತಕ್ಕಂತಹ ಬೋನಸ್ ಈ 5 ಟಿ.ಎಂ.ಸಿ. ನೀರು. ಆ ಬೋನ್‌ಸ್ ಅನ್ನು ಇವತ್ತು ನೀವು ಅವರಿಗೆ ಕೊಟ್ಟಿದ್ದೀರಿ. ಅವರಿಗೆ ಪಾಪ ಹಾರ್ಡ್‌ಷಿಫ್ ಆಗುತ್ತದೆ, ಇಂಟೀರಿಯಮ್ ಆರ್ಡರ್ ಮಾಡಿದ ಮೇಲೆ ಒಂದು ಲಕ್ಷ ಎಕರೆಗಳಷ್ಟು ಕುರುವೈ ಕ್ರಾಪ್ ಬೆಳೆಸಿದ್ದಾರೆ, ಪಾಪ ಬೆಳಿಸಿಕೊಳ್ಳಲಿ, ಅವರು ಇನ್ನಷ್ಟು ಎಕರೆ ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಡಿ. ನಮ್ಮ ರೈತರು ಸಾಯಲಿ. ಇನ್ನೊಂದು ಬೋನಸ್ ಕೊಡಿ. ಒಂದು ಬೋನಸ್ ಆಯಿತು, ಅದರ ಮೇಲೆ ಇನ್ನೊಂದು ಬೋನಸ್ ಕೊಡಿ. ಹೋದ ಸಾರಿ 11 ಟಿ.ಎಂ.ಸಿ. ಕೊಟ್ಟಿದ್ದೀರಿ, ಈಗ 5 ಟಿ.ಎಂ.ಸಿ ಕೊಟ್ಟಿದ್ದೀರಿ, ನೀರು ಇನ್ನೂ ಇದೆ ಎಂದು ಹೇಳಿದ್ದೀರಿ, ಅದು ನಿಮ್ಮ ತಪ್ಪೊಪ್ಪಿಗೆ you have become an approver. ಇದನ್ನು ಮಾಡಿ. ಆದ್ದರಿಂದ ಇಂತಹ ಒಂದು ಗಂಭೀರ ಪರಿಸ್ಥಿತಿ ಉದ್ಭವ ಆದಂತಹ ಒಂದು ಸಂದರ್ಭದಲ್ಲಿ ತಾವು ದಯಮಾಡಿ ಇನ್ನೂ ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ತಾವು ಹೇಳಿದ್ದೀರಿ, ನಮ್ಮಲ್ಲಿ ಈ ಒಂದು ನಿರ್ಣಯವನ್ನು ಏನು ಮಾಡಿದ್ದೀರಿ ಈ ಸದನದಲ್ಲಿ, ನಾಲ್ಕು ಅಂಶದ ನಿರ್ಣಯವನ್ನು ತಾವು ಈ ಸದನದಲ್ಲಿ ಮಾಡಿದ್ದೀರಿ. ಸರ್ವೋಚ್ಚ ನ್ಯಾಯಾಲಯವು ಮಾನ್ಯ ಪ್ರಧಾನ ಮಂತ್ರಿಗಳಿಗೆ ಮಾಡಿದ ವಿನಂತಿಯ ಮೇರೆಗೆ ಸೌಹಾರ್ದತೆಯ ವಿಚಾರ, 6 ಟಿ.ಎಂ.ಸಿ ನೀರು ಬಿಡಬೇಕೆಂದು ಹೇಳಿ, ಅದಕ್ಕೆ ಏಕೆ ಒಪ್ಪಿದ್ದೀವಿ ನಾವು we became a party. ಅನೇಕ ಜನ ಇದಕ್ಕೆ ಒಪ್ಪಲಿಕ್ಕೆ ತಯಾರು ಇರಲಿಲ್ಲ. ಪಾಪ ಮಾನ್ಯ ಪುಟ್ಟಣ್ಣಯ್ಯನವರು ಬಹಳ ಕಷ್ಟಪಟ್ಟರು, ಮಾನ್ಯ ನಂಜೇಗೌಡರು ಅವರನ್ನು ಒಪ್ಪಿಸಿ ಬಹಳ ಕಷ್ಟಕ್ಕೆ ಬಿದ್ದರು, ಮಾನ್ಯ ವಾಟಾಳ್ ನಾಗರಾಜ್‌ರವರಂತೂ ಒಪ್ಪಲೇ ಇಲ್ಲ, ಬಹುಶಃ ಅವರೇ ಬುದ್ಧಿವಂತರು ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾವೆಲ್ಲಾ ಹೆಡ್ಡರು ಆದೆವು.

ಆರು ಟಿ.ಎಮ್.ಸಿ.ನ್ನು ಇವತ್ತು ಏಕೆ ಬಿಡುವುದಕ್ಕೆ ಒಪ್ಪಿಕೊಂಡೆವು, ಏಕೆ ಬಿಟ್ಟೆವು ಎಂದರೆ, ಆಗಿನ ಪ್ರಧಾನಿಯವರು ನಮಗೆ ಆಶ್ವಾಸನೆ ಕೊಟ್ಟಿದ್ದರು. ಅದು ಏನೆಂದರೆ ಕೇಂದ್ರ ಜಲ ಸಂಪನ್ಮೂಲ ನೀತಿಯ ಮಾರ್ಗದರ್ಶಿ ಸೂತ್ರವನ್ನು, ಗೈಡ್‌ಲೈನ್ಸ್‌ನ್ನು ನಾನು He said, I propose water Resources Council in which all Chief Ministers are Members in early February to discuss and adopt the above policy guidelines." There is an assurance by the former Prime Minister that he will not

only allow discussions he will see that it is adopted. This is the concrete assurance given by then Prime Minister. ಯಾವುದಕ್ಕಾಗಿ ನಾವು ರಾತ್ರಿ ಹಗಲು ಬೆಂಬಲಿಸುತ್ತಿದ್ದೇನೆ, ಗೈಡ್‌ಲೈನ್ಸ್ ಬರಬೇಕು, ಗೈಡ್‌ಲೈನ್ಸ್ ಇಲ್ಲದೆ ಟ್ರಿಬ್ಯುನಲ್‌ನ ಯಾವುದೇ ಒಂದು ವಿವಾದದ ತೀರ್ಪು ಅಪೂರ್ಣವಾಗುತ್ತದೆ. ಅಪರಿಪಕ್ವವಾಗುತ್ತದೆ. ಎಂಬ ಯಾವ ವಾದವನ್ನು ನಾವು ಮುಂದೆ ಮಾಡಿಕೊಂಡು ಬಂದಿದ್ದೇವೆ ಇದು ನಮ್ಮ ಹತ್ತಿರದಲ್ಲಿ ಬಾಗಿಲಲ್ಲಿ ಬಂದು ನಿಂತಿದೆ. ಇವತ್ತು ಬಾಗಿಲು ತಟ್ಟುತ್ತಿದೆ. ಇಂತಹ ಒಂದು ವರದಾನ ಎಂದು ಹೇಳಿದಾಗ ನಮ್ಮ ನಂಜೇಗೌಡರು ನಾವು ಎಲ್ಲಾ ಮಾತನಾಡಿಕೊಂಡು ಇದು ಬಹುಶಃ ನಮ್ಮ ಕರ್ನಾಟಕದ ಇತಿಹಾಸದಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದ ಜಲ ನೀತಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗುತ್ತದೆ ಎಂಬ ಒಂದು ಹಂಬಲದಿಂದ ನಾವು ಆರು ಟಿ.ಎಂ.ಸಿ. ನೀರನ್ನು ಬಿಟ್ಟು ಕೊಟ್ಟೆವು, ಇಲ್ಲದಿದ್ದರೆ ಇದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಇಲ್ಲಿ ಆರು ಟಿ.ಎಮ್.ಸಿ. ಬಿಟ್ಟುಕೊಟ್ಟರಿ ಲಾಸ್ಟ್ ಟೈಮ್ ಈ ವರ್ಷ ಐದು ಟಿ.ಎಮ್.ಸಿ ಬಿಟ್ಟರಿ ಏನು ಈ ಪ್ರಶ್ನೆ ಅಲ್ಲ. ಇವತ್ತು ಈ ವಿಚಾರವನ್ನು ನೀವು ಟ್ರಿಬ್ಯುನಲ್‌ಗೆ ಕೂಡ ತೆಗೆದುಕೊಂಡು ಹೋದಿರಿ, ಟ್ರಿಬ್ಯೂನಲ್‌ನಲ್ಲಿ ಒಂದು ಅಪ್ಲಿಕೇಷನ್ ಕೂಡ ಇವತ್ತು ಅಲ್ಲಿ ಹಾಕದಾಗ, ಟ್ರಿಬ್ಯುನಲ್‌ನಲ್ಲಿ ಅವರು ಏನು ಹೇಳಿದ್ದಾರೆ, ಏಕೆಂದರೆ you should have pursued this particular point. ಟ್ರಿಬ್ಯುನಲ್‌ನವರು ಮುಂದುವರಿಸಬೇಕು ಎಂದು ಹೇಳಿ ಸಿಟ್ಟಿಂಗ್‌ನ್ನು ಡೆಫರ್ ಮಾಡಬೇಕೆಂದು ಹೇಳಿದಾಗ, ಟ್ರಿಬ್ಯುನಲ್‌ನವರು ಏನು ಅಭಿಪ್ರಾಯ ಪಟ್ಟರು ಅಂದರೆ ಯಾವ ಒಂದು ವಾಟರ್ ರಿಸೋರ್ಸಸ್ ಕೌನ್ಸಿಲ್ ಇದೆ. ಇದು ಸಂವಿಧಾನದ ಪ್ರಕಾರ ಆಗಿಲ್ಲ. It has not been constituted according to the provisions of the Constitution... ಆದ್ದರಿಂದ ಇದಕ್ಕೆ ಗೈಡ್‌ಲೈನ್ಸ್ ಮಾಡತಕ್ಕಂತಹ ಹಕ್ಕು ಇಲ್ಲ ಎಂಬ ಅಭಿಪ್ರಾಯ ಟ್ರಿಬ್ಯುನಲ್‌ನವರು ವ್ಯಕ್ತ ಪಡಿಸಿದ್ದಾರೆ. ಇನ್ನೂ ನೀವು ನಮ್ಮ ಗಮನಕ್ಕೆ ತರಲಿಲ್ಲ, ಅಥವಾ ಕೇಂದ್ರದ ಗಮನಕ್ಕೆ ಇವತ್ತಿಗಾದರೂ ತಂದಿದ್ದೀರಾ? you should have brought it to the notices that it has not been constituted legally under the provisions of the Constitution. ಎಂಬ ಒಂದು ತೀರ್ಪನ್ನು ಟ್ರಿಬ್ಯುನಲ್‌ನವರು ಅವರು ಕೊಟ್ಟಾಗ ತಾವು ಇದರ ವಿಚಾರದಲ್ಲಿ they said it is the arguement of Mr.Parasaran which was upheld by the Hon'ble Tribunal.. ಅದೆಲ್ಲಾ ಇವತ್ತು ನೀವು ತೆಗೆದುಕೊಳ್ಳಲಿಲ್ಲ. Is it not very important? ಫೆಬ್ರವರಿ 1996 ಇವತ್ತು ನಮ್ಮ ಪ್ರಧಾನಿಯವರೇ ಇದ್ದಾರೆ, ಸೌಭಾಗ್ಯವಶಾತ್, ಬಾಕಿ ವಿಚಾರಕ್ಕಿಂತ ಇವತ್ತು he should have done it first. ಇದನ್ನು ಕಾನ್‌ಸ್ಟಿಟ್ಯೂಟ್ ಮಾಡತಕ್ಕಂತಹ ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ ಕಾನ್‌ಸ್ಟಿಟ್ಯೂಟ್ ಮಾಡತಕ್ಕಂತಹ ಕೆಲಸವನ್ನು ತಾವು ಗಮನಕ್ಕೆ ತರಬೇಕಾಗಿತ್ತು. ಪ್ರಧಾನಿಯವರು ಇದನ್ನು ಮಾಡಬೇಕಾಗಿತ್ತು. ಆದರೂ ಪರವಾಗಿಲ್ಲ ದಯಮಾಡಿ ಅದನ್ನೇ ತೆಗೆದುಕೊಳ್ಳಿ. ತಕ್ಷಣ ಈ ಸಭೆಯನ್ನು ಕರೆಯಿರಿ, ಅಲ್ಲಿ ಇವತ್ತು ನಿರ್ಣಯ

ಮಾಡಿ. ಇವತ್ತು ವಾಟರ್ ರಿಸೋರ್ಸಸ್ ಕೌನ್ಸಿಲ್ ಸಂವಿಧಾನದ ಪ್ರಕಾರ ಕಾನ್‌ಸ್ಟಿಟ್ಯೂಟ್ ಮಾಡಿಕೊಂಡು ಗೈಡ್‌ಲೈನ್ಸ್ ಮಾಡತಕ್ಕಂತಹ ಒಂದು ಟೈಮ್ ಬೌಂಡ್ ಪ್ರೋಗ್ರಾಂನ್ನು ಹಿಂದಿನ ಪ್ರಧಾನಿಯವರು ಕೊಟ್ಟ ವಚನವನ್ನು ಈ ಪ್ರಧಾನಿಯವರು ನೆರವೇರಿಸತಕ್ಕಂತಹ ಕೆಲಸವನ್ನು ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇದು ತಮ್ಮ ಕರ್ತವ್ಯವಾಗುತ್ತದೆ. ಆದರೆ ಇದು ಜಡ್ಜ್‌ಮೆಂಟ್ ಬಂತು ತಾವು ಈ ವರ್ಷ ಕೂಡ ನೀರು ಬಿಟ್ಟಿರಿ, ಇದಕ್ಕೆ ಯಾವ ಗಣನೆ ಕೂಡ ತಾವು ಮಾಡಲಿಲ್ಲ. ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರುವುದಿದ್ದರೆ ತಾವು ದಯಮಾಡಿ ಈ ಒಂದು ಟ್ರಿಬ್ಯುನಲ್ ಬಗ್ಗೆ, ನಮಗೆ ಗೊತ್ತಿತ್ತು ಏಕೆಂದರೆ when you make certain personal allegations against a judge either the case has to be transferred ಇಲ್ಲವೆಂದರೆ ನಮ್ಮ ಕೇಸ್‌ಗೆ ತೊಂದರೆಯಾಗುತ್ತದೆ. ಜಡ್ಜಸ್ ನ್ಯಾಚುರಲಿ ನಾನು ಹೇಳುವುದು. we all expected the then Chief Minister, ie, the present Prime Minister....

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇಂತಹ ಗಂಭೀರವಾದ ಚರ್ಚೆ ನಡೆಯುವಾಗ ಮುಖ್ಯ ಕಾರ್ಯದರ್ಶಿಗಳು ಇರಬೇಕಾಗಿದ್ದು ಬಹಳ ಅಗತ್ಯ. ಅತೀ ಮುಖ್ಯವಾಗಿ ನೀರಾವರಿ ಕಾರ್ಯದರ್ಶಿಯವರು ಇದ್ದಾರೆ, ಮುಖ್ಯ ಕಾರ್ಯದರ್ಶಿಯವರು ಇರಬೇಕಾಗಿದ್ದುದು ಬಹಳ ಮುಖ್ಯ. ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿಯವರು ಇರಬೇಕಾದುದು ಬಹಳ ಮುಖ್ಯ. ಮುಖ್ಯ ಮಂತ್ರಿಗಳು ಇರಬೇಕಾದುದಂತೂ ತೀರಾ ಮುಖ್ಯ. ನೀರಾವರಿ ಸಚಿವರು ಇದ್ದಾರೆ, ಅವರ ಬಗ್ಗೆ ನಾನು ಮಾತನಾಡುವುದಿಲ್ಲ. ಇವರಿಬ್ಬರೂ ಮುಖ್ಯ ಕಾರ್ಯದರ್ಶಿಗಳು ಬಹಳ ಪ್ರಮುಖವಾದಂತಹ ವಿಚಾರ ಚರ್ಚೆ ಆಗುವಾಗ ಇವರು ಯಾರೂ ಇಲ್ಲ ಎಂದರೆ ಏನು ಇದರ ಉದ್ದೇಶ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ಚರ್ಚೆ ನಿಲ್ಲಿಸಿ ಇದರ ಬಗ್ಗೆ ಒಟ್ಟಿಗೆ ಡಿಮಾಂಡ್ ಮಾಡಿದರೆ ಸ್ಪಷ್ಟವಾಗುತ್ತದೆ. ಒಂದು ಈ ಸರ್ಕಾರಕ್ಕೆ ಇರುವ ಬೇಜವಾಬ್ದಾರಿ, ಮುಂದಿನ ಬೆಂಚ್‌ನಲ್ಲಿರಬೇಕಾದ ಯಾವುದೇ ಮಂತ್ರಿಗಳು ಇಲ್ಲದೆ ಇರುವ ಸಂದರ್ಭದಲ್ಲಿ ಇವತ್ತು ನಾವು ಇದನ್ನು ಪ್ರೆಸ್ ಮಾಡೋಣ. ಈ ಸರ್ಕಾರದ ಬೇಜವಾಬ್ದಾರಿತನ ನಾಡಿನ ಜನರಿಗೆ, ಈ ದೇಶದ ಜನರಿಗೆ ಗೊತ್ತಾಗಲಿ, ಇವತ್ತು ಚೀಫ್ ಸೆಕ್ರೆಟರಿ ಇಲ್ಲ, ಚೀಫ್ ಮಿನಿಸ್ಟರ್ ಇಲ್ಲ ಎಂದರೆ ನಾವು ಚರ್ಚೆ ಮಾಡುವ ಅಗತ್ಯ ಏನಿದೆ, ಜಗತ್ತಿಗೆ ಗೊತ್ತಾಗಲಿ, ಇವತ್ತು ಎಷ್ಟು ಜವಾಬ್ದಾರಿಯುತವಾದ ಸರ್ಕಾರ ಇಲ್ಲಿ ಅಧಿಕಾರ ನಡೆಸುತ್ತಿದೆ ಎಂದು. ನಾವು ಹೇಳಿದರೆ ನಿಮ್ಮ ಮರ್ಯಾದೆ ಏನಾಗಬಹುದು, ತಾವು ಒಂದು ಕ್ಷಣ ಯೋಜನೆ ಮಾಡಿ ನೋಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಜಿಗಜಿಣಗಿಯವರು ಹೇಳುತ್ತಾರೆ, ನೀವು ಒಂದು ಹಗ್ಗ

ಕೊಟ್ಟು ಬಿಡಿ ನಾವು ಕಟ್ಟಿಕೊಂಡು ಕುಳಿತಿರುತ್ತೇವೆಂದು. ನಿಮಗೆ ಕೊಟ್ಟಿರುವ ಸೀಟ್ ಅಲ್ಲಿದೆ, ನೀವು ಏಕೆ ಅಲ್ಲಿ ಹೋಗಿದ್ದೀರಿ......

(ಗೊಂದಲ)

ಉಪಾಧ್ಯಕ್ಷರು:- ಮೊಯಿಲಿಯವರು ಮಾತು ಮುಂದುವರಿಸಲಿ.

ಶ್ರೀ ಕೆ.ಎನ್.ನಾಗೇಗೌಡ:- ಪ್ರಾರಂಭದಲ್ಲಿ ನಮ್ಮ ಸ್ಪೀಕರ್ ಆರ್ಡರ್ ಮಾಡಿದ್ದಾರೆ. ಕೊಟ್ಟಿರತಕ್ಕಂತಹ ನಿಯಮಾವಳಿಯ ಬಗ್ಗೆ ಪ್ರಿಲಿಮಿನರಿ ಚರ್ಚೆಯಾಗುತ್ತಿದೆ ಎಂದು ಹೇಳಿದ್ದಾರೆ. ಚರ್ಚೆಗೆ ಅವರು ಕೊಟ್ಟಿರತಕ್ಕಂತಹ ನೋಟೀಸ್ ಅಡ್ಮಿಟ್ ಆಗಲಿ. ಆಗ ಸೆಕ್ರೆಟರಿ, ಚೀಫ್ ಸೆಕ್ರೆಟರಿ ಎಲ್ಲಾ ಕರೆದುಕೊಂಡು ಬರೋಣ. ನಮ್ಮ ಅಭ್ಯಂತರವಿಲ್ಲ. ನಾವು ಪ್ರತಿಯೊಂದು ಪಾಯಿಂಟ್ ನೋಟ್ ಮಾಡುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೌಸ್ ಮಿಸ್‌ಲೀಡ್ ಮಾಡಿದ್ದೀರಿ ಎಂದು ನಾನು ಒಂದು ನಿರ್ಣಯ ಮಂಡನೆ ಮಾಡುತ್ತೇನೆ.

SRI K.N.NAGEGOWDA:- You have got all the right to do so.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ತಕ್ಷಣ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ:- ತಾವು ಏನು ನೋಟೀಸ್ ಕೊಟ್ಟಿದ್ದೀರಿ ಆ ನೋಟಿಸ್ ಅಡ್ಮಿಟ್ ಆಗಿಲ್ಲ. ಅಂದರೆ ನಾವು ಚರ್ಚೆಗೆ ತೆಗೆದುಕೊಂಡಾಗ ಸಂಪೂರ್ಣವಾಗಿ ಎಲ್ಲರಿಗೂ ಕರೆದುಕೊಂಡು ಬರುತ್ತೇವೆ.

ಉಪಾಧ್ಯಕ್ಷರು:- ಮೊಯಿಲಿಯವರು ತಮ್ಮ ಮಾತನ್ನು ಮುಂದುವರೆಸಲಿ. ಅವರು ತಮ್ಮ ಮಾತನ್ನು ಮುಂದುವರೆಸಿದ ನಂತರ.....

ಶ್ರೀ ವಾಟಾಳ್ ನಾಗರಾಜ್:- ಅವರು ಮಾತನಾಡುವಾಗ ನಾವು ನಮ್ಮ ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ಈ ನಿರ್ಣಯದ ಬಗ್ಗೆ ಚರ್ಚೆ ಮಾಡುವಾಗ ಮುಖ್ಯ ಕಾರ್ಯದರ್ಶಿ ಇಲ್ಲ, ಮುಖ್ಯಮಂತ್ರಿಗಳು ಇಲ್ಲ, ಅವರು ಈಗ ಬಂದರು ಅದರ ಬಗ್ಗೆ ಏನೂ ಇಲ್ಲ.

ಶ್ರೀ ಕೆ.ಎನ್.ನಾಗೇಗೌಡ:- ಸ್ಪೀಕರ್ ಬರುತ್ತಿದ್ದಾರೆ, ಮೋಷನ್ ಅಡ್ಮಿಟ್ ಮಾಡಲಿ ನಂತರ ನೋಡೋಣ.

(ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:- ಸನ್ಮಾನ್ಯ ನಾಗೇಗೌಡರು, whether it is admitted or preliminary submissions, the Chief Secretary should be

present. There cannot be any excuse. ಗಂಭೀರವಾಗಿ ವಿಚಾರ ಚರ್ಚೆ ಮಾಡುವಾಗ all responsible officers should be present in the House...

ಶ್ರೀ ವಾಟಾಳ್ ನಾಗರಾಜ್:- ಚರ್ಚೆ ನಾಳೆ ಮಾಡೋಣ, ಅವರು ಬರಲಿ, ಮುಖ್ಯಮಂತ್ರಿಗಳು ಈಗ ತಾನೇ ದಯಮಾಡಿಸಿದರು, ಅವರಿಗೆ ಏನು ಕಾರ್ಯಕ್ರಮ ಗಳಿದ್ದವೋ ಆದರೆ ಮುಖ್ಯ ಕಾರ್ಯದರ್ಶಿಗಳು, ನ್ಯಾಯಾಂಗ ಇಲಾಖೆಯ ಕಾಯರದರ್ಶಿಗಳು ಇರಬೇಕಾಗಿತ್ತು.

ಅಧ್ಯಕ್ಷರು:- ನಾನು ಹೇಳುವುದಕ್ಕೆ ಬಂದೆ ಇಲ್ಲದಿದ್ದರೆ ಆರುವರೆ ಗಂಟೆಯವರೆಗೆ ಮುಂದಕ್ಕೆ ಹಾಕಬಹುದಾಗಿತ್ತು, ಉಪಾಧ್ಯಕ್ಷರಿಂದ ಮಾಡಿಸೋಣ ಎಂದು ಅಂದುಕೊಂಡೆ. ಸನ್ಮಾನ್ಯ ನೀರಾವರಿ ಸಚಿವರು ಹೇಳಿದ್ದುದು ಕೇಳಿಸಿಕೊಂಡು ನಾನು ಅದಕ್ಕೆ ವಿಚಾರ ಸ್ಪಷ್ಟಪಡಿಸೋಣ ಎಂದು ಬಂದೆ. ಅಡ್ಮಿಟ್ ಆಗಿದೆಯೋ ಇಲ್ಲವೋ, ಅದು ಬೇರೆ ಪ್ರಶ್ನೆ. ಅದನ್ನು ನಾವು ಆ ಮೇಲೆ ಚರ್ಚೆ ಮಾಡೋಣ. ಅದನ್ನು ಬಹಳ ದೊಡ್ಡದಾಗಿ ಮಾಡಬೇಕಾಗಿಲ್ಲ. ಆಫೀಸರ್ಸ್ ಇಲ್ಲಿ ಇರಬೇಕಾದ ಅಗತ್ಯ ಇತ್ತು.

(ಗೊಂದಲ)

ಅಧ್ಯಕ್ಷರು:- ಈಗ ಸಭೆಯು ಮುಕ್ತಾಯವಾಗಿ 11.00ಗಂಟೆಗೆ ಸೇರುವುದು.

(ಸದನವು ಸಾಯಂಕಾಲ 6.20ಕ್ಕೆ ಮುಕ್ತಾಯಗೊಂಡು ಪುನಃ 11.7.96ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತಿದೆ)